# ಐಕ್ಯರಂಗ

ಸಂಪುಟ 19 ಸಂಚಿಕೆ 49

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಡಿಸೆಂಬರ್ 1-7 1997 ಬೆಲೆ ರೂ. 2.00




# ಮತ್ತೊಂದು ಚುನಾವಣೆ ಹೇರುತ್ತಿರುವ ಕಾಂಗ್ರೆಸ್(ಐ)ನ ವಂಚಕ ರಾಜಕೀಯ

## ವಿಶ್ವಾಸ ಘಾತದ ಈ ಪರಿ

**ನವೆಂಬರ್ 17**

ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನ, ಜೈನ್ ಆಯೋಗದ ಮಧ್ಯಂತರ ವರದಿಯನ್ನು ಮುಂದಿಡುರುವುದಾಗಿ ಸರ್ಕಾರ ಹೇಳಿದ್ದರೂ ಡಿ.ಎಂ.ಕೆ. ಮತ್ತು ವಿ.ಪಿ.ಸಿಂಗ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್ ಸಂಸದೀಯ ಪಕ್ಷದ ಒತ್ತಾಯ.

**ನವೆಂಬರ್ 18**

ಜೈನ್ ಆಯೋಗದ ವರದಿಯ ನೆಪಮಾಡಿ ಸರ್ಕಾರಕ್ಕೆ ಬೆಂಬಲ ಹಿಂತೆಗೆದು ಕೊಳ್ಳಬೇಕೆಂದು ಕಾಂಗ್ರೆಸ್ ಸದಸ್ಯರ ಒತ್ತಡ. ಆದರೆ ಅರ್ಥ ಪೂರ್ಣ ಮಾಹಿತಿಭರಿತ ಚರ್ಚೆ ನಡೆಸಬೇಕೆಂದು ಕಾಂಗ್ರೆಸ್ ವಕ್ತಾರ ಗಾಡ್ಗೀಳ್.

**ನವೆಂಬರ್ 19**

ಡಿ.ಎಂ.ಕೆ ಯನ್ನು ರಂಗದಿಂದ ಕೈ ಬಿಡಬೇಕೆಂದು ಕಾಂಗ್ರೆಸ್ ಆಗ್ರಹ. ಸಂಯುಕ್ತರಂಗದ ನಕಾರ.

**ನವೆಂಬರ್ 20**

ಡಿ.ಎಂ.ಕೆ ಮಂತ್ರಿಗಳನ್ನು ಮಂತ್ರಿ ಮಂಡಲದಿಂದ ಕೈಬಿಡಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಒತ್ತಾಯ. ಇಲ್ಲವಾದರೆ ಬೆಂಬಲ ಮುಂದುವರಿಸಲು ಸಾಧ್ಯವಾಗಲಿಕ್ಕಿಲ್ಲ ಎಂದು ಪ್ರಧಾನಿ ಮಂತ್ರಿಗಳಿಗೆ ಕಾಂಗ್ರೆಸ್ ಅಧ್ಯಕ್ಷರ ಪತ್ರ. ಸಂಸತ್ತಿನಲ್ಲಿ ಜೈನ್ ಆಯೋಗ ಮಧ್ಯಂತರ ವರದಿ ಮತ್ತು ಸರ್ಕಾರದ ಕ್ರಮ ಕೈಗೊಂಡ ವರದಿ ಮಂಡನೆ-ಕಾಂಗ್ರೆಸ್ ಸದಸ್ಯರ ಗಲಭೆ ಅಡಚಣೆಗಳಿಂದ ಸಭೆ ಮುಂದೂಡಿಕೆ.

**ನವೆಂಬರ್ 21**

ಡಿಎಂಕೆ ಯನ್ನು ಹೊರಗಿಡಲು ಸಾಧ್ಯವಿಲ್ಲವೆಂದು ಸಂಯುಕ್ತ ರಂಗದ ಸ್ಪಷ್ಟನೆ. ಅಧಿಕೃತವಾಗಿ ತನಗೆ ತನಗೆ ಪತ್ರ ತಲುಪಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷರು. ಸಂಸ್ಥತ್ತಿನಲ್ಲಿ ಚರ್ಚೆ ನಡೆಸಲು ಕಾಂಗ್ರೆಸ್ ಸದಸ್ಯರಿಂದ ಅಡ್ಡಿ ಮುಂದುವರಿಕೆ . ಡಿ.ಎಂ.ಕೆ ಬಗ್ಗೆ ಕಾಂಗ್ರೆಸ್ ಆಗ್ರಹ ಆಧಾರಹೀನ ಮತ್ತು ದುರುದ್ದೇಶ ಪೂರಿತ ಎಂದು ಸಿಪಿಐ(ಎಂ) ಖಂಡನೆ.

**ನವೆಂಬರ್ 22**

ಕಾಂಗ್ರೆಸ್ ಬೆದರಿಕೆಗೆ ಮಣಿಯದೆ ಲೋಕಸಭೆಯನ್ನು ವಿಸರ್ಜಿಸಿ ಹೊಸ ಚುನಾವಣೆ ನಡೆಸಲು ಎಡಪಕ್ಷಗಳ ಆಗ್ರಹ. ಲೋಕಸಭೆಯ ವಿಸರ್ಜನೆಯಲ್ಲದೆ ಬೇರೆ ದಾರಿಯಿಲ್ಲ ಎಂದು ಬಿಜೆಪಿ ಅಧ್ಯಕ್ಷ ಅಡ್ವಾಣಿ.

**ನವೆಂಬರ್ 24**

ಡಿಎಂಕೆ ಮಂತ್ರಿಗಳನ್ನು ಕೈ ಬಿಡಬೇಕೆಂಬ ಆಗ್ರಹವನ್ನು ತಿರಸ್ಕರಿಸಿ ಕಾಂಗ್ರೆಸ್ ಅಧ್ಯಕ್ಷರಿಗೆ ಪತ್ರ. ಬೇಸತ್ತ ಲೋಕಸಭಾಧ್ಯಕ್ಷರಿಂದ ಕಾಂಗ್ರೆಸ್ ಸದಸ್ಯರ ಅಸಹನೀಯ ವರ್ತನೆಯ ಟೀಕೆ. ಲೋಕಸಭೆ ಅಧಿವೇಶನ ಅನಿರ್ದಿಷ್ಟ ಕಾಲದ ಮುಂದೂಡಿಕೆ.

ಲೋಕಸಭೆಯನ್ನು ವಿಸರ್ಜಿಸಿ, ರಾಜಕೀಯ ಬಿಕ್ಕಟ್ಟಿಗೆ ಬೇರೆ ಪರಿಹಾರವಿಲ್ಲವೆಂದು ಮತ್ತೆ ಎಡ ಪಕ್ಷಗಳ ಒತ್ತಾಯ. ಬಿಜೆಪಿ ಅಧ್ಯಕ್ಷರದ್ದು ಅದೇ ಅಭಿಪ್ರಾಯ.

**ನವೆಂಬರ್ 25**

ಪ್ರಧಾನ ಮಂತ್ರಿಗಳ ಪತ್ರಕ್ಕೆ ಪ್ರತಿಕ್ರಿಯೆ ನೀಡುವಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ವಿಳಂಬ - ನಿರ್ಣಯ ಮುಂದೂಡಿಕೆ. ಮೊದಲ ಬಾರಿ ಸಂಸತ್ ಸದಸ್ಯರಾದವರಲ್ಲಿ ಕೆಲವರು ಮುಖ್ಯವಾಗಿ ಬಿಜೆಪಿ ಸದಸ್ಯರಿಂದ ಲೋಕಸಭೆಯನ್ನು ವಿಸರ್ಜಿಸದಿರಲು ರಾಷ್ಟ್ರಪತಿಗಳಿಗೆ ಮನವಿ. ಕೆಲವು ಕಾಂಗ್ರೆಸ್ ಸದಸ್ಯರೂ ಇದರಲ್ಲಿ ಶಾಮೀಲು. ಆದರೆ ಸಂಯುಕ್ತ ರಂಗ ಮಿತ್ರಪಕ್ಷಗಳ ಶಾಮೀಲು ಇಲ್ಲ.

**ನವೆಂಬರ್ 26**

ಭಿನ್ನಾಭಿಪ್ರಾಯಗಳಿಂದಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸಾಧ್ಯವಾಗಲಿಲ್ಲ. ಪ್ರಧಾವಿ ಪತ್ರ ಬರಲಿಲ್ಲ ಬರಲಿಲ್ಲ ಎನ್ನುತ್ತಿದ್ದ ಪಕ್ಷದ ವಕ್ತಾರರು ಈಗ ಮೌನ. ಸಂಧಾನ ಸೂತ್ರಗಳ ತಡಕಾಟ. ಬಿಜೆಪಿ ಮುಖಂಡರಿಂದ ದನಿ ಬದಲು-ಲೋಕಸಭೆಯನ್ನು ಆತುರದಿಂದ ವಿಸರ್ಜಿಸರಿದರಲು ರಾಷ್ಟ್ರಪತಿಗಳ ಆಗ್ರಹ.

**ನವೆಂಬರ್ 27**

ಡಿಎಂಕೆ ಮಂತ್ರಿಗಳನ್ನು ಕೈ ಬಿಟ್ಟರೆ ರಾಜಕೀಯ ಬಿಕ್ಕಟ್ಟು ಪರಿಹರಿಸಲು ಮಾತುಕತೆ ಎಂದು ಕಾಂಗ್ರೆಸ್ ಅಧ್ಯಕ್ಷರ ಇನ್ನೊಂದು ಪತ್ರ. ಸಂಯುಕ್ತ ರಂಗದಿಂದ ಮತ್ತೊಮ್ಮೆ ಇದಕ್ಕೆ ತಿರಸ್ಕಾರ. ಮಧ್ಯರಾತ್ರಿ ವೇಳೆಗೆ ಪ್ರತ್ಯುತ್ತರ. ಜಾತ್ಯಾತೀತತೆಯನ್ನು ರಕ್ಷಿಸುವ ನಿಲುವಿಗೆ ಕಾಂಗ್ರೆಸ್ ಬದ್ಧವಾಗಿರುತ್ತದೆ ಎಂಬ ಆಶಯ.

**ನವೆಂಬರ್ 28**

ದಿನವಿಡೀ ಸಮಾಲೋಚನೆ ಚರ್ಚೆಗಳ ನಂತರ ಸಂಯುಕ್ತ ರಂಗ ಸರ್ಕಾರಕ್ಕೆ ನೀಡಿದ ಬೆಂಬಲ ಹಿಂತೆಗೆದುಕೊಂಡಿರುವುದಾಗಿ ರಾಷ್ಟ್ರಪತಿಗಳಿಗೆ ಕಾಂಗ್ರೆಸ್ ಪತ್ರ. ಗುಜ್ರಾಲ್ ಸರ್ಕಾರದ ರಾಜಿನಾಮೆ.

ತಾನು ಸರ್ಕಾರ ರಚಿಸುವುದಾಗಿ ಕಾಂಗ್ರೆಸ್ ದಾವೆ. ತಾವು ಬಿಜೆಪಿ ಅಥವಾ ಕಾಂಗ್ರೆಸ್ ನೇತೃತ್ವದ ಸರಕಾರಗಳಿಗೆ ಬೆಂಬಲ ನೀಡುವುದಿಲ್ಲ ವೆಂದು ಸಂಯುಕ್ತ ರಂಗದ ಅಂಗಪಕ್ಷಗಳಿಂದ ರಾಷ್ಟ್ರಪತಿಗಳಿಗೆ ಪತ್ರ. ○

---

**ಸಂಯುಕ್ತರಂಗ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಕಾಂಗ್ರೆಸ್ (ಐ) ಹಿಂತೆಗೆದುಕೊಂಡು, ಪ್ರಧಾನ ಮಂತ್ರಿ ಗುಜ್ರಾಲ್ ಮತ್ತು ಅವರ ಮಂತ್ರಿ ಮಂಡಲ ರಾಜೀನಾಮೆ ನೀಡುವಂತಾಗಿದೆ. ದೇಶ ಎದುರಿಸುತ್ತಿರುವ ಗಂಭೀರ ಆರ್ಥಿಕ, ರಾಜಕೀಯ ಸಮಸ್ಯೆಗಳ ಪರಿವೆಯೇ ಇಲ್ಲದೆ ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಸೃಷ್ಟಿಸಿದೆ. ೫ ವರ್ಷಗಳ ಹಿಂದೆ ಬಾಬ್ರಿ ಮಸೀದಿಯನ್ನು ಒಡೆದ ಕೋಮುವಾದಿ ಶಕ್ತಿಗಳು ವಿಹೆಚ್‌ಪಿಯ ನೇತೃತ್ವದಲ್ಲಿ ಅಯೋಧ್ಯೆಯಲ್ಲಿ ಆಧ್ವಂಸಕ್ಕೆ ಕಾಣಿಕೆ ನೀಡಿದವರನ್ನು ಸನ್ಮಾನಿಸಲು ಕರಸೇವಕರನ್ನು ಒಟ್ಟು ಸೇರಿಸುವ ಯೋಜನೆ ಹಾಕಿಕೊಂಡು ದೇಶದ ಸಮಗ್ರತೆಗೆ ಗಂಭೀರ ಸವಾಲೊಡ್ಡಿರುವಾಗ ಅದರ ಚಿಂತೆಯೇ ಇಲ್ಲದೆ ಜೈನ್ ವರದಿಯ ಬಗ್ಗೆ ಅನಗತ್ಯ ಗಲಭೆ ಎಬ್ಬಿಸಿದೆ, ಉತ್ತರ ಪ್ರದೇಶದಲ್ಲಿ ಬಿಜೆಪಿ ಅತ್ಯಂತ ನೀತಿಬಾಹಿರ ವಿಧಾನಗಳನ್ನು ಬಳಸಿ ಬಹುಮತ ಸಾಬೀತು ಮಾಡಿರುವ ತೀರಾ ಇತ್ತೀಚಿನ ಅನುಭವವನ್ನು ಸಂಪೂರ್ಣ ಮರೆತು ಅದೀಗ ತಾನೇ ಸರ್ಕಾರ ರಚಿಸುವ ಹಾಸ್ಯಾಸ್ಪದ ದಾವೆಯನ್ನು ಮುಂದಿಟ್ಟಿದೆ. ವಾಸ್ತವವಾಗಿ ಕಾಂಗ್ರೆಸ್ಸಿಗರಿಗೆ ಮಾಜೀ ಪ್ರಧಾನಿ ರಾಜೀವ್ ಗಾಂಧಿಯವರ ಹಂತಕರನ್ನು ಶಿಕ್ಷಿಸುವುದು ಬೇಕಾಗಿರಲಿಲ್ಲ. ಹೇಗಾದರೂ ಮಾಡಿ ಅಧಿಕಾರಕ್ಕೆ ಬರುವುದೇ ಅವರ ಮುಖ್ಯ ಉದ್ದೇಶವಾಗಿದೆ ಎಂಬುದು ಇದರಿಂದ ಜಗಜ್ಜಾಹೀರಾಗಿದೆ ಎಂದು ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಹರ್ ಕಿಶನ್ ಸಿಂಗ್ ಸುರ್ಜಿತ್ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೇಳಿದ್ದಾರೆ.**

ಜೈನ್ ಆಯೋಗದ ಮಧ್ಯಂತರ ವರದಿಯ ಕೆಲವು ಅಂಶಗಳು ಪತ್ರಿಕೆಗಳಲ್ಲಿ ಬಂದಾಗ ಅವನ್ನು ಸರಿಯಾಗಿ ನೋಡದೇ, ಪರೀಕ್ಷಿಸದೇ ಅವಸರದ ತೀರ್ಮಾನಕ್ಕೆ ಬಂದು, ಆ ತೀರ್ಮಾನಗಳನ್ನು ಸಂಯುಕ್ತರಂಗ ಸರ್ಕಾರದ ಮೇಲೆ ಹೇರುವ ಪ್ರಯತ್ನ ವನ್ನು ಕಾಂಗ್ರೆಸ್ ನಡೆಸಿತು. ಸಂಸತ್ತಿನ ಎರಡೂ ಸದನಗಳು ನವೆಂಬರ್ ೧೯ ರಂದು ಸಭೆ ಸೇರುವುದಿತ್ತು. ಇದರ ಮೊದಲು ಜೈನ್ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಬೇಕು ಎಂದು ಒತ್ತಾಯಿಸುತ್ತಿದ್ದ ಕಾಂಗ್ರೆಸ್ ಮಂದಿ ಅದನ್ನು ಮೊದಲ ದಿನವೇ ಮಂಡಿಸಿದಾಗ ಎರಡೂ ಸದನಗಳ ಕಲಾಪಗಳಿಗೆ ಅಡ್ಡಿಯೊಡ್ಡಿದರು. ಬೇಸತ್ತ ಅವರ ಪಕ್ಷದಿಂದಲೇ ಚುನಾಯಿತರಾದ ಲೋಕಸಭಾಧ್ಯಕ್ಷರು ಸದನವನ್ನು ಅನಿರ್ದಿಷ್ಟಕಾಲದವರೆಗೆ ಮುಂದೂಡಬೇಕಾಗಿ ಬಂತು ಎಂಬುದು ಕಾಂಗ್ರೆಸ್ಸಿಗರ ನಿಜ ಉದ್ದೇಶವನ್ನು ಬಿಚ್ಚಿಟ್ಟಿತು. ಡಿಎಂಕೆ ಮಂತ್ರಿಗಳನ್ನು ಕೈ ಬಿಡುವುದಲ್ಲದೆ ಬೇರೆ ಯಾವುದಕ್ಕೂ ಸಿದ್ಧವಿಲ್ಲವೆಂದು ಅವರು ಮೊದಲೇ ನಿರ್ಧರಿಸಿದ್ದರೆ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಬೇಕೆಂದು ಅವರು ಅಷ್ಟೇಕೆ ಕಿರುಚಾಡಬೇಕಿತ್ತು ಎಂದು ಸುರ್ಜಿತ್ ಪ್ರಶ್ನಿಸಿದ್ದಾರೆ.

ಜೈನ್ ಆಯೋಗ ದ ದಪ್ಪನಾದ ಮಧ್ಯಂತರ ವರದಿಯನ್ನು ಅಧ್ಯಯನ ಮಾಡಿದ ಸಂಯುಕ್ತ ರಂಗದ ಪಕ್ಷಗಳು ಕಾಂಗ್ರೆಸ್ ನ ಬೇಡಿಕೆಯನ್ನು ಒಪ್ಪಲು ಯಾವುದೇ ಆಧಾರವಿಲ್ಲ, ಕಾಂಗ್ರೆಸ್ ಒತ್ತಾಯ ಅಸಮರ್ಥನೀಯ ಎಂಬ ನಿರ್ಣಯಕ್ಕೆ ಬಂದವು. ಕಾಂಗ್ರೆಸ್ (ಐ) ಬೆಂಬಲ ಹಿಂತೆಗೆದುಕೊಳ್ಳುವ ಬೆದರಿಕೆಗೂ ಮಣಿಯದೇ ದೃಢ ನಿಲುವು ತಳೆದವು. ಕಾಂಗ್ರೆಸ್ ನ ಅಧ್ಯಕ್ಷರ ಬೆದರಿಕೆಗೆ ಪ್ರಧಾನ ಮಂತ್ರಿಗಳ ಪ್ರತ್ಯುತ್ತರ ಮತ್ತು ಕೇಸರಿಯವರ ಪತ್ರ ಅದಕ್ಕೆ ಅಷ್ಟೇ ದೃಢವಾದ ಪ್ರತ್ಯುತ್ತರ ಅದರ ಪರಿಣಾಮ, ಇವೆಲ್ಲಾ ಈಗ ಎಲ್ಲರಿಗೂ ತಿಳಿದಿರುವ ಸಂಗತಿ.

ಜನಗಳಲ್ಲಿ ಉತ್ಸಾಹ, ಸ್ಫೂರ್ತಿ ತುಂಬುವ ಯಾವುದೇ ಕಾರ್ಯಕ್ರಮಗಳಿಲ್ಲದ ಕಾಂಗ್ರೆಸ್ ಪಕ್ಷ ಜನಗಳನ್ನು ತನ್ನತ್ತ ಸೆಳೆಯಲು ಜೈನ್ ಆಯೋಗದ ವರದಿಯನ್ನು ಬಳಸಿಕೊಳ್ಳಲು ವಾಸ್ತವ ಸಂಗತಿಗಳನ್ನು ವಿಕೃತಗೊಳಿಸಲು ಪ್ರಯತ್ನಿಸುತ್ತಿದೆ. ಈ ಮೂಲಕ ಮತ್ತೆ ಜನಗಳಲ್ಲಿ ಸಹಾನುಭೂತಿಯ ಭಾವನೆಯನ್ನು ಉಂಟುಮಾಡಿ ಅದರ ಅಲೆಯ ಮೇಲೆ ಮತ್ತೆ ಅಧಿಕಾರಕ್ಕೆ ಬರಬೇಕೆಂಬುದು ಈ ಕಾಂಗ್ರೆಸ್ ಮುಖಂಡರ ಕನಸಿರಬೇಕು. ಆದರೆ ಈಗಾಗಲೇ 1991 ರ ಚುನಾವಣೆಗಳ ಎರಡನೇ ಘಟ್ಟದಲ್ಲಿ ರಾಜೀವ್ ಗಾಂಧಿಯ ಹತ್ಯೆಯ ಲಾಭವನ್ನು ತಾನು ಪಡೆದಾಗಿದೆ, ಅದೀಗ ಕಳೆದು ಹೋದ ಸಂಗತಿ ಎಂಬುದನ್ನು ಈ ಮುಖಂಡರು ಮರೆತಂತಿದೆ ಎಂದು ಸುರ್ಜಿತ್ ವ್ಯಂಗ್ಯವಾಡಿದ್ದಾರೆ.

ಈಗ ಇಲ್ಲಿ ಬಿಜೆಪಿಯ ಹಂಚಿಕೆ ಸ್ಪಷ್ಟ. ಒಮ್ಮೆ ಮಧ್ಯಂತರ ಚುನಾವಣೆಯ ಬಗ್ಗೆ ಮಾತನಾಡುತ್ತಾ ಇನ್ನೊಂದೆಡೆ "ಪರ್ಯಾಯ ಸರ್ಕಾರ"ದ ರಾಜಿ ಮಾತು ಮಾಡುತ್ತಾ ಅದು ಉತ್ತರ ಪ್ರದೇಶದ ನಾಚಿಕೆಗೆಟ್ಟ ಪ್ರಯೋಗವನ್ನು ದಿಲ್ಲಿಯಲ್ಲೂ ಪುನರಾವರ್ತಿಸಲು ತತ್ಪರವಾಗಿದೆ. ಮೊದಲ ಬಾರಿ ಎಂಪಿ ಗಳಾಗಿರುವವರ ಭಯದ ಲಾಭ ಪಡೆಯಲು ಪ್ರಯತ್ನಿಸುತ್ತಿದೆ. ಕಾಂಗ್ರೆಸ್ ನ ಅಧಿಕಾರದ ಆಸೆ ಬಿಜೆಪಿಯಲ್ಲಿ ಅಧಿಕಾರ ಗಿಟ್ಟಿಸುವ ಹೊಸ ಆಸೆ ಮೂಡಿಸಿದರೆ ಕಾಂಗ್ರೆಸ್ಸಿಗರ ಒಂದು ವಿಭಾಗ ತಮ್ಮ ಮುಖಂಡರ ಇಂತಹ ಕಸರತ್ತುಗಳಿಂದ ಪಕ್ಷದ ಪುನರುತ್ಥಾನ ಸಾಧ್ಯವಿಲ್ಲವೆಂದು ಕಳವಳ ವ್ಯಕ್ತಪಡಿಸಿದ್ದಾರೆ.

### ಮುಂದೇನು?

ಉತ್ತರ ಪ್ರದೇಶವನ್ನು ಹೋಲುವ ದೃಶ್ಯ ದೆಹಲಿಯಲ್ಲೂ ಪುನರಾವರ್ತನೆಗೊಳ್ಳುತ್ತದೆಯೇ ಅಥವಾ ರಾಷ್ಟ್ರಪತಿಗಳು ದೇಶದಲ್ಲಿನ ಗಂಭೀರ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು ಹಾಗಾಗುವುದನ್ನು ತಡೆಯುತ್ತಾರೆಯೇ ಎಂದು ಜನ ಕುತೂಹಲದಿಂದ ನೋಡುತ್ತಿದ್ದಾರೆ. ಕಾಂಗ್ರೆಸ್ ತನ್ನ ಸಂಕುಚಿತ ಸ್ವಾರ್ಥ ಸಾಧನೆಗಾಗಿ ದೇಶವನ್ನು ಎಂತಹ ಸ್ಥಿತಿಗೆ ತಳ್ಳಿದೆ ಎಂದರೆ ಹೊಸ ಚುನಾವಣೆಗಳನ್ನು ನಡೆಸುವುದೇ ಉಳಿದಿರುವ ಏಕೈಕ ದಾರಿ. ಇದು ಎಡಪಕ್ಷಗಳು ಪ್ರತಿಪಾದಿಸುತ್ತಿರುವ ದಾರಿ ಎಂದು ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಅವರು ಹೇಳಿದ್ದಾರೆ.

ಜನಗಳ, ದೇಶದ ಗಂಭೀರ ಸಮಸ್ಯೆಗಳನ್ನು ಮರೆತು ಅಧಿಕಾರಕ್ಕಾಗಿ ಪರದಾಡುವವರಿಗೆ ಭಾರತೀಯ ಮತದಾರರು ಸರಿಯಾದ ಪಾಠ ಕಲಿಸಬೇಕಾಗಿದೆ.

## ಮಂಗಳೂರಿನಲ್ಲಿ ಎಕೆಜಿ ಭವನ ಉದ್ಘಾಟನೆ

ದಕ್ಷಿಣ ಕನ್ನಡ ಜಿಲ್ಲೆಯ ದುಡಿಯುವ ವರ್ಗದ ಚಳುವಳಿಯ ಒಂದು ಕವನು ನನಸಾಗಿದೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲೇ ವಿದೇಶಿ ವಸಾಹತುಶಾಹಿ ಶೋಷಣೆಯಿಂದ ಮುಕ್ತಿಯ ಹೋರಾಟದ ಜೊತೆಗೆ ಬಂಡವಾಳಶಾಹೀ-ಭೂಮಾಲಿಕರ ವರ್ಗ ಶೋಷಣೆಯಿಂದ ಮುಕ್ತಿ ಹೋರಾಟವನ್ನು ಬೆಸೆದ ಕಾರ್ಮಿಕ ವರ್ಗದ ಚಳುವಳಿ ಈ ಜಿಲ್ಲೆಯಲ್ಲಿ ಆರಂಭವಾಗಿತ್ತು. ಇದಕ್ಕೆ ನೇತೃತ್ವ ನೀಡಿದ ಕಮ್ಯುನಿಸ್ಟ ಪಕ್ಷ (ನಂತರ ಸಿಪಿಐಎಂ)) ಈಗ ಕಾರ್ಮಿಕರ, ರೈತರ, ನೌಕರರ ಹಾಗೂ ಇತರ ದುಡಿಯುವ ಜನಗಳ ಉದಾರ ಸಹಾಯದಿಂದ ಮಂಗಳೂರಿನಲ್ಲಿ ಸ್ವಂತ ಕಟ್ಟಡವೊಂದನ್ನು ಹೊಂದಿದೆ. ಆರಂಭದಲ್ಲಿ ಈ ಜಿಲ್ಲೆಯಲ್ಲಿ ದುಡಿಯುವ ವರ್ಗದ ಆಂದೋಲನಕ್ಕೆ ಮಾರ್ಗದರ್ಶನ ನೀಡಿದ ಎ ಕೆ ಜಿ ಯವರ ನೆನಪನ್ನು ಹೊತ್ತ ಈ ಕಟ್ಟಡವನ್ನು ಇದೇ ನವೆಂಬರ್ 17ರಂದು ಸಿಪಿಐ(ಎಂ) ಪೋಲೀಟ್ ಬ್ಯೂರೋ ಸದಸ್ಯರಾದ ಕಾಂ. ಪಿ.ರಾಮಚಂದ್ರನ್ ಸರಳ ಸಮಾರಂಭವೊಂದರಲ್ಲಿ ಉದ್ಘಾಟಿಸಿದರು. ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿಗಳಾದ ಪಿ.ರಾಮಚಂದ್ರರಾವ್ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್. ಶ್ರೀಯಾನ್ ಕಾರ್ಯಕ್ರಮ ನಿರ್ವಹಿಸಿದರು. ಹಂಚು ಕಾರ್ಮಿಕರ ಸಂಘಟನೆಯಾದ ಎಸ್.ಕೆ. ಟೈಲ್ ವರ್ಕರ್ಸ್ ಯೂನಿಯನ್ ತನ್ನ ಆವರಣದಲ್ಲಿ ಕೊಡುಗೆಯಾಗಿ ನೀಡಿದ ನಿವೇಶನದಲ್ಲಿ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಈ ಕಟ್ಟಡ ನಿರ್ಮಾಣಗೊಂಡಿದೆ. ○



# ಉ.ಕನ್ನಡ ಜಿಲ್ಲಾ 4ನೇ ಸಮ್ಮೇಳನ

ಸಿಪಿಐ(ಎಂ) ಪಕ್ಷದ ಉತ್ತರ ಕನ್ನಡ ಜಿಲ್ಲಾ 4ನೇ ಜಿಲ್ಲಾ ಸಮ್ಮೇಳನವು ದಾಂಡೇಲಿಯಲ್ಲಿ ಜಿ.ವಿ.ಪವಾರ್ ವೇದಿಕೆ, ಅಂಬೇಡ್ಕರ್ ಭವನದಲ್ಲಿ ನವೆಂಬರ್ 9 ಮತ್ತು 10 ರಂದು ನಡೆಯಿತು. ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಹಿರಿಯ ಕಾರ್ಮಿಕ ಮುಖಂಡ ವಿ.ಜೆ.ಕೆ. ನಾಯರ್ ಇಂದು ಹಣಕಾಸು ಬಂಡವಾಳಗಾರರು ಜೂಜು ಬಂಡವಾಳಗಾರರು ದೇಶದ ಹೆಚ್ಚಿನ ಸಾರ್ವಜನಿಕ ಉದಿಮೆಗಳನ್ನು ಖಾಸಗೀಕರಣ ಮಾಡಲು ಪ್ರಚೋದಿಸುತ್ತಿದ್ದು ರಾಷ್ಟ್ರದಲ್ಲಿ ಆಡಳಿತ ಮಾಡುವವರು ಬಂಡವಾಳಗಾರರ ಪ್ರತಿನಿಧಿಗಳೇ ಆಗಿದ್ದು ಇಂದು ರಾಷ್ಟ್ರೀಕರಣ ಎಂದರೆ ಬಂಡವಾಳಶಾಹಿಗಳ ರಾಷ್ಟ್ರೀಕರಣ. ವರಮಾನ, ಉದ್ಯೋಗ, ಸಂಪತ್ತು ಮತ್ತು ಜೀವನ ಮಟ್ಟವನ್ನು ಹೆಚ್ಚಿಸದ ಇಂದಿನ ನೂತನ ಆರ್ಥಿಕ ವ್ಯವಸ್ಥೆ ಹಿಂದಿನ ವ್ಯವಸ್ಥೆಗಳಿಗಿಂತಲೂ ತೀವ್ರ ಅಪಾಯಕಾರಿಯಾಗಿದೆ ಎಂದರು.

ಸ್ವದೇಶಿ ಮಂತ್ರವನ್ನು ಜಪಿಸುತ್ತಿರುವ ಆರ್.ಎಸ್.ಎಸ್. ಮತ್ತು ಬಿ.ಜೆ.ಪಿ.ಗಳು ಖಾಸಗೀಕರಣಕ್ಕೆ ಮುಕ್ತ ಅವಕಾಶ ನೀಡುವ ನೀತಿಯಿಂದ ಆರ್ಥಿಕ ಗುಲಾಮಗಿರಿಗೆ ಅವಕಾಶ ನೀಡುತ್ತಿದೆ ಎಂದರು.

**ನೂತನ ಜಿಲ್ಲಾ ಸಮಿತಿ**

ಕಾರ್ಯದರ್ಶಿಯಾಗಿ ಟಿ.ಎಸ್.ನಾಯ್ಕ ಪುನರ್ ಆಯ್ಕೆಗೊಂಡರು. ಕಾರ್ಯದರ್ಶಿ ಮಂಡಳಿ : ಟಿ.ಎಸ್.ನಾಯ್ಕ, ಶಾಂತಾರಾಮ ನಾಯಕ ಮತ್ತು ಮಂಜುನಾಥ ಪುಲಕರ ಆಯ್ಕೆಗೊಂಡರು. ಸಮಿತಿ ಸದಸ್ಯರುಗಳಾಗಿ ಪಿ.ಜಿ.ಮಶಾಲ್ಕರ್, ಸಿ.ಆರ್.ಶಾನ್‌ಭಾಗ, ತಿಲಕ್ ಗೌಡ, ಸುಭಾಶ ಕೊಪ್ಪಿಕರ, ಎಂ.ಜಿ.ನಾಯಕ, ಭೀಮರಾವ ಜೆರಟಗಿ, ಮಾಧವ ಕೇರಿಗಾರ ಮತ್ತು ನಿಸರ್ಗ ಇವರುಗಳು ಆಯ್ಕೆಗೊಂಡರು.

ಖಾಸಗೀಕರಣ ನೀತಿಯನ್ನು ಕೈ ಬಿಡದೆ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಿಲ್ಲ. ದೇಶದ ಸ್ವಾವಲಂಬನೆಯನ್ನು ಕಾಪಾಡದೇ ದೇಶದ ಪ್ರಗತಿಯನ್ನು ಮಾಡಲಾಗದು ಎನ್ನುವುದು ಸಿಪಿಐ(ಎಂ) ನಿಲುವಾಗಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿಯವರು ಮಾತನಾಡುತ್ತಾ ಉದ್ಯೋಗವಕಾಶವನ್ನು ಕಡಿಮೆ ಮಾಡಿ ಅಭಿವೃದ್ಧಿ ಮಾಡುತ್ತೇವೆ ಎನ್ನುವ, ಉದ್ಯೋಗ ರಹಿತ ಅಭಿವೃದ್ಧಿಯ ಅಪಾಯಗಳನ್ನು ವಿವರಿಸಿದರು. ಜಾಗತೀಕರಣ ಮತ್ತು ಖಾಸಗೀಕರಣದ ಹೆಸರಿನಲ್ಲಿ ದಟ್ಟವಾಗುತ್ತಿರುವ ದುಡಿಯುವ ವರ್ಗಗಳ ಶೋಷಣೆಯನ್ನು ಪ್ರತಿಭಟಿಸಲು ಎಡಪಂಥೀಯ ಹೋರಾಟವನ್ನು ಬಲಪಡಿಸಬೇಕಾದುದು ಅಗತ್ಯವೆಂದು ನುಡಿದರು.

ರಾಜ್ಯದಲ್ಲಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಜನತಾದಳದ ಅಸಮರ್ಥ ಆಡಳಿತ, ಆಂತರಿಕ ಕಚ್ಚಾಟದ ಪರಾಕಾಷ್ಠೆಯೇ ಬಿ.ಜೆ.ಪಿ. ಬಾಲ ಬಿಚ್ಚಲು ಕಾರಣವಾಗಿದೆ ಎಂದರು. ರಾಜ್ಯದಲ್ಲಿ ಬರಗಾಲ ಬಂದರೂ ಬರ ಕಾಮಗಾರಿಗಳೂ ನಡೆಯುತ್ತಿಲ್ಲ. ದಾಂಡೇಲಿಯ ಇಂಡಿಯನ್ ಪ್ಲೈವುಡ್ ಕಾರ್ಖಾನೆ ಮುಚ್ಚಿ 3 ವರ್ಷವಾಗುತ್ತ ಬಂದಿದೆ. ಇಲ್ಲಿಯ ಕಾರ್ಮಿಕರ ಪರಿಸ್ಥಿತಿ ಏನು ಅದಕ್ಕೆ ಪರಿಹಾರ ಕಲ್ಪಿಸುವ ಪ್ರಯತ್ನ ಏನು ಮಾಡಬೇಕು? ಕೈಗಾರಿಕಾ ಸಚಿವರು ಇಲ್ಲಿಯವರೆಗೂ ಅದರ ಗೋಜಿಗೆ ಹೋಗಿಲ್ಲ ಎಂದರು.


ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸಮಿತಿ ಕಾರ್ಯದರ್ಶಿ ಟಿ.ಎಸ್.ನಾಯ್ಕ ಮಾತನಾಡಿ ಜಿಲ್ಲೆಯ ಜ್ವಲಂತ ಸಮಸ್ಯೆಗಳನ್ನು ಗುರುತಿಸಿ ಪಕ್ಷವು ತಳೆಯಬೇಕಾದ ನಿಲುವುಗಳನ್ನು ಸಮ್ಮೇಳನದಲ್ಲಿ ನಿರ್ಧರಿಸಲಾಗುವುದೆಂದರು.

ಸ್ವಾಗತ ಸಮಿತಿ ಅಧ್ಯಕ್ಷ ಎಸ್.ವಿ. ಸಾವಂತ ಸ್ವಾಗತ ಕೋರಿದರು. ಶಾಂತರಾಮ ನಾಯಕ ಕಾರ್ಯಕ್ರಮ ನಿರ್ವಹಿಸಿದರು. ದಾಂಡೇಲಿ ನಗರ ಸಮಿತಿ ಕಾರ್ಯದರ್ಶಿ ಭೀಮರಾವ್ ಜೇರಟಗಿ ವಂದನಾರ್ಪಣೆ ಮಾಡಿದರು.

2 ದಿನಗಳ ಪ್ರತಿನಿಧಿ ಅಧಿವೇಶನವನ್ನು ಶಾಂತರಾಮ ನಾಯಕ, ತಿಲಕ ಗೌಡ ಮತ್ತು ಎಂ.ಎಚ್.ನಾಯ್ಕರ ಅಧ್ಯಕ್ಷ ಮಂಡಳಿ ನಡೆಸಿಕೊಟ್ಟಿತು. 80 ಪ್ರತಿನಿಧಿಗಳು ಹಾಜರಿದ್ದರು. 22 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು.

2ನೇ ದಿನ ಸಾಯಂಕಾಲ ನಗರದಲ್ಲಿ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಪಕ್ಷದ ಮುಖಂಡರಾದ ವಿ.ಜೆ.ಕೆ.ನಾಯರ್, ನಿತ್ಯಾನಂದ ಸ್ವಾಮಿ, ಸಿ.ಆರ್.ಭಟ್, ಟಿ.ಎಸ್.ನಾಯ್ಕ ಮಾತನಾಡಿದರು.

ಜಿಲ್ಲೆಯ ಅಭಿವೃದ್ಧಿಗಾಗಿ ಒತ್ತಾಯಿಸುವ ಹಾಗೂ ಮುಂದಿನ ಹೋರಾಟದ ಭಾಗವಾಗಿ ಸಮ್ಮೇಳನವು ಹಲವು ನಿರ್ಣಯ ಅಂಗೀಕರಿಸಿತು.



ಜಿಲ್ಲೆಯ ಅಭಿವೃದ್ಧಿಗಾಗಿ ಯೋಜನೆ ರೂಪಿಸಿ ಸುಮಾರು ೭೦ ಸಾವಿರಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವಂತೆ ಮಾಡಬೇಕುದ ಎಂದು ಸಮ್ಮೇಳನದ ಒಂದು ನಿರ್ಣಯ ಒತ್ತಾಯಿಸಿದೆ. ಉತ್ತರ ಕನ್ನಡ ಜಿಲ್ಲೆಯ ಪರಿಸರವನ್ನು ಲಕ್ಷದಲ್ಲಿಟ್ಟು ಅದಕ್ಕೆ ಹಾನಿಯಾಗದ ರೀತಿಯಲ್ಲಿ ಉದ್ದಿಮೆ ಗಳನ್ನು ಸ್ಥಾಪಿಸಬೇಕೆಂದು ಮತ್ತು ಸಮಗ್ರ ಅಭಿವೃದ್ಧಿಗಾಗಿ ಒಂದು ಯೋಜನೆಯನ್ನು ಜಿಲ್ಲೆಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ರೂಪಿಸ ಬೇಕೆಂದು ಆ ನಿರ್ಣಯ ಒತ್ತಾಯಿಸಿದೆ.

ಬೇಡ್ತಿ-ಗಂಗಾವಳಿ ಯೋಜನೆಯ ಸರಿಯಾದ ವಿವರವನ್ನು ಮುಂದಿಟ್ಟು ಸರಕಾರ ಈ ಯೋಜನೆಯ ಲಾಭ-ಹಾನಿ ಬಗ್ಗೆ ಗಮನವಿಟ್ಟು ಜನತೆಯ ಮುಂದೆ ಸಂಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಜಿಲ್ಲಾ ಸಮ್ಮೇಳನ ಒತ್ತಾಯಿಸಿದೆ.

ಪ್ರಥ್ವೀಶ ಹಂಚು ಕಾರ್ಮಿಕರ ಹೋರಾಟಕ್ಕೆ ಕಳೆದ 7 ತಿಂಗಳಿಂದ ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟ ನಿರತ ಪ್ರಥ್ವೀಶ ಹಂಚು ಕಾರ್ಖಾನೆಯ ಬಡ ಕಾರ್ಮಿಕರಿಗೆ ಪಕ್ಷದ ಜಿಲ್ಲಾ ಸಮ್ಮೇಳನ ಸಂಪೂರ್ಣ ಬೆಂಬಲಿಸುವ ನಿರ್ಣಯವನ್ನು ಕೈಗೊಂಡಿತು.

ಸರಕಾರದ ಹೊಸ ಆರ್ಥಿಕ ನೀತಿಯ ಫಲವಾಗಿ 1994 ರಿಂದ ಮುಚ್ಚಲ್ಪಟ್ಟ ಪ್ಲೈವುಡ ಕಾರ್ಖಾನೆಯನ್ನು ಕೂಡಲೇ ಆರಂಭಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಸಮ್ಮೇಳನ ಕೈಗೊಂಡಿತು.

ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಹಾಗೂ ಶಿರಾಲಿ ಗ್ರಾಮ ಪಂಚಾಯತಿ ಸದಸ್ಯ ಸುಭಾಶಕೊಪ್ಪಿಕರ ರವರ ಅಪಹರಣವನ್ನು ಸಮ್ಮೇಳನ ಖಂಡಿಸಿದೆ. ಈಗಲೂ ಪ್ರಾಣ ಬೆದರಿಕೆ ಇರುವುದರಿಂದ ಸರಕಾರ ಅವರಿಗೆ ರಕ್ಷಣೆ ಒದಗಿಸಬೇಕೆಂದು ಒತ್ತಾಯಿಸಿದೆ.

## ಸಿಪಿಐ(ಎಂ) ಸಮ್ಮೇಳನಗಳು



# 10ನೇ ಕೋಲಾರ ಜಿಲ್ಲಾ ಸಮ್ಮೇಳನ

ಕಮ್ಯುನಿಸ್ಟ್ ಚಳುವಳಿಯ ಬೆನ್ನಲಬು ಎಂದೇ ಪ್ರಸಿದ್ಧವಾಗಿರುವ ಕೋಲಾರ ಜಿಲ್ಲೆಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 10ನೇ ಜಿಲ್ಲಾ ಸಮ್ಮೇಳನವು ನವೆಂಬರ್ 13,14, ಮತ್ತು 15 ರಂದು ಕರ್ನಾಟಕದ ಜಲಿಯನ್ ವಾಲಭಾಗ್ (ವಿದುರಾಶ್ವರ್ಥ ಇರುವ) ಎಂದೇ ಇತಿಹಾಸ ಪ್ರಸಿದ್ಧವಾಗಿರುವ ಗೌರಿಬಿದನೂರಿನಲ್ಲಿ ಗೌರಮ್ಮ ವೇದಿಕೆ(1983 ಏಪ್ರಿಲ್ 25 ರಂದು ವಿದುರಾಶ್ವಥದಲ್ಲಿ ಸ್ವಾತಂತ್ರ್ಯ ಚಳುವಳಿಗಾರರ ಮೇಲೆ ಸಾಮ್ರಾಜ್ಯಶಾಹಿ ಬ್ರಿಟಿಷ್ ಪ್ರಭುತ್ವ, ನಡೆಸಿದ ಹತ್ಯಾಕಾಂಡದಲ್ಲಿ 9 ಜನ ಪ್ರಾಣ ತ್ಯಾಗ ಮಾಡಿದರು. ಅದರಲ್ಲಿ ಒಬ್ಬರಾದ ಗರ್ಭಿಣಿ ಗೌರಮ್ಮ) ಯಲ್ಲಿ ಜಿಲ್ಲೆಯ ಪ್ರಬಲ ರಾಜಕೀಯ ಶಕ್ತಿಯತ್ತ ಹೆಜ್ಜೆ ಇಡುವ ಪಣದೊಂದಿಗೆ ಯಶಸ್ವಿಯಾಗಿ ನಡೆಯಿತು.

**ಉದ್ಘಾಟನೆ**

ಹಿರಿಯ ಕಾರ್ಮಿಕ ಮುಖಂಡರೂ, ಮಾಜಿ ಶಾಸಕರು ಆದ ಕಾಂ. ಟಿ.ಎಸ್. ಮಣಿ ಧ್ವಜಾರೋಹಣ ಮಾಡುವುದರೊಂದಿಗೆ ಪ್ರಾರಂಭವಾದ ಸಮ್ಮೇಳನವನ್ನು ಪಕ್ಷದ ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್ ಉದ್ಘಾಟಿಸಿದರು. ಇದಕ್ಕೆ ಮೊದಲು ಗೋದಾವರಿ ಪರುಳೇಕರ್. ಇಮ್ಮಚ್ಚಿ ಬಾಬ, ಬಿ. ವೆಂಕಟೇಶ್ವರ ರಾವ್, ಕಿಶೋರಿ ಲಾಲ್, ಮೊದಲಾದ ಸಂಗಾತಿಗಳಿಗೆ ಒಂದು ನಿಮಿಷದ ಮೌನದ ಮುಖಾಂತರ ಶ್ರದ್ಧಾಂಜಲಿ ಅರ್ಪಿಸಲಾಯ್ತು.

**ಪ್ರಜಾಪ್ರಭುತ್ವ-ಲಕೋಟೆ-ಗುರು**

ಉದ್ಘಾಟನಾ ಭಾಷಣ ಮಾಡಿದ ಪಿ. ರಾಮಚಂದ್ರ ರಾವ್, ದೇಶದ ಪ್ರಜಾಪ್ರಭುತ್ವ ಉಳಿಯ ಬೇಕಾದರೆ ರಾಜಕೀಯ ಪಕ್ಷಗಳಲ್ಲಿ ಪ್ರಜಾಪ್ರಭುತ್ವ ಕ್ರಿಯೆ ನಡೆಯಬೇಕು. ಆದರೆ ಇಂದು ಬೂರ್ಶ್ವಾ ರಾಜಕೀಯ ಪಕ್ಷಗಳಲ್ಲಿ ಕಾಂಗ್ರೆಸ್, ಜನತಾದಳ, ಸೇರಿದಂತೆ ಪ್ರಜಾಸತ್ತಾತ್ಮಕ ಕ್ರಿಯೆಗೆ ಬದಲಾಗಿ ಲಕೋಟೆ ಮೂಲಕ ನಾಯಕತ್ವದ ನೇಮಕಾತಿ ನಡೆಯುತ್ತಿದೆ. ಬಿ.ಜೆ.ಪಿ.ಯಲ್ಲಿ ಆರ್.ಎಸ್.ಎಸ್. ಗುರುವಿನ ಲಕೋಟೆಯಿಂದಲೇ ಮುಖಂಡತ್ವ ಪಡೆಯುತ್ತಾರೆ, ಶಿವಸೇನೆಯಲ್ಲಿ ಬಾಳ ಠಾಕ್ರೆಯೇ ಪ್ರಜಾಪ್ರಭುತ್ವ ಎಂದು ಹೇಳಿದರು.

ಕಮ್ಯುನಿಸ್ಟ್ ಪಕ್ಷಗಳಲ್ಲಿ ಮೂರು ವರ್ಷಕ್ಕೊಮ್ಮೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಮ್ಮೇಳನಗಳ ಮುಖಾಂತರ ಹಿಂದಿನ ಕಾರ್ಯಗಳ ವಿಮರ್ಶೆ, ಸ್ವಯಂ ವಿಮರ್ಶೆ, ಮುಂದಿನ ಕಾರ್ಯಕ್ರಮ ಹಾಗೇ ನಾಯಕತ್ವದ ಆಯ್ಕೆ ನಡೆಯುವ ಮುಖಾಂತರ ಪ್ರಜಾಪ್ರಭುತ್ವ ಕ್ರಿಯೆ ನಡೆಯುತ್ತದೆ ಎಂದರು.

**ಹೆಚ್ಚುತ್ತಿರುವ ಹೋರಾಟಗಳು**

ಸಮಾಜವಾದದ ಹಿನ್ನಡೆಯಿಂದಾಗಿ ಇಂದು ಸಾಮ್ರಾಜ್ಯಶಾಹಿ ಪ್ರಬಲವಾಗಿ ಕಾಣತೊಡಗಿದೆ. ಮೂರನೇ ಜಗತ್ತಿನ ರಾಷ್ಟ್ರಗಳನ್ನು ಜಾಗತಿಕ ವ್ಯಾಪಾರ ಸಂಘಟನೆ (W.T.O) ವಿಶ್ವಬ್ಯಾಂಕ್(W.B.) ಗಳ ಮೂಲಕ ಶೋಷಣೆಯನ್ನು ತ್ರೀವಗೊಳಿಸಿದೆ ಎಂದರು.

ಸಾಮ್ರಾಜ್ಯಶಾಹಿ ವಿರುದ್ಧ ವಿಶ್ವದಾದ್ಯಂತ ಹೋರಾಟದ ಕಿಚ್ಚು ದಿನೇ ದಿನೇ ಹೆಚ್ಚುತ್ತಿದೆ, ಬಂಡವಾಳಶಾಹಿ ದೇಶಗಳಾದ ಫ್ರಾನ್ಸ್, ಇಟಲಿ, ದಕ್ಷಿಣ ಕೊರಿಯ, ಜರ್ಮನಿ, ಹಾಗೂ ರಷ್ಯ ಗಳ ಕಾರ್ಮಿಕರು ಪಿಂಚಣಿ ಕಡಿತ, ಸಬ್ಸಿಡಿ, ಆರೋಗ್ಯ ಸೌಲಭ್ಯದ ಹಿಂತೆಗೆಯುವಿಕೆ ಹಾಗೂ ಸರ್ಕಾರಿ ಸಂಸ್ಥೆಗಳ ಮುಚ್ಚುವಿಕೆ ವಿರುದ್ಧ ದೊಡ್ಡ ರೀತಿಯಲ್ಲಿ ಹೋರಾಟ ನಡೆಸಿ ಸಾಮ್ರಾಜ್ಯಶಾಹಿ ನೀತಿಗೆ ಪ್ರಬಲ ಸವಾಲಾಗಿದ್ದಾರೆ ಎಂದರು.

**ಬಣ್ಣ ಬಯಲುಗೊಳಿಸಿದ ಭಾಜಪ.**

ಪಕ್ಷದ 15ನೇ ಕಾಂಗ್ರೆಸ್ ನಿರ್ಣಯಿಸಿದಂತೆ ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಯನ್ನು ಕೇಂದ್ರದ ಅಧಿಕಾರದಿಂದ ದೂರ ಉಳಿಸಲು ಸಾಧ್ಯವಾಯಿತು. ಒಂದು ವೇಳೆ ಬಿ.ಜೆ.ಪಿ. ಅಧಿಕಾರಕ್ಕೆ ಬಂದರೆ ದೇಶದಲ್ಲಿ ದಿನವೂ ಜಟಾಪಟಿ ನಡೆಯುತ್ತದೆ ಎಂದು ಪಿ.ಆರ್ ಎಚ್ಚರಿಸಿದರು.

ಉತ್ತರ ಪ್ರದೇಶದಲ್ಲಿ ಅಧಿಕಾರ ಲಾಲಸೆಯಿಂದ ಬಿ.ಜೆ.ಪಿ. ಅನುಸರಿಸಿದ ಮಾರ್ಗಗಳು ಅದರ ನಿಜವಾದ ಬಣ್ಣ ಬಯಲುಗೊಳ್ಳುವಂತೆ ಮಾಡಿದೆ ಎಂದರು.

ಭಾರತದ ಭವಿಷ್ಯದ ಸರ್ಕಾರಗಳು ಸಂಯುಕ್ತ ಸರ್ಕಾರಗಳೇ ಆಗಿರುತ್ತವೆ. ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಯನ್ನು ಜನತೆಯಿಂದ ಬೇರ್ಪಡಿಸುವುದು ಕಮ್ಯುನಿಸ್ಟ್ ಪಕ್ಷದ ಪ್ರತಿಯೊಬ್ಬ ಸದಸ್ಯನ ಆದ್ಯ ಕರ್ತವ್ಯ. ರಾಜ್ಯದ ಜನತೆಯ ಸಮಸ್ಯೆಗಳಿಗೆ ಸದಸ್ಯ ಹಾಗೂ ಪಕ್ಷ ಸ್ಪಂದಿಸುವಂತೆ ಆಗಬೇಕು. ಕೈಗೊಂಡ ನಿರ್ಣಯಗಳನ್ನು ಜಾರಿಗೆ ತರುವ ಸಂಕಲ್ಪ ಕೈಗೊಳ್ಳಬೇಕೆಂದು ರಾಮಚಂದ್ರ ರಾವ್ ಕರೆ ನೀಡಿದರು.

**ಗಾಳಿಯಲ್ಲಿ ತೇಲಿಬರುವುದಿಲ್ಲ!**

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿ.ವಿ. ಶ್ರೀರಾಮರೆಡ್ಡಿ ಕಮ್ಯುನಿಸ್ಟ್ ಪಕ್ಷ ಗಾಳಿಯಲ್ಲಿ ಅಥವಾ ಅಲೆಯಲ್ಲಿ ತೇಲಿ ಬರುವಂತಹದ್ದಲ್ಲ. ಬದಲಿಗೆ ಹೋರಾಟದ ಮುಖಾಂತರ ಬೆಳೆದು ಬರುವಂತಹದ್ದು. ಜನತೆಯ, ನಾಡಿನ, ದೇಶದ ಸಮಸ್ಯೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕೆ ಸ್ಪಂದಿಸುವಂತಹ ಹಾಗೂ ನಿರಂತರ ಹೋರಾಟದ ಮುಖಾಂತರ ಪಕ್ಷವನ್ನು ಕಟ್ಟುವ ಸವಾಲನ್ನು ನಾವು ಸ್ವೀಕರಿಸಬೇಕಾಗಿದೆ ಎಂದರು.

ಜಾತ್ಯಾತೀತ ಪಕ್ಷಗಳ ಉತ್ತಮ ಗೆಳೆಯ, ಪ್ರಜಾಪ್ರಭುತ್ವ ಶಕ್ತಿಗಳ ಕೇಂದ್ರ ದುಡಿಯುವ ಜನತೆಯ ಆಶಾಕಿರಣ, ಶೋಷಣೆಗೊಳಗಾದ ಜನತೆಯ ಪರ ಹೋರಾಡುವ ಒಂದು ಸರಿಯಾದ ಕಾರ್ಯಕ್ರಮವುಳ್ಳ ಪಕ್ಷ ಸಿ.ಪಿ.ಐ.(ಎಂ) ಎಂದರು. ಮಾರ್ಕ್ಸ್‌ವಾದ ನಿರಂತರ ಮತ್ತು ಚಿರಂತನ ಪಕ್ಷವನ್ನು ಕಟ್ಟುವ ಮೂಲಕ ಅದನ್ನು ಬಲ ಪಡಿಸಬೇಕಾಗಿದೆ ಎಂದು ಶ್ರೀರಾಮರೆಡ್ಡಿ ಕರೆ ನೀಡಿದರು.

ವೇದಿಕೆಯ ಮೇಲೆ ಜಿ.ಎನ್. ನಾಗರಾಜ್, ಟಿ.ಎಸ್. ಮಣಿ ಉಪಸ್ಥಿತರಿದ್ದು ಸಿದ್ದಗಂಗಪ್ಪ ಸ್ವಾಗತಿಸಿ ಶ್ರೀನಿವಾಸಕರ್ಣ ವಂದನಾರ್ಪಣೆ ಮಾಡಿದರು.

**ಪ್ರತಿನಿಧಿ ಅಧಿವೇಶನ**

ಕೆ.ಎಂ. ವೆಂಕಟೇಶ್, ಜಿ.ಸಿ. ಬಯ್ಯಾರೆಡ್ಡಿ, ಜಿ. ಅರ್ಜುನನ್ ಮತ್ತು ಸಿ.ಡಿ.ಗಂಗೂಲಪ್ಪನವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿ ಮೂರು ದಿನ ನಡೆದ ಅಧಿವೇಶನವನ್ನು ನಡೆಸಿಕೊಟ್ಟಿತು.

ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಕರಡು ವರದಿ ಮಂಡಿಸಿದ ಮೇಲೆ ಪ್ರತಿನಿಧಿಸಿದ್ದ 94 ಪ್ರತಿನಿಧಿಗಳಲ್ಲಿ ಶೇ. 95 ಯುವಕರೇ ಆಗಿದ್ದು ವಿಶೇಷವಾಗಿತ್ತು. ಚರ್ಚೆಯಲ್ಲಿ ಭಾಗವಹಿಸಿದ್ದ ಎಲ್ಲಾ ಪ್ರತಿನಿಧಿಗಳು ಜಿಲ್ಲೆಯಲ್ಲಿ ಎಲ್ಲಾ ಸಾಮೂಹಿಕ ಸಂಘಟನೆಗಳನ್ನು ಕಟ್ಟುವುದರ ಮೂಲಕ ಜಿಲ್ಲೆಯಲ್ಲೆ ಪ್ರಬಲ ರಾಜಕೀಯ ಶಕ್ತಿಯಾಗಿ ಪಕ್ಷವನ್ನು ಕಟ್ಟಿ ಬೆಳಸಬೇಕೆಂದು ಕಾಳಜಿ ಹಾಗೂ ಜವಾಬ್ದಾರಿ ಅರಿತು ಅತ್ಯುತ್ಸಾಹದಿಂದ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಸಮ್ಮೇಳನದಲ್ಲಿ ಭಾಗವಹಿಸಿದ್ದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ.ಜಿ.ಎನ್. ನಾಗರಾಜ್ ವರದಿ ಮೇಲಿನ ಚರ್ಚೆಗೆ ಪೂರಕವಾಗಿ ಮಾತನಾಡಿ ಸಮ್ಮೇಳನಕ್ಕೆ ಮಾರ್ಗದರ್ಶನ ನೀಡಿದರು.

**ಬಹಿರಂಗ ಸಭೆ.**

15ರ ಸಂಜೆ ಗೌರಿಬಿದನೂರಿನ ಬಸ್ ನಿಲ್ದಾಣದ ಹತ್ತಿರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಜಿ.ವಿ. ಶ್ರೀರಾಮರೆಡ್ಡಿ , ಜಿ.ಸಿ. ಬಯ್ಯಾರೆಡ್ಡಿ, ಪಿ.ರಾಮಚಂದ್ರ ರಾವ್ ಮಾತನಾಡಿದರು. ಸಿದ್ದಗಂಗಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀನಿವಾಸ ಕರ್ಣ ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು. ಬಹಿರಂಗ ಸಭೆಯಲ್ಲಿ ಸುಮಾರು 600ಕ್ಕೂ ಹೆಚ್ಚು ಜನ ಸೇರಿದ್ದರು.

ಸಮ್ಮೇಳನಕ್ಕೆ ಪೂರಕವಾಗಿ ಗೌರಿಬದನೂರಿನಲ್ಲಿ ಗೋಡೆಬರಹ, ಕಂಬಗಳಿಗೆ ಕೆಂಬಾವುಟ ಕಟ್ಟಿ, ಬೀದಿಗಳಲ್ಲಿ ಕೆಂಪು ತೋರಣಗಳನ್ನು ಕಟ್ಟಿ ಇಡೀ ಪಟ್ಟಣವನ್ನು ಶೃಂಗರಿಸಲಾಗಿತ್ತು. ಮೂರು ದಿನಗಳ ಕಾಲ ಸಡಗರದ ವಾತಾವರಣ ನಿರ್ಮಾಣವಾಗಿ ಜನರನ್ನು ಆಕರ್ಷಿಸುವಂತಾಗಿತ್ತು.

**ನಿರ್ಣಯಗಳು**

ಕೋಲಾರ ಜಿಲ್ಲೆಯ ರೈತರು, ಕಾರ್ಮಿಕರು, ಕೃಷಿ ಕೂಲಿಕಾರರು ಹಾಗೂ ಸಾಮಾನ್ಯ ಜನತೆಯನ್ನು ತೀವ್ರವಾಗಿ ಭಾದಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ, ಒತ್ತಾಯಿಸುವಂತೆ 10ನೇ ಜಿಲ್ಲಾ ಸಮ್ಮೇಳನ ಪ್ರಮುಖ ನಿರ್ಣಯಗಳನ್ನು ಕೈಗೊಂಡಿತು.

ಕೋಲಾರ ಚಿನ್ನದ ಗಣಿಯನ್ನು ಮುಚ್ಚುವ ಬದಲಿಗೆ ಆಧುನೀಕರಿಸಿ ಸಾವಿರಾರು ಕಾರ್ಮಿಕರು ಬೀದಿಪಾಲಾಗುವುದನ್ನು ತಪ್ಪಿಸಬೇಕೆಂದು, ಜಿಲ್ಲೆಯ ಸಾರ್ವಜನಿಕ ಉದ್ದಿಮೆಯಾದ ಬಿ.ಇ.ಎಂ.ಎಲ್.ನ ಖಾಸಗೀಕರಣ ವಿರೋಧಿಸಿ, ಜಿಲ್ಲೆಯ ಬಹುತೇಕ ಸಾರಿಗೆ ವ್ಯವಸ್ಥೆಯು ಖಾಸಗಿಯಾಗಿದ್ದು, ಅದನ್ನು ಸರಕಾರವು ಕೂಡಲೇ ಸರಿಪಡಿಸುವ ನಿಟ್ಟಿನಲ್ಲಿ ಸರಕಾರಿ ಬಸ್ ಸೌಲಭ್ಯವನ್ನು ಕಲ್ಪಿಸಬೇಕೆಂದು ಸಮ್ಮೇಳನ ಒತ್ತಾಯಿಸಿದೆ.

ಜಿಲ್ಲೆಯ ಕೃಷಿಯು ಬಹುತೇಕ ಮಳೆಯ ಆಧಾರಿತವಾಗಿದ್ದು ಸಕಾಲದಲ್ಲಿ ಮಳೆ ಬರದೆ, ಛತ್ರದ ಬೆಳೆಯು ನಾಶವಾಗಿ ಜಿಲ್ಲೆಯ ರೈತರು ಕಂಗೆಟ್ಟಿದ್ದಾರೆ. ಇಂತಹ ಪ್ರದೇಶಗಳಲ್ಲಿ ಸರ್ವೆ ನಡೆಸಿ ಪರಿಹಾರ ನೀಡುವಂತಾಗಬೇಕು, ಜಿಲ್ಲೆಯ ಜನರ ನಾಡಿಬಡಿತವಾದ ರೇಷ್ಮೆ ಕೃಷಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಪ್ರತ್ಯೇಕ ರೇಷ್ಮೆ ಮಂಡಲಿ ರಚಿಸಬೇಕು,ಜಿಲ್ಲೆಯ ನೀರಾವರಿಯಲ್ಲಿ ಅತಿ ಮುಖ್ಯವಾಗಿರುವ ಕೊಳವೆ ಬಾವಿಗಳಲ್ಲಿ ಹಲವಾರು ತಜ್ಞರು ಅಭಿಪ್ರಾಯ ಪಟ್ಟಿರುವಂತೆ ವೈಜ್ಞಾನಿಕವಾಗಿ ನೀರಿನ ಪ್ರಮಾಣ ಕಾಯ್ದುಕೊಳ್ಳುವಂತೆ ಮಾಡಬೇಕು, ಲೋಡ್ ಶೆಡ್ಡಿಂಗ್ ತೆಗೆದು ಎಲ್ಲಾ ಕೊಳವೆ ಬಾವಿಗಳಿಗೆ ನಿರಂತರವಾಗಿ ವಿದ್ಯುತ್ ಪೂರೈಸಬೇಕು ಹಾಗೂ ವಿದ್ಯುತ್ ಸೌಲಭ್ಯ ಕಲ್ಪಿಸುವಾಗ ಇರುವ ಬಿಳಿ ನೀಲಿ ಕಪ್ಪು ಪ್ರದೇಶಗಳ ತಾರತಮ್ಯ ತೆಗೆಯಬೇಕು ಎಂದು ಒತ್ತಾಯಿಸಿ ಸಮ್ಮೇಳನಗಳನ್ನು ಅಂಗೀಕರಸಿದೆ.

ಈ ಮೇಲಿನ ನಿರ್ಣಯದ ಜೊತೆಗೆ ಪಂಚಾಯತ್ ರಾಜ್ ವಿಕೇಂದ್ರೀಕರಣ, ತೋಟಗಾರಿಕೆ, ಶಿಕ್ಷಣ ರಂಗ, ಅಸಂಘಟಿತ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕೆಂದು ನಿರ್ಣಯ ಅಂಗೀಕರಿಸಿ ಮುಂದೆ ಮೂರು ವರುಷಗಳಲ್ಲಿ ಈ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ನಡೆಸಲು ಒಮ್ಮತದ ನಿರ್ಣಯವ[illegible]ಅಂಗೀಕರಿಸಿದೆ.

ಸಮ್ಮೇಳನ ಮುಂದಿನ ಮೂರು ವರ್ಷಗಳಿಗೆ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. ಕಾರ್ಯದರ್ಶಿಯಾಗಿ ಜಿ.ವಿ. ಶ್ರೀರಾಮರೆಡ್ಡಿ ಪುನರಾಯ್ಕೆಗೊಂಡರು ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಟಿ.ಎಸ್. ಮಣಿ, ಜಿ.ಸಿ. ಬಯ್ಯಾರೆಡ್ಡಿ, ಕೆ.ಎಂ. ವೆಂಕಟೇಶ್, ವಿ. ವೆಂಕಟಸ್ವಾಮಿ ರೆಡ್ಡಿ ಜಿಲ್ಲಾ ಸಮಿತಿ ಸದಸ್ಯರುಗಳಾಗಿ ಗಾಂಧಿನಗರ ನಾರಾಯಣ ಸ್ವಾಮಿ, ಜಿ. ಅರ್ಜುನನ್, ಪಿ. ಶ್ರೀನಿವಾಸ, ಜಿ.ವಿ. ಅಶ್ವಥನಾರಾಯಣ ರೆಡ್ಡಿ, ಸಿ.ಡಿ. ಗಂಗೂಲಪ್ಪ, ಪಿ. ಸಿದ್ದಗಂಗಪ್ಪ, ವಿ. ಶ್ರೀನಿವಾಸ ಕರ್ಣ, ಪಿ.ಆರ್. ಸೂರ್ಯನಾರಾಯಣ, ವಿ. ನಾಗಪ್ಪ, ಹೊಳೂರ್ ಶಂಕರ್ ಆಯ್ಕೆಗೊಂಡು ಎರಡು ಸ್ಥಾನಗಳು ಖಾಲಿ ಇದೆ.

# ಸಿಪಿಐ(ಎಂ) ರಾಜ್ಯ ಸಮ್ಮೇಳನಕ್ಕೆ ಭರದ ಸಿದ್ಧತೆ

ಭಾರತದ ರಾಜಕಾರಣದಲ್ಲಿ ಅದರಲ್ಲೂ ಜನ-ಪರ ರಾಜಕಾರಣದಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಸಿಪಿಐ(ಎಂ) ನ ಹದಿನಾರನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ಕರ್ನಾಟಕ ರಾಜ್ಯ ಸಮ್ಮೇಳನ ಡಿಸೆಂಬರ್ 30 ರಿಂದ ಜನವರಿ 2 ರ ವರೆಗೆ ನಡೆಯಲಿದೆ. ಈ ಸಮ್ಮೇಳನ ನಡಯಲಿರುವ ಕೋಲಾರದಲ್ಲಿ ಇದನ್ನು ಯಶಸ್ವಿಯಾಗಿ ಈಡೇರಿಸಲು ಸಿಪಿಐ(ಎಂ) ಕೋಲಾರ ಜಿಲ್ಲಾ ಸಮಿತಿ ವ್ಯಾಪಕ ಸಿದ್ಧತೆ ನಡೆಸಿದೆ. ಸಿಪಿಐ(ಎಂ) ಶಾಸಕ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ವಿ.ಶ್ರೀರಾಮರೆಡ್ಡಿ ಯವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿ ಹಾಗೂ ಇತರ ಉಪ ಸಮಿತಿಗಳ ರಚನೆ ಯಾಗಿದ್ದು ಜಿಲ್ಲೆಯ ಎರಡು ಕಡೆಗಳಿಂದ ಹುತಾತ್ಮ ಜಾಥಾ, ಜಿಲ್ಲೆಯಾದ್ಯಂತ ಸಂಚರಿಸುವ ಸಾಂಸ್ಕೃತಿಕ ಜಾಥಾ ಈ ಸಿದ್ಧತೆಯ ಎರಡು ಪ್ರಮುಖ ಅಂಶಗಳು.

**ಸಾಂಸ್ಕೃತಿಕ ಜಾಥಾಗಳು;** ಈಗಿನ ರಾಜಕೀಯ ಸನ್ನಿವೇಶವನ್ನು ಸಿಪಿಐ(ಎಂ) ಮುಂದಿಟ್ಟಿರುವ ಪರ್ಯಾಯ ರಾಜಕೀಯ ದಾರಿಯನ್ನು ಬಿಂಬಿಸುವ ನಾಟಕಗಳು ಮತ್ತು ಹಾಡುಗಳ ಮೂಲಕ ಜಿಲ್ಲೆಯಾದ್ಯಂತ ಡಿಸೆಂಬರ್ 1 ರಿಂದ ಜಾಥಾ ನಡೆಸಲು ಎಲ್ಲ ಸಿದ್ಧತೆಗಳೂ ಯಶಸ್ವಿಯಾಗಿ ಪೂರ್ಣ ಗೊಳ್ಳುತ್ತಿವೆ. ಅಕ್ಟೋಬರ್ 1 ರಿಂದ 15 ರವರೆಗೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಈ ಜಾಥಾಗಳಲ್ಲಿ ಭಾಗವಹಿಸಲಿರುವ ಕಲಾ ತಂಡದ ಕಾರ್ಯಾಗಾರ ನಡೆಯಿತು. ಇಲ್ಲಿ ಎರಡು ಹೊಸ ನಾಟಕಗಳು ಹತ್ತಾರು ಹೊಸ ಹಾಡುಗಳು ರೂಪುಗೊಂಡಿವೆ. ಇಲ್ಲಿ ತರಬೇತು ಪಡೆದ ಕಲಾವಿದರನ್ನು ನಾಲ್ಕು ತಂಡಗಳಾಗಿ ಮಾಡಿ ಪ್ರತಿಯೊಂದು ತಂಡಕ್ಕೆ ನಾಲ್ಕು ದಿನಗಳ ಕಾರ್ಯಾಗಾರಗಳು (ನವಂಬರ್ 27ರಿಂದ 30 ರವರೆಗೆ) ವರದಿ ಕಳಿಸುವ ವೇಳೆಗೆ ನಡೆಯುತ್ತಿದೆ. ಚಿಂತಾಮಣಿ ತಾಲ್ಲೂಕಿನ ಕೈವಾರದಲ್ಲಿ ಎರಡು ತಂಡಗಳಿಗೆ ಹಾಗೂ ಬಾಗೇಪಲ್ಲಿ ಮತ್ತು ಬಂಗಾರ ಪೇಟೆ ಯಲ್ಲಿ ಒಂದೊಂದು ತಂಡಗಳಿಗೆ ಕಾರ್ಯಾಗಾರಗಳು ನಡೆಯುತ್ತಿವೆ. ಡಿಸೆಂಬರ್ 1 ರಂದು ಕೈವಾರ, ಬಾಗೇಪಲ್ಲಿ ಮತ್ತು ಬಂಗಾರ ಪೇಟೆಗಳಲ್ಲಿ ಈ ಜಾಥಾಗಳ ಉದ್ಘಾಟನೆ ಯಾಗಲಿದೆ. ಇದರಲ್ಲಿ ಸಿಪಿಐ(ಎಂ) ರಾಜ್ಯ ಮುಖಂಡರಲ್ಲದೆ, ಪ್ರಗತಿಪರ ಕಲಾವಿದರೂ, ಸಾಹಿತಿಗಳು ಭಾಗವಹಿಸಲಿದ್ದಾರೆ. ಈ ಜಾಥಾಗಳು ಪ್ರತಿ ತಾಲ್ಲೂಕಿಗೆ ಪ್ರವೇಶಿಸುವಾಗ ಸ್ವಾಗತ, ಊಟ, ವಸತಿ ಇತ್ಯಾದಿಗಳ ವ್ಯವಸ್ಥಿತ ಯೋಜನೆ ಸಿದ್ಧಪಡಿಸಲಾಗುತ್ತಿದೆ.

**ಹುತಾತ್ಮ ಜ್ಯೋತಿಗಳು:**

ಸ್ವಾತಂತ್ರ್ಯದ ಸ್ವರ್ಣ ಜಯಂತಿಯ ವರ್ಷದಲ್ಲಿ ನಡೆಯುತ್ತಿರುವ ರಾಜ್ಯ ಸಮ್ಮೇಳನಕ್ಕೆ ಸ್ವಾತಂತ್ರ್ಯ ಹೋರಾಟ ಚರಿತ್ರೆಯಲ್ಲಿ ಕೋಲಾರ ಜಿಲ್ಲೆಯ ಜಲಿಯನ್ ವಾಲಾಬಾಗ್ ಎಂದು ಹೆಸರಾದ ಗೌರಿಬಿದನೂರಿನ ವಿದುರಾಶ್ವಥದಿಂದ ಹಾಗೂ 1942 ರ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಸಮರಧೀರ ಹೋರಾಟದಲ್ಲಿ ಕಾರ್ಮಿಕ ವರ್ಗದ ಸಂಗಾತಿಗಳು ಹುತಾತ್ಮರಾದ ಕೆ.ಜಿ.ಎಫ್. ನಿಂದ ಎರಡು ಹುತಾತ್ಮ ಜ್ಯೋತಿಗಳನ್ನು ತರಲು ನಿರ್ಧರಿಸಲಾಗಿದೆ. ಡಿಸೆಂಬರ್ 26 ರಂದು ವಿದುರಾಶ್ವಥದಿಂದ ಹಾಗೂ ಡಿಸೆಂಬರ್ 28 ರಂದು ಕೆ.ಜಿ.ಎಫ್. ನ ಹುತಾತ್ಮ ಸ್ಮಾರಕದಿಂದ ಈ ಜ್ಯೋತಿಗಳನ್ನು ಹೊತ್ತ ಸಂಗಾತಿಗಳ ಕಾಲ್ನಡಿಗೆ ಜಾಥಾ ಡಿಸೆಂಬರ್ 30 ರಂದು ಕೋಲಾರ ನಗರದಲ್ಲಿ ಬೃಹತ್ ರ್‍ಯಾಲಿ ಹಾಗೂ ಬಹಿರಂಗ ಸಭೆ ನಡೆಯಲಿರುವ ವೇಳೆಗೆ ತಲುಪುತ್ತವೆ.

ವ್ಯಾಪಕ ಗೋಡೆ ಬರಹ, ಆಕರ್ಷಕ ಸ್ವಾಗತ ಕಮಾನುಗಳು, ಕರಪತ್ರಗಳು, ಪೋಸ್ಟರುಗಳ ಮೂಲಕ ವ್ಯಾಪಕ ಪ್ರಚಾರ ನಡೆಸಲು ನಿರ್ಧರಿಸಲಾಗಿದೆ.

ರಾಜ್ಯ ಸಮ್ಮೇಳನದ ಆರಂಭದ ದಿನ ನಡೆಯುವ ಬೃಹತ್ ರ್‍ಯಾಲಿಯನ್ನು ಆಕರ್ಷಕವಷ್ಟೇ ಅಲ್ಲ, ಅರ್ಥಪೂರ್ಣ ಗೊಳಿಸಲು ಪ್ರಯತ್ನ ನಡೆದಿದೆ. 500 ಕೆಂಪು ಸ್ವಯಂ ಸೇವಕರಲ್ಲದೆ, ಜಾನಪದ ತಂಡಗಳು ಜಿಲ್ಲೆಯ ವಿವಿಧ ಸ್ಥಳಗಳಿಂದ ಇದರಲ್ಲಿ ಭಾಗ ವಹಿಸಲಿದ್ದಾರೆ. ಬಹಿರಂಗ ಸಭೆಯನ್ನುದ್ದೇಶಿಸಿ ಕೇರಳದ ಮುಖ್ಯಮಂತ್ರಿ ಇ.ಕೆ. ನಾಯನಾರ್ ಮತ್ತಿತರ ಮುಖಂಡರು ಮಾತನಾಡಲಿದ್ದಾರೆ ಎಂದು ತಿಳಿದು ಬಂದಿದೆ.

ರಾಜ್ಯ ಸಮ್ಮೇಳನದ ನಿಧಿ ಸಂಗ್ರಹಕ್ಕೆ ಚಳುವಳಿಯ ಸ್ವರೂಪ ಕೊಡಲಾಗುತ್ತಿದೆ. ನವಂಬರ್ 30 ರಂದು ಜಿಲ್ಲಾದ್ಯಂತ ರಾಜ್ಯ ಸಮ್ಮೇಳನದ ನಿಧಿ ಸಂಗ್ರಹದ ಈ ಚಳುವಳಿ ನಡೆಯುತ್ತದೆ ಎಂದು ಸ್ವಾಗತ ಸಮಿತಿಯ ವಕ್ತಾರರು ತಿಳಿಸಿದ್ದಾರೆ.

# ರೈತ-ಕೂಲಿಕಾರ್ಯಕರ್ತರ ಸಮಾವೇಶ

ಕರ್ನಾಟಕ ಪ್ರಾಂತ ರೈತ ಸಂಘದ ಗ್ರಾಮ ಘಟಕಗಳ ರೈತ-ಕೂಲಿಕಾರ್ಯಕರ್ತರ ಜಿಲ್ಲಾ ಮಟ್ಟದ ಸಮಾವೇಶವು ಜಿಲ್ಲಾ ಸಮಿತಿ ಅಧ್ಯಕ್ಷರಾದ ಈ.ಆರ್. ಯಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಜೋಳದ ರಾಶಿ ದೊಡ್ಡನಗೌಡ ರಂಗ ಮಂದಿರದಲ್ಲಿ ಇತ್ತೀಚಿಗೆ ನಡೆಯಿತು.

ಜಿಲ್ಲೆಯ ವಿವಿಧ ತಾಲೂಕುಗಳಿಂದ ೪೦೦ ಕಾರ್ಯಕರ್ತರು ಭಾಗವಹಿಸಿದ್ದ ಸಮಾವೇಶವನ್ನು ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ಜಗನ್ನಾಥ್ ಉದ್ಘಾಟಿಸಿ ಮಾತನಾಡುತ್ತಾ, ಕೇಂದ್ರ ಹಾಗೂ ರಾಜ್ಯಗಳಲ್ಲಿ ಇಲ್ಲಿವರೆಗೆ ಆಳ್ವಿಕೆ ನಡೆಸಿದ ರಾಜಕೀಯ ಪಕ್ಷಗಳು ಜನಸಾಮಾನ್ಯರ, ರೈತ-ಕೂಲಿಕಾರರ, ಶ್ರಮಿಕರ ಹಿತ ಸಾಧನೆಗಿಂತ ಅಧಿಕಾರ ಲಾಲಸೆ, ಸ್ವಾರ್ಥಸಾಧನೆಯಲ್ಲೇ ಮುಳುಗಿ ಹೋಗಿವೆಯೆಂದರು. ದಿನೇ ದಿನೇ ರೈತರು ದಿವಾಳಿಯಾಗಿ, ಕೂಲಿಕಾರರ ಸಂಖ್ಯೆ ಬೆಳೆಯುತ್ತಿರುವುದಲ್ಲದೆ ಇನ್ನೊಂದೆಡೆ ರಾಜಕಾರಣಿಗಳ ಆಸ್ತಿಪಾಸ್ತಿಗಳ ಬೆಳವಣಿಗೆ ಹಾಗೂ ಅವರ ಅಧಿಕಾರ ಲಾಲಸೆ ಬೃಹತ್ ಸಾಕ್ಷಿಯಾಗಿ ನಮ್ಮ ಮುಂದಿದೆ ಎಂದರು.

ಪ್ರಾಂತ ರೈತ ಸಂಘದ ಗ್ರಾಮ ಘಟಕಗಳು ಬಡ ರೈತರ, ಕೂಲಿಕಾರರ ವಿಮೋಚನೆಗಾಗಿ, ಶೋಷಣೆಗೆದುರಾಗಿ ಅವರನ್ನು ಸಂಘಟಿಸಿ ಹೋರಾಡುವುದೊಂದೇ ನಮಗಿರುವ ಏಕೈಕ ಮಾರ್ಗವೆಂದು ಕಾರ್ಯಕರ್ತರಿಗೆ ಜಗನ್ನಾಥ್ ಕರೆ ನೀಡಿದರು.

ಈ ಸಮಾವೇಶವು ಪ್ರಮುಖವಾಗಿ ಜಿಲ್ಲೆಯ ಅದರಲ್ಲಿಯೂ ರೈತ ಹಾಗೂ ಕೂಲಿಕಾರರ ಮೇಲಾದ ಹೊಸ ಆರ್ಥಿಕ, ಕೃಷಿ ನೀತಿಯ ಪರಿಣಾಮಗಳನ್ನು ವಿವರವಾಗಿ ಅವಲೋಕಿಸಿ, ಸದರಿ ನೀತಿಗಳನ್ನು ಕೈ ಬಿಡುವಂತೆ ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿಗಳನ್ನು ಒತ್ತಾಯಿಸುವ ನಿರ್ಣಯ ಕೈಗೊಳ್ಳುವುದರ ಜೊತೆಗೆ ಜಿಲ್ಲೆಯ ರೈತ-ಕೂಲಿಕಾರರ ತೀವ್ರ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸುವ ಹಲವು ನಿರ್ಣಯಗಳನ್ನು ಕೈಗೊಂಡಿತು.

ಜಿಲ್ಲೆಯ ಬರಗಾಲವನ್ನು ಹೊಡೆದೊಡಿಸಲು ಸಮರದೋಪಾದಿಯಲ್ಲಿ ಕಾಮಗಾರಿ ಹಾಗೂ ಶಾಶ್ವತ ಪರಿಹಾರವಾಗಿ ಜಿಲ್ಲೆಯ ನದಿಗಳಾದ ಭದ್ರಾವತಿ, ತುಂಗಭದ್ರ ಹಾಗೂ ಹಗರಿಗಳ ಬಳಕೆಗೆ ಯೋಜನೆ ರೂಪಿಸಬೇಕು. ಬರಗಾಲ ಎದುರಿಸಲು ಜಿಲ್ಲಾ ಮಟ್ಟದಲ್ಲಿ ರೂ ೫ ಕೋಟಿ ನಿಧಿಯೊಂದನ್ನು ಸ್ಥಾಪಿಸಬೇಕು. ತುಂಗಾಭದ್ರ ನದಿಯ ಹೂಳನ್ನು ತೆಗೆಯಬೇಕು. ಹೆಚ್.ಡಬ್ಲ್ಯೂ.ಸಿ ಕಾಲುವೆಗೆ ಜನವರಿ ಕೊನೆಯವರಗೆ ಹಾಗೂ ಎಲ್.ಎಲ್.ಸಿ ಕಾಲುವೆಗೆ ಮಾರ್ಚ್ ಕೊನೆಯ ವರಗೆ ಕಡ್ಡಾಯವಾಗಿ ನೀರು ಒದಗಿಸುವಂತೆ, ಕೂಲಿಕಾರರಿಗ ಸಮಗ್ರ ಕಾನೂನು ಜಾರಿ ಮುಂತಾದವುಗಳಿಗೆ ಸಮಾವೇಶ ಒತ್ತಾಯಿಸಿದೆ.

ಪದ್ಮರಹಟ್ಟಿ ಗ್ರಾಮದಲ್ಲಿ ಕೂಲಿಕಾರ ಮಹಿಳೆಯ ಮೇಲೆ ಅಲ್ಲಿನ ಭೂಮಾಲಿಕ ಅತ್ಯಾಚಾರ ನಡೆಸಿದ್ದನ್ನು ಹಾಗೂ ಪ್ರತಿಭಟನೆ ನಡೆಸಿದ ಜನರ ಮೇಲೆ ದಾಳಿ ನಡೆಸಿದ್ದನ್ನು ಈ ಸಮಾವೇಶವು ಖಂಡಿಸಿ · ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪೊಲೀಸ್ ಅಧಿಕಾರಿಗಳನ್ನು ಸಮಾವೇಶ ಒತ್ತಾಯಿಸಿದೆ.

ಈ ಸಮಾವೇಶದಲ್ಲಿ ಜಿಲ್ಲಾ ಕಾರ್ಯದರ್ಶಿ ಯು.ಬಸವರಾಜ್, ಪಿ.ಎಸ್.ಶಿವಶಂಕರ್, ಮರಿಯಪ್ಪ ನಿರ್ಣಯ ಬೆಂಬಲಿಸಿ ಮಾತನಾಡಿದರೆ ಜಿಲ್ಲಾ ಸಿಐಟಿಯು ಕಾರ್ಯದರ್ಶಿ ಪ್ರಸನ್ನಕುಮಾರ್ ಸಮಾವೇಶ ಬೆಂಬಲಿಸಿ ಮಾತನಾಡಿದರು

# ಕರ್ನಾಟಕ ರಾಜ್ಯೋತ್ಸವ

ಮಳವಳ್ಳಿ: ತಾಲೂಕಿನ ಹುಲ್ಲಾಗಾಲ ಡಿ.ವೈ.ಎಫ್.ಐ ಹಾಗೂ ಕೃಷಿಕೂಲಿಕಾರರ ಗ್ರಾಮ ಘಟಕಗಳ ನೇತೃತ್ವದಲ್ಲಿ ನವಂಬರ್ ಒಂದರಂದು ಕರ್ನಾಟಕ ರಾಜ್ಯೋತ್ಸವ ಕಾರ್ಯ ಕ್ರಮ ಆಚರಿಸಲಾಯಿತು. ಕೂಲಿಕಾರರ ಸಂಘದ ಬೋರಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಿಪಿಐ(ಎಂ)ನ ಜಿ. ರಾಮಕೃಷ್ಣ ಮುಖ್ಯ ಅತಿಥಿಗಳಾಗಿ ಮಾತನಾಡಿ ಕರ್ನಾಟಕ ಏಕೀಕರಣ ಹಾಗೂ ರಾಜ್ಯೋತ್ಸವ ಕುರಿತು ಮಾತನಾಡಿದರು. ಧ್ವಜಾರೋಹಣ ವನ್ನು ಡಿ.ವೈ.ಎಫ್.ಐ ನ ಮರಿಯಪ್ಪ ನೆರವೇರಿಸಿದರು. ಇದೇ ಸಂದರ್ಭದಲ್ಲಿ ರಂಗೋಲಿ ಸ್ಪರ್ಧೆ, ಚಿತ್ರಕಲೆ, ಕಬಡ್ಡಿ ಪಂದ್ಯ ಹಾಗೂ ಇತರೆ ಕ್ರೀಡಾ ಸ್ಪರ್ಧೆಗಳನ್ನು ನಡೆಸಿ. ವಿಜೇತರಿಗೆ ಬಹು ಮಾನ ವಿತರಿಸಲಾಯ್ತು. ಪುಟ್ಟರಾಜು ಸ್ವಾಗತಿ ಸಿದರೆ, ದೊಡ್ಡಯ್ಯ ವಂದನೆ ಸಲ್ಲಿಸಿದರು.

### ಚರ್ಚಾಸ್ಪರ್ಧೆ

ಕೆ.ಆರ್.ನಗರ: ಕನ್ನಡ ರಾಜ್ಯೋತ್ಸವದ ಅಂಗವಾಗಿ, ನವಂಬರ್ ೧೮ ರಂದು ತಾಲೂಕು ಮಟ್ಟದ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ "ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕಂಪ್ಯೂಟರ್ ಜ್ಞಾನ ಅತ್ಯವಶ್ಯ" ಎಂಬ ಚರ್ಚಾ ಸ್ಪರ್ಧೆಯನ್ನು ಕೆ.ಆರ್.ನಗರದ ಭಾರತ ವಿದ್ಯಾರ್ಥಿ ಫೆಡರೇಷನ್, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಹಾಗೂ ಸ್ಥಳೀಯ ಸ್ಪಿನ್ ಕಂಪ್ಯೂಟರ್ಸ್‌ನ ಶಿಕ್ಷಣ ಕೇಂದ್ರಗಳು ಜಂಟಿಯಾಗಿ ಸಂಯೋಜಿಸಿದ್ದವು.

ಈ ಕಾರ್ಯಕ್ರಮದ ಬಹುಮಾನ ವಿತರಣಾ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ, ವಿಮಾ ನೌಕರರ ಮುಂದಾಳು ಕಾಂ.ಪಿ. ಕೃಷ್ಣಮೂರ್ತಿ ಮಾತನಾಡಿ, ಕಂಪ್ಯೂಟರ್ ನ ವಿವೇಚನಾರಹಿತ ಬಳಕೆ, ಭಾರತದ ಆರ್ಥಿಕ, ಸಾಮಾಜಿಕ ಬದುಕಿನ ಮೇಲೆ ತೀವ್ರ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತಿದೆ ಎಂದರು. ಸ್ಪಿನ್ ಕಂಪ್ಯೂಟರ್ಸ್‌ನ ಶಿಕ್ಷಕ ನಟರಾಜ್ "ಕಂಪ್ಯೂಟರ್ ಭಾಷೆಗಳು" ಕುರಿತು ಮಾತನಾಡಿದರು. ಶಿಕ್ಷಕ ಜ್ಞಾನಾನಂದ ಕಾರ್ಯಕ್ರಮ ನಿರೂಪಿಸಿದರು. ಮೊದಲಿಗೆ ನಟರಾಜ್ ಸ್ವಾಗತಿಸಿ, ಗಿರೀಶ್ ವಂದಿಸಿದರು.

# ಧಾರವಾಡದಲ್ಲಿ 'ಚೆ' ಸ್ಮರಣೆ

ಇತ್ತೀಚೆಗೆ ಸಮಾಜವಾದಿ ಕ್ಯೂಬಾದ ರಾಜಧಾನಿ ಹವಾನದಲ್ಲಿ ನಡೆದ ೧೪ನೇ ವಿಶ್ವ ವಿದ್ಯಾರ್ಥಿ-ಯುವಜನ ಉತ್ಸವದಲ್ಲಿ ಭಾಗವಹಿಸಿ ಬಂದಿದ್ದ ಬಂಡಾಯ ಸಾಹಿತಿ ಹಾಗೂ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್‌ನ ಗುಲ್ಬರ್ಗಾ ವರದಿಗಾರರಾದ ಜಿ.ಎನ್. ಮೋಹನ್, ಬಂಡಾಯ ಸಾಹಿತ್ಯ ಹಾಗೂ ಇಪ್ಟಾ ರಾಜ್ಯ ಸಂಘಟಕರಾದ ಡಾ. ಸಿದ್ದನಗೌಡ ಪಾಟೀಲರು ಕ್ಯೂಬಾದಲ್ಲಿ ತಮ್ಮ ಅನುಭವಗಳನ್ನು ಈ ದಿನ ಸಂಜೆ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಸಮುದಾಯ ಮತ್ತು ಇಪ್ಟಾ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಿಕ್ಕಿರಿದ ಆಸಕ್ತ ಜನರೊಂದಿಗೆ ಹಂಚಿಕೊಂಡರು.

ಜಿ.ಎನ್. ಮೋಹನ್ ಮಾತನಾಡುತ್ತಾ, ಕ್ಯೂಬಾದಲ್ಲಿ ೧೯೫೯ ರ ಕ್ರಾಂತಿಯ ನಂತರ ಸಾಧಿಸಿದ ಸಂಪೂರ್ಣ ಸಾಕ್ಷರತೆ, ಎಲ್ಲರಿಗೂ ಆರೋಗ್ಯ, ಸ್ವಾವಲಂಬನೆಯ ಆರ್ಥಿಕ ಅಭಿವೃದ್ಧಿ, ಆಟ-ಓಟ ಸಾಂಸ್ಕೃತಿಕ ರಂಗಗಳಲ್ಲಿ ಮೇಲುಗೈ, ಅಮೇರಿಕಾದ ಸಾಮ್ರಾಜ್ಯಶಾಹಿಯ ನಿರಂತರ ಬೆದರಿಕೆಗಳಿಗೆ ಬಗ್ಗದೇ ಸೆಡ್ಡು ಹೊಡೆದು ನಿಂತ ರಾಷ್ಟ್ರೀಯ ಸ್ವಾಭಿಮಾನ ಹಾಗೂ ಸಾರ್ವಭೌಮತೆ ಇತ್ಯಾದಿಗಳ ಕುರಿತು ಮನಮುಟ್ಟುವಂತೆ ತಿಳಿಸಿದರು. ೧೯೯೦ ರ ನಂತರ ಸಮಾಜವಾದಿ ಸೋವಿಯತ್ ಒಕ್ಕೂಟದ ಪತನದ ನಂತರ ಅಮೇರಿಕ ಕ್ಯೂಬಾದ ಮೇಲೆ ಹೇರಿದ ಆರ್ಥಿಕ ದಿಗ್ಬಂಧನದಿಂದ ಸಂಭವಿಸಿದ ಅಪಾರ ಕಷ್ಟನಷ್ಟಗಳ ನಡುವೆಯೂ, ಭಾರತದಂತಹ ಮಿತ್ರ ರಾಷ್ಟ್ರಗಳ ಹಾಗೂ ಜನರ ಸಹಾಯ ಸೌಹಾರ್ದತೆಗಳಿಂದ ಕ್ಯೂಬಾದ ಜನರು ಸಾರ್ವತ್ರಿಕ ಉಚಿತ ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಯನ್ನು ರಕ್ಷಿಸಿಕೊಂಡು ಬಂದುದನ್ನು ಬಣ್ಣಿಸಿದರು.

ಯುವ ಪತ್ರಕರ್ತರಿಗೆ ಸಂಬಂಧಿಸಿದ ವಿಶೇಷ ಸಮ್ಮೇಳನದ ಅಧ್ಯಕ್ಷೀಯ ಮಂಡಳಿಯ ಸದಸ್ಯರಾಗಿ ಭಾಗವಹಿಸಿದ್ದ ಮೋಹನ್, ಜಗತ್ತಿನ ಸುದ್ದಿ ಮಾಧ್ಯಮಗಳ ಮುಕ್ಕಾಲು ಪಾಲು ಅಭಿವೃದ್ಧಿ ಹೊಂದಿದ ಕೆಲವೇ ಸಾಮ್ರಾಜ್ಯಶಾಹಿ ದೇಶಗಳ ಬಹುರಾಷ್ಟ್ರೀಯ ಸಂಸ್ಥೆಗಳು ನಿಯಂತ್ರಿಸುತ್ತಿರುವ ಹಿನ್ನೆಲೆಯಲ್ಲಿ, ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ಮೂರನೇ ಜಗತ್ತಿನ ದೇಶಗಳಿಗಾಗಿ ಪ್ರತ್ಯೇಕ ಜಾಗತಿಕ ಹಾಗೂ ರಾಷ್ಟ್ರೀಯ ಸುದ್ದಿ ಸಂಸ್ಥೆಗಳನ್ನು ಸ್ಥಾಪಿಸಲು ಸಮ್ಮೇಳನ ನಿರ್ಧರಿಸಿದೆ ಎಂದರು.

ಕ್ಯೂಬಾದ ಜನರ ರಾಷ್ಟ್ರಪ್ರೇಮ, ಆದರ ಆತಿಥ್ಯ, ಭಾರತದ ಬಗೆಗಿನ ಅಭಿಮಾನ, ಸಾಮ್ರಾಜ್ಯಶಾಹಿಗಳ ವಿರುದ್ಧ ದಣಿವಿಲ್ಲದ ಹೋರಾಟ, ಇತ್ಯಾದಿಗಳನ್ನು ವಿವರಿಸಿದ ಡಾ. ಸಿದ್ದನಗೌಡ ಪಾಟೀಲರು, ಈ ವಿಶ್ವ ಉತ್ಸವದಲ್ಲಿ ೧೩೨ ದೇಶಗಳಿಂದ ೨೦೦೦ಕ್ಕೂ ಹೆಚ್ಚಿನ ಸಂಘಟನೆಗಳಿಂದ ೧೨,೨೩೫ ಪ್ರತಿನಿಧಿಗಳು ಭಾಗವಹಿಸಿರುವುದಾಗಿ ತಿಳಿಸಿದರು. ಉತ್ಸವದಲ್ಲಿ ಯುವಜನರಿಗಾಗಿ ಕಾರ್ಮಿಕ ಸಂಘಟನೆ, ಸಮೂಹ ಮಾಧ್ಯಮ, ಸಂಸದೀಯ ವ್ಯವಹಾರ ಮತ್ತು ಧಾರ್ಮಿಕ ನಂಬಿಕೆಗಳ ಕುರಿತು ವಿಶೇಷ ಸಮ್ಮೇಳನಗಳು ನಡೆದಿವೆ ಎಂದರು. ಅಮೇರಿಕಾ ಹಾಗೂ ದ.ಕೋರಿಯಾದ ಸರಕಾರಗಳ ನಿಷೇಧಾಜ್ಞೆಗಳನ್ನು ಉಲ್ಲಂಘಿಸಿ ಆ ದೇಶಗಳಿಂದಲೂ ನೂರಾರು ಪ್ರತಿನಿಧಿಗಳು, ಕರ್ನಾಟಕದ ಐವರು ಸೇರಿದಂತೆ ಭಾರತದ ವಿವಿಧ ರಾಜ್ಯಗಳ, ರಾಜಕೀಯ ಪಕ್ಷಗಳ ಹಾಗೂ ಸಾಮೂಹಿಕ ಸಂಘಟನೆಗಳ ೧೮೨ ಪ್ರತಿನಿಧಿಗಳೂ ಈ ಉತ್ಸವದಲ್ಲಿ ಭಾಗವಹಿಸಿರುವುದಾಗಿ ತಿಳಿಸಿದರು.

೧೯೪೦ನೇ ದಶಕದಲ್ಲಿ ಫಾಸಿಸ್ಟ್ ವಿರೋಧಿ ವೇದಿಕೆಯಾಗಿ ಮೂಡಿಬಂದ ವಿಶ್ವ ವಿದ್ಯಾರ್ಥಿ ಯುವಜನ ಉತ್ಸವದ ಚಾರಿತ್ರಿಕ ಹಿನ್ನೆಲೆಯನ್ನು ಡಾ. ಸಿದ್ದನಗೌಡ ಪಾಟೀಲರು ನೆನಪಿಸುತ್ತಾ ಸಮಕಾಲೀನ ಪರಿಸ್ಥಿತಿಯಲ್ಲಿ ಜಾಗತಿಕ ಸಾಮ್ರಾಜ್ಯಶಾಹಿ ಹಾಗೂ ವಸಾಹತುಶಾಹಿ ಶಕ್ತಿಗಳು ಅನಿಯಂತ್ರಿತ ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣ ನೀತಿಗಳಿಂದ ಭಾರತವೂ ಸೇರಿದಂತೆ ಮೂರನೇ ಜಗತ್ತಿನ ದೇಶಗಳ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುತ್ತಾ ಅವುಗಳ ಸ್ವಾತಂತ್ರ್ಯ, ಸ್ವಾವಲಂಬನೆ ಹಾಗೂ ಸಾರ್ವಭೌಮತೆಯನ್ನು ಹಾಳುಗೆಡಹುವುದರ ವಿರುದ್ಧ ಹವಾನದಲ್ಲಿ ನಡೆದ ಉತ್ಸವದ ಅಂತ್ಯದಲ್ಲಿ ಅಂಗೀಕರಿಸಿದ ಘೋಷಣಾ ಪತ್ರದ ಮುಖ್ಯಾಂಶಗಳನ್ನು ವಿವರಿಸಿದರು. ಭಾರತ-ಕ್ಯೂಬಾ ಸ್ನೇಹ ಸೌಹಾರ್ದತೆಯ ಸಮಿತಿಯನ್ನು ನಮ್ಮ ದೇಶದ ಎಲ್ಲಾ ರಾಜ್ಯಗಳಲ್ಲಿ ಸದ್ಯವೇ ಸಂಘಟಿಸಲಾಗುವುದು ಎಂದರು.

ಈ ಕಾರ್ಯಕ್ರಮವನ್ನು ಲ್ಯಾಟಿನ್ ಅಮೇರಿಕಾದ ಮಹಾನ್ ಕ್ರಾಂತಿಕಾರಿ ಹಾಗೂ ರಾಷ್ಟ್ರೀಯ ವಿಮೋಚನಾ ಹೋರಾಟಗಾರನಾದ ಅರ್ನೆಸ್ಟೋ ಚೆ ಗುವಾರ ಅವರ ಮೂವತ್ತನೆ ಹುತಾತ್ಮ ವರ್ಷಾಚರಣೆಯ ಅಂಗವಾಗಿ 'ಏರ್ಪಡಿಸಲಾಗಿದ್ದು, ಸಮುದಾಯದ ಅಧ್ಯಕ್ಷರಾದ ಸಿ.ಆರ್. ಭಟ್ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ 'ಚೆ' ಅವರ ಬದುಕು ಹೋರಾಟಗಳನ್ನು ಪರಿಚಯಿಸುತ್ತಾ, ಅಮೇರಿಕಾದ ಗುಪ್ತಚಾರ ದಳದವರಿಂದ ಬೊಲಿವಿಯಾದಲ್ಲಿ ೩೦ ವರ್ಷಗಳ ಹಿಂದೆ ಅವರನ್ನು ಅಮಾನುಷವಾಗಿ ಕೊಲೆ ಮಾಡಿದವರಲ್ಲಿ ಒಬ್ಬರು ತನ್ನ ದುಷ್ಕೃತ್ಯಕ್ಕೆ ಪಶ್ಚಾತಾಪ ಪಟ್ಟು 'ಚೆ' ಅವರ ಕತ್ತರಿಸಿದ ಎರಡು ತೋಳುಗಳನ್ನು, ಮುಖದ ಪಡಿಯಚ್ಚನ್ನು ಮತ್ತು ಅವರ ಬೊಲಿವಿಯಾದ ದಿನಚರಿಯನ್ನು ಕ್ಯೂಬಾದ ಫಿಡೆಲ್ ಕಾಸ್ಟ್ರೋವಿಗೆ ಕಳುಹಿಸಿಕೊಟ್ಟ ಹೃದಯ ಸ್ಪರ್ಶಿ ಘಟನೆಯನ್ನು ಸಿ.ಆರ್. ಭಟ್ ನೆನಪಿಸಿಕೊಟ್ಟರು. ಅವರ ಕ್ರಾಂತಿಕಾರಿ ಪ್ರಭಾವ ವಿಶ್ವದಾದ್ಯಂತ ಯುವ ಜನರಲ್ಲಿ ಚಿರಚೇತನವಾಗಿ ಬೆಳಗುತ್ತಿದೆ ಎಂದೂ ಭಟ್ ತಿಳಿಸಿದರು. ಹುತಾತ್ಮ 'ಚೆ' ಅವರಿಗೆ ಸ್ವಲ್ಪ ಕಾಲ ಮೌನ ಆಚರಿಸಿ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

ಸಮುದಾಯದ ಕಾರ್ಯದರ್ಶಿ ಬಿ.ಐ. ಈಳಿಗೇರ ಸ್ವಾಗತಿಸಿದರು. ಉಪಾಧ್ಯಕ್ಷರಾದ ಜಗದೀಶ ಮಂಗಳೂರ ಮಠ ವಂದಿಸಿದರು. ಇಪ್ಟಾದ ಕಾರ್ಯದರ್ಶಿ ಶಂಕರ ಹಲಗತ್ತಿ ಕಾರ್ಯಕ್ರಮ ನಿರ್ವಹಿಸಿಕೊಟ್ಟರು. ಎಸ್.ಎಫ್.ಐ. ಮುಖಂಡರಾದ ಮಹೇಶ ಪತ್ತಾರ್ 'ಚೆ' ಅವರ ಆಕರ್ಷಕ ವರ್ಣಚಿತ್ರ ಹಾಗೂ ಸಭೆಯ ಬ್ಯಾನರ್ ರಚಿಸಿಕೊಟ್ಟರು. ಕ್ಯೂಬಾ, ಲ್ಯಾ.ಅಮೇರಿಕ, ದ.ಆಫ್ರಿಕಾ ಮತ್ತು ಹವಾನಾ ಉತ್ಸವಕ್ಕೆ ಸಂಬಂಧಿಸಿದ ಅಪರೂಪದ ಪುಸ್ತಕಗಳ, ನೋಟು-ನಾಣ್ಯಗಳ, ಛಾಯಾ ಚಿತ್ರಗಳ ಆಕರ್ಷಕ ಪ್ರದರ್ಶನಗಳನ್ನು ಏರ್ಪಡಿಸಲಾಯಿತು. ಇಪ್ಟಾದ ಪತ್ರಕರ್ತರ ಭವನದಲ್ಲಿ ಇಬ್ಬರು ಅತಿಥಿಗಳು ಪತ್ರಿಕಾ ಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದರು.

## ಮಂಗಳೂರು ಜಿಲ್ಲಾ ಸಮ್ಮೇಳನಕ್ಕೆ ವ್ಯಾಪಕ ಸಿದ್ಧತೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 16ನೇ ರಾಜ್ಯ ಸಮ್ಮೇಳನವು ಡಿ-30 ರಿಂದ ಜನವರಿ 2ರವರೆಗೆ ಕೋಲಾರದಲ್ಲಿ ನಡೆಯುತ್ತಿದ್ದು, ಮಂಗಳೂರು ಜಿಲ್ಲಾ 16ನೇ ಸಮ್ಮೇಳನವು ಡಿಸೆಂಬರ್ 14,15,16, ರಂದು ಮಂಗಳೂರಿನಲ್ಲಿ ನಡೆಯಲಿದೆ.

ಜಿಲ್ಲಾ ಸಮ್ಮೇಳನದ ಯಶಸ್ವಿಗಾಗಿ ವ್ಯಾಪಕ ರೀತಿಯ ಸಿದ್ದತೆ ನಡೆಸಲು ಸ್ವಾಗತ ಸಮಿತಿ ರಚನೆಯಾಗಿದ್ದು ಅಧ್ಯಕ್ಷರಾಗಿ ಕೆ. ಮೊಸಬ್ಬ, ಕಾರ್ಯದರ್ಶಿಯಾಗಿ ಜೆ. ಬಾಲ ಕೃಷ್ಣಶೆಟ್ಟಿ ಆಯ್ಕೆಯಾಗಿ ಕಾರ್ಯನಿರ್ವಹಿ ಸುತ್ತಿದ್ದು, ಇತರೆ ಸಿದ್ದತಾ ಸಮಿತಿಗಳ ರಚನೆ ಯಾಗಿದ್ದು ಸಾಂಸ್ಕೃತಿಕ ಕೆ. ರಾಮದಾಸ್, ಪತ್ರಿಕಾ ಪ್ರಚಾರ ನಾಗೇಶ ಕುಮಾರ್, ಆಹಾರ ಸಮಿತಿ ಸದಾಶಿವಶೆಟ್ಟಿ, ಅತಿಥಿ ವ್ಯವಸ್ಥೆ ಕೃಷ್ಣಕೊಂಚಾಡಿ, ಗೋಡೆಬರಹ ಯಾದವ ಶೆಟ್ಟಿ, ಸ್ವಯಂ ಸೇವಕ ಸಮಿತಿ ಸುನೀಲ್ ಕುಮಾರ್, ಹಾಗೂ ಪುಸ್ತಕ ಪ್ರದರ್ಶನ ಸಮಿತಿಗೆ ಪ್ರಮಿಳಾ ಸಂಚಾಲಕರಾಗಿ ಆಯ್ಕೆಯಾಗಿ ಕಾರ್ಯ ಪ್ರಾರಂಭಿಸಿದ್ದಾರೆ.

**ಮಂಗಳೂರಿಗೆ ಇ.ಕೆ. ನಾಯನಾರ್**

ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ|| ಸೂರ್ಯನಾರಾಯಣ ರಾವ್ ಉದ್ಘಾಟಿಸುವ ಈ ಸಮ್ಮೇಳನಕ್ಕೆ ಮುಖ್ಯ ಅತಿಥಿಗಳಾಗಿ ಪಾಲಿಟ್ ಬ್ಯೂರೋ ಸದಸ್ಯರೂ, ಕೇರಳದ ಮುಖ್ಯ ಮಂತ್ರಿ ಗಳಾದ ಕಾ.|| ಇ.ಕೆ. ನಯನಾರ್ ಭಾಗ ವಹಿಸಲಿದ್ದಾರೆ.

ನೆಹರೂ ಮೈದಾನದಲ್ಲಿ ನಡೆಯಲಿರುವ ಬಹಿರಂಗ ಸಭೆಗೆ ಮುಂಚೆ ಬಾವುಟ ಗುಡ್ಡೆಯಿಂದ ಅತ್ಯಾಕರ್ಷಕ ವರ್ಣರಂಜಿತ ಮೆರವಣಿಗೆ ನಡೆಯಲಿದ್ದು, ಮೆರವಣಿಗೆಯ ಮುಂಚೂಣಿಯಲ್ಲಿ ಒಂದು ಸಾವಿರ ಕೆಂಪು ವಸ್ತ್ರಧಾರಿ ಸ್ವಯಂ ಸೇವಕ ಪಥಸಂಚಲನವಿದ್ದು, ವೈಚಾರಿಕ ವಸ್ತುಗಳನ್ನೊಳಗೊಂಡ ಆಕರ್ಷಕ ಟ್ಯಾಬ್ಲೋ, ವೇಷಭೂಷಣಗಳು ಮತ್ತಿತರೆ ಆಕರ್ಷಕ ಮೆರವಣಿಗೆಯನ್ನು ಯೋಜಿಸಲಾಗಿದೆ.

## ಗಂಗಾವತಿ ತಾಲ್ಲೂಕು ಸಮ್ಮೇಳನ

### ತುಂಗಭದ್ರ ಎಡದಂಡೆ ನಾಲೆ ಶಾಶ್ವತ ದುರಸ್ಥಿಗೆ ಆಗ್ರಹ

ಗಂಗಾವತಿ: ಅಕ್ಟೋಬರ್ 26, 27 ರಂದು ಸಿಪಿಐ(ಎಂ) ತಾಲ್ಲೂಕು ಸಮ್ಮೇಳನ ನಡೆಯಿತು. ಸಮ್ಮೇಳನದ ಅಂಗವಾಗಿ ರ್‍ಯಾಲಿ ಮತ್ತು ಬಹಿರಂಗ ಸಭೆ ನಡೆಯಿತು. 500 ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದ ರ್‍ಯಾಲಿ ಯಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ರ್‍ಯಾಲಿಯ ನಂತರ ಬಹಿರಂಗ ಸಭೆ ನಡೆಯಿತು.

ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ಸಮಿತಿ ಸದಸ್ಯ ಚಂದ್ರಪ್ಪ ಹೊಸ್ಕೆರ ತುಂಗಭದ್ರ ಎಡದಂಡೆ ನಾಲೆ ಇತ್ತೀಚಿನ ದಿನಗಳಲ್ಲಿ ಆಗಾಗ ಒಡೆದು ಹೋಗುವುದರಿಂದ ಇಲ್ಲಿನ ರೈತಾಪಿ ಕೂಲಿಕಾರರ ಬದುಕು ಅಸ್ತವ್ಯಸ್ತಗೊಳ್ಳು ತ್ತದಲ್ಲದೆ ಬೀದಿ ಪಾಲಾಗುವ ಸಂಭವ ಮರು ಕಳಿಸುವುದು. ಆದ್ದರಿಂದ ನಾಲೆಯನ್ನು ಶಾಶ್ವತ ವಾಗಿ ದುರಸ್ಥಿಗೊಳಿಸಬೇಕಾಗಿದೆ ಎಂದು ಆಗ್ರಹಪಡಿಸಿದರು.

ಕನಕಗಿರಿ ಭಾಗದಲ್ಲಿ ಮಳೆಯ ಅಭಾವ ದಿಂದಾಗಿ ಜನತೆ ಬರಗಾಲದ ದವಡೆಗೆ ಸಿಕ್ಕಿ ತೊಂದರೆಗೊಳಗಾಗಿದ್ದಾರೆ. ಆದಷ್ಟು ಬೇಗ ಕಾಮಗಾರಿ ಕೆಲಸ ಪ್ರಾರಂಭಿಸಬೇಕು ಎಂದು ಒತ್ತಾಯಿಸಿದರು.

ಗಂಗಾವತಿ ತಾಲೂಕಿನ ಬಾಪಿರೆಡ್ಡಿ ಕ್ಯಾಂಪ್, ಸಾಗಾಪೂರ, ಹಿರೇಬೆಣಕಲ್ ಮತ್ತು ಸಂಗಾಳ ಗ್ರಾಮಗಳಲ್ಲಿ ಹರಿಜನರ ಮತ್ತು ದಲಿತ ಮಹಿಳೆಯರ ಮೇಲೆ ನಡೆ ಯುವ ಹಲ್ಲೆ, ದಬ್ಬಾಳಿಕೆಯನ್ನು ನಿಯಂತ್ರಿ ಸುವಲ್ಲಿ ಅಧಿಕಾರಿಗಳು ಮುಂಜಾಗ್ರತ ಕ್ರಮ ಕೈಗೊಂಡಿಲ್ಲ ಎಂದು ತಾಲ್ಲೂಕು ಕಾರ್ಯ ದರ್ಶಿ ಬಾಳಪ್ಪ ಆರೋಪಿಸಿದರು.

ನೂತನ ಸಮಿತಿ: 21 ಜನರ ನೂತನ ತಾಲೂಕು ಸಮಿತಿ ರಚಿಸಲಾಯಿತು. ಕಾಂ| ಬಾಳಪ್ಪ ಕಾರ್ಯದರ್ಶಿಯಾಗಿ ಆಯ್ಕೆ ಗೊಂಡರು.

**ಶುಭಾಶಯಗಳು**

ದಾಂಡೇಲಿಯ ಎಂ.ಎಂ.ಕೌಜಗೇರ ಮನೆಯಲ್ಲಿ ಜರುಗಿದ ಸಂತೋಷಕರ ಘಟನೆಯ ನೆನಪಿಗಾಗಿ 'ಐಕ್ಯರಂಗ' ಕ್ಕೆ 125 ರೂ. ದೇಣಿಗೆ ನೀಡಿರುತ್ತಾರೆ. ಈ ಸಂದರ್ಭದಲ್ಲಿ ಅವರಿಗೆ ಐಕ್ಯರಂಗದ ಶುಭಾಶಯಗಳು.




# ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಈ ಮೊದಲು ಹೇಳಿದಂತೆ ಗಾಂಧೀಜಿ ಚೌರಿಚೌರಾದ ಘಟನೆಯಿಂದಾಗಿ



ಇದ್ದಕ್ಕಿದ್ದಂತೆ ಅಸಹಕಾರ ಆಂದೋಲನವನ್ನು ಹಿಂತೆಗೆದುಕೊಂಡದ್ದರಿಂದ ಹಲವರಿಗೆ ಬೇಸರವಾಯಿತು. ಕಾಂಗ್ರೆಸ್ಸಿನ ಪ್ರಮುಖ ಮುಖಂಡರಾದ **ಚಿತ್ತರಂಜನ್ ದಾಸ್, ಮೋತಿಲಾಲ್ ನೆಹರೂ** ಹಾಗೂ **ವಿಠ್ಠಲಭಾಯಿ ಪಟೇಲ್** ಕಾಂಗ್ರೆಸ್ ಅಸಹಕಾರ ಆಂದೋಲನವನ್ನು





ವಿಠಲ್ ಭಾಯಿ ಪಟೇಲ್


ಕೈ ಬಿಟ್ಟು ಮಾಂಟೆಗೊ-ಚೆಲ್ಸ್‌ಫರ್ಡ್ ಸಂವಿಧಾನವನ್ನು ಒಳಗಿನಿಂದಲೇ ನುಚ್ಚುನೂರು ಮಾಡಲು ಶಾಸನ ಸಭೆಗಳನ್ನು ಪ್ರವೇಶಿಸಬೇಕೆಂದು ಪ್ರತಿಪಾದಿಸಿದರು. 1922 ಡಿಸೆಂಬರ್‌ನಲ್ಲಿ ಗಯಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಚಿತ್ತರಂಜನ್ ದಾಸ್ ರವರೇ ಅಧ್ಯಕ್ಷರಾಗಿದ್ದರು. ಆದರೆ ಅವರ ಠರಾವು ಬಿದ್ದುಹೋಯಿತು. ಮೂರು ತಿಂಗಳ ನಂತರ ಚಿತ್ತರಂಜನ್ ದಾಸ್, ಮೋತಿಲಾಲ್ ನೆಹರೂ ಮತ್ತಿತರರು **ಸ್ವರಾಜ್ಯ** ಪಕ್ಷ ರಚಿಸಿ ನವಂಬರ್‌ನಲ್ಲಿ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದರು. ಕಾಂಗ್ರೆಸ್‌ನೊಳಗೆ ಹೀಗೆ ನಿಲುವು ಬದಲಿಸಬೇಕು ಮತ್ತು ಬದಲಿಸಬಾರದು ಎನ್ನುವವರ ನಡುವೆ ತಿಕ್ಕಾಟ ನಡೆಯಿತು. ಕೊನೆಗೊಂದು ಸಂಧಾನವೂ ನಡೆಯಿತು. ಅದರ ಪ್ರಕಾರ ಸ್ವರಾಜ್ಯ ಪಾರ್ಟಿಯವರಿಗೆ ಚುನಾವಣೆಯಲ್ಲಿ ಭಾಗವಹಿಸಲು ಅನುಮತಿ ನೀಡಲಾಯಿತು. ಅದನ್ನೊಪ್ಪದವರು ಖಾದಿ ಇತ್ಯಾದಿ ರಚನಾತ್ಮಕ ಕೆಲಸ ಮಾಡಬೇಕೆಂದು ನಿರ್ಧರಿಸಲಾಯಿತು. ಗಾಂಧೀಜಿ ಸ್ವರಾಜ್ಯ ಪಾರ್ಟಿ ಕಾಂಗ್ರೆಸ್ ಶಾಸಕಾಂಗ ವಿಭಾಗದಂತೆ ಕೆಲಸ ಮಾಡುವುದನ್ನು ಒಪ್ಪಿದರು. ಸ್ವರಾಜ್ಯ ಪಾರ್ಟಿ ಬಂಗಾಳ, ಮಧ್ಯಪ್ರದೇಶ ಮುಂತಾದೆಡೆ ಚುನಾವಣೆಗಳಲ್ಲಿ ಗಮನಾರ್ಹ ಗೆಲುವು ಪಡೆಯಿತು.

ವಿದೇಶಿ ನೆಲದಲ್ಲಿ ಕಮ್ಯುನಿಸ್ಟ್ ಸಿದ್ಧಾಂತವನ್ನು ಸ್ವೀಕರಿಸಿದ ಎಂ.ಎನ್.ರಾಯ್, **ಅಬನಿ ಮುಖರ್ಜಿ, ಬೀರೇಂದ್ರನಾಥ್ ಚಟ್ಟೋಪಾಧ್ಯಾಯ, ಭೂಪೇಂದ್ರ ನಾಥ್ ದತ್ತಾ, ಫಜ್ಲ್ ಇಲಾಹಿ ಕುರ್ಬಾನ್, ದಲೀಪ್ ಸಿಂಗ್ ಗಿಲ್** ಮುಂತಾದವರು ಭಾರತದಲ್ಲಿ ಅದನ್ನು ಪಸರಿಸುವ ಪ್ರಯತ್ನ ಆರಂಭಿಸಿದಾಗ ದಿಗಿಲುಗೊಂಡ ಬ್ರಿಟಿಶರು ಕಮ್ಯುನಿಸ್ಟರ ದಮನವನ್ನು ಆರಂಭಿಸಿದರು. 1924 ರಲ್ಲಿ **ಮುಝಫರ್ ಅಹ್ಮದ್, ಡಾಂಗೆ, ಶೌಕತ್ ಉಸ್ಮಾನಿ** ಹಾಗೂ **ನಳಿನಿ ಗುಪ್ತ**ರವರ ಮೇಲೆ ಬ್ರಿಟಿಶ್ ಸಾಮ್ರಾಜ್ಯದ ವಿರುದ್ಧ ಕಮ್ಯುನಿಸ್ಟ್ ಪಿತೂರಿ ನಡೆಸಿದರೆಂದು ಆಪಾದನೆಯನ್ನು ಹೊರಿಸಿ ಬಂಧಿಸಲಾಯಿತು. ಇದನ್ನು **ಕಾನ್ಪುರ ಬೊಲ್ಶೆವಿಕ್ ಪಿತೂರಿ** ಮೊಕದ್ದಮೆ ಎನ್ನಲಾಯಿತು. ಒಂದು ವರ್ಷದ ನಂತರ ಅನಾರೋಗ್ಯದ ಕಾರಣದಿಂದಾಗಿ ಮುಝಫರ್ ಅಹ್ಮದ್ ಹಾಗೂ ನಳಿನಿ ಗುಪ್ತರನ್ನು ಬಿಡುಗಡೆ ಮಾಡಲಾಯಿತು.


ಆದರೆ ಇಂತಹ ದಮನ ಕ್ರಮಗಳು ವ್ಯತಿರಿಕ್ತ ಪರಿಣಾಮವನ್ನೇ ಬೀರಿದವು. ಹಲವಾರು ಯುವ ಕ್ರಾಂತಿಕಾರಿಗಳು ಕಮ್ಯುನಿಸಂನತ್ತ ಆಕರ್ಷಿತರಾದರು ಮುಂಬೈ, ಕಲ್ಕತ್ತ, ಮದ್ರಾಸ್ ಮತ್ತು ಲಾಹೋರ್‌ಗಳಲ್ಲಿ, ಕೆಲಸ ಮಾಡುತ್ತಿದ್ದ ಕಮ್ಯುನಿಸ್ಟ್ ಗುಂಪುಗಳ ಪ್ರತಿನಿಧಿಗಳು ಸೇರಿ 1925 ರಲ್ಲಿ ಕಾನ್ಪುರದಲ್ಲಿ **'ಮೊದಲ ಭಾರತೀಯ ಕಮ್ಯುನಿಸ್ಟ್ ಸಮ್ಮೇಳನ'** ನಡೆಸಿದರು. ಸಿಂಗಾರವೇಲು ಚೆಟ್ಟಿಯಾರ್ ಇದರ ಅಧ್ಯಕ್ಷತೆ ವಹಿಸಿದರು. ಹಸ್ರತ್ ಮೊಹಾನಿ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಮುಝಫರ್ ಅಹ್ಮದ್, ಎಸ್.ವಿ.ಘಾಟೆ, ಕೆ.ಎಲ್.ಜೋಗಳೇಕರ್, ಬಾಬಾ ಸಂತೋಷ್‌ಸಿಂಗ್, ಮಹಮ್ಮದ್ ಹಸನ್ ಮುಂತಾದವರು ಭಾಗವಹಿಸಿದರು. ಒಂದು ಸಂಕ್ಷಿಪ್ತ ಕಾರ್ಯಕ್ರಮವನ್ನು ಹಾಗೂ ಪಕ್ಷದ ಸಂವಿಧಾನವನ್ನು ಅಂಗೀಕರಿಸಲಾಯಿತು. ಹೊಸ ಕಾರ್ಯಕಾರಿ ಸಮಿತಿಯನ್ನು ಆರಿಸಿ **ಎಸ್.ವಿ.ಘಾಟೆ**ಯವರನ್ನು ಕಾರ್ಯದರ್ಶಿಯಾಗಿ ಚುನಾಯಿಸಲಾಯಿತು.



ಈ ನಡುವೆ ಕ್ರಾಂತಿಕಾರಿಗಳ ಪ್ರಯತ್ನಗಳು ಮತ್ತೆ ಆರಂಭವಾದವು. **ಹಿಂದುಸ್ತಾನ್ ರಿಪಬ್ಲಿಕನ್ ಆರ್ಮಿ** ಸ್ಥಾಪನೆಗೊಂಡಿತು. ಚಂದ್ರಶೇಖರ್ ಆಝಾದ್ ಹಾಗೂ ಭಗತ್ ಸಿಂಗ್ ಇದರ ಮುಖಂಡರು. ಆಗಸ್ಟ್ 9, 1925 ರಂದು ಈ ಸೇನೆಯ ಕ್ರಾಂತಿಕಾರಿಗಳು ಉತ್ತರ ಪ್ರದೇಶದ ಕಾಕೋರಿಯಲ್ಲಿ ರೈಲು ವ್ಯಾನನ್ನು ಲೂಟಿ



ಮಾಡಿದರು. ಬ್ರಿಟಿಶರು ಕಾಕೋರಿ ಪಿತೂರಿ ಮೊಕದ್ದಮೆ ಹೂಡಿದರು. ಇದರಲ್ಲಿ ನಾಲ್ವರು ಕ್ರಾಂತಿಕಾರಿಗಳನ್ನು ಬ್ರಿಟಿಶರು ಗಲ್ಲಿಗೇರಿಸಿದರು- **ರಾಮಪ್ರಸಾದ್ ಬಿಸ್ಮಿಲ್, ಅಷ್ಫಾಕುಲ್ಲಾ, ರೋಶನ್ ಸಿಂಗ್** ಹಾಗೂ **ರಾಜೇಂದ್ರ ಲಹಿರಿ.** 'ಸರ್‌ಫರೋಶೀ ಕಿ ತಮನ್ನಾ ಅಬ್ ಹಮಾರೀ ದಿಲ್ ಮೇ ಹೈ......."(ತಲೆಗೊಡುವ ಆಕಾಂಕ್ಷೆ ಈಗ ನಮ್ಮಮನದಲ್ಲಿದೆ, ನೋಡೋಣ ಕಟುಕನ ಭುಜಗಳಲ್ಲಿ ಎಷ್ಟು ತ್ರಾಣವಿದೆ) ಎಂಬ ಕ್ರಾಂತಿಕಾರಿ ಹಾಡು ನೇಣುಗಂಬವೇರುವಾಗ ರಾಮ್ ಪ್ರಸಾದ್ ಬಿಸ್ಮಿಲ್‌ರ ತುಟಿಗಳಲ್ಲಿತ್ತು. **ಬಿಸ್ಮಿಲ್ ಅಜೀಮಾಬಾದಿ** ರಚಿಸಿದ ಈ ಹಾಡು ಉತ್ತರ ಭಾರತದ ಕ್ರಾಂತಿಕಾರಿಗಳೆಲ್ಲರಲ್ಲಿ ಸ್ಫೂರ್ತಿತುಂಬಿದ ಹಾಡು.




ಇದೇ ಅವಧಿಯಲ್ಲಿ ಬಂಗಾಳದಲ್ಲಿ ದಕ್ಷಿಣೇಶ್ವರ ಬಾಂಬ್ ಕೇಸ್ ಕೂಡಾ ನಡೆಯಿತು. ಪಂಜಾಬಿನಲ್ಲಿ ಬಬ್ಬರ್ ಅಕಾಲಿ ಆಂದೋಲನ ನಡೆಯಿತು. ಗುರುದ್ವಾರಗಳ ದಮನಕಾರೀ ಹಾಗೂ ಭ್ರಷ್ಟ ಪೂಜಾರಿಗಳ ವಿರುದ್ಧ 5000 ಅಕಾಲಿಗಳು ಭಾಗವಹಿಸಿದ ಶಾಂತಿಯುತ ಸತ್ಯಾಗ್ರಹ ನಡೆಯಿತು. ಪೋಲೀಸರು ಇದನ್ನು ನಿರ್ದಯವಾಗಿ ದಮನ ಮಾಡಲು ಆರಂಭಿಸಿದಾಗ ಯುವ ಅಕಾಲಿಗಳ ಗುಂಪೊಂದು ಪೋಲೀಸರೊಂದಿಗೆ ಸಶಸ್ತ್ರ ಸಂಘರ್ಷಕ್ಕಿಳಿದರು. ಇವರನ್ನು ಬಬ್ಬರ್ ಅಕಾಲಿಗಳೆನ್ನಲಾಗುತ್ತದೆ. ಹಲವರು ಈ ಸಂಘರ್ಷದಲ್ಲಿ ಸತ್ತರೆ, ಹಲವರನ್ನು ಮರಣದಂಡನೆಗೆ ಗುರಿಪಡಿಸಲಾಯಿತು.

ಪುಟ 7 ನೋಡಿ

# ಜೈನ್ ಆಯೋಗದ ವರದಿ ಅಸಂಬದ್ಧಗಳ ಕಂತೆ

**ಕಾಂಗ್ರೆಸ್ ಅಪಪ್ರಚಾರಕ್ಕೆಂದು ತಯಾರಿಸಿದ, ಒಂದು ಪಕ್ಷ, ಒಬ್ಬ ವ್ಯಕ್ತಿ ಹಾಗೂ ಇಡೀ ಒಂದು ಜನ ವಿಭಾಗದ ಬಗ್ಗೆ ಒಂದು ಆಯೋಗಕ್ಕೆ ತಕ್ಕುದಲ್ಲದ ಬಗ್ಗೆ ತರೆಕೆಟ್ಟ ಮಾತುಗಳ, ಆಧಾರಹೀನ ತರ್ಕಗಳ, ತನ್ನ ಕಾರ್ಯವ್ಯಾಪ್ತಿಯನ್ನು ಮೀರಿದ, ಏನು ಹೇಳಬೇಕು, ಏನು ಹೇಳಬಾರದು ಎಂಬ ಪರಿಜ್ಞಾನವನ್ನೂ ಕಳಕೊಂಡ ವರದಿ ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸಗಸ್ಯ ಕಾಂ। ಎಸ್.ರಾಮಚಂದ್ರನ್ ಪಿಳ್ಳೈ**



ನಿವೃತ್ತ ನ್ಯಾಯಾಧೀಶ ಮಿಲಾಪ್ ಚಂದ್ ಜೈನ್

ಕಾಂಗ್ರೆಸ್ ಜೈನ್ ಆಯೋಗದ ವರದಿಯನ್ನು ಅವಲಂಬಿಸುವಂತೆ ಮಾಡಿದ್ದು ಮಿತಿಮೀರಿದ ಹತಾಶೆಯೇ ಅಥವಾ ರಾಜಕೀಯ ಮಂದದೃಷ್ಟಿಯೇ? ಕಾಂಗ್ರೆಸ್ ಪಕ್ಷದೊಳಗಿನ ವಿವಿಧ ಕಿತ್ತಾಡುವ ಗುಂಪುಗಳು ಈ ವರದಿಯನ್ನು ತಮ್ಮ ಪರಸ್ಪರ ಮಾರಕ ಹಿತಾಸಕ್ತಿಗಳಿಗಾಗಿ ಬಳಸಿಕೊಳ್ಳಲು ಸರ್ವಪ್ರಯತ್ನ ನಡೆಸಿವೆ. ಕಿತ್ತಾಡುವ ಈಗುಂಪುಗಳ ಕ್ರಮಗಳು, ಪ್ರತಿಕ್ರಮಗಳು, ಕಾಂಗ್ರೆಸ್ ಮುಖಂಡತ್ವದ ದಿವಾಳಿಕೋರತನ ಆ ಪಕ್ಷವನ್ನು ಅತ್ಯಂತ ತೀವ್ರ ಬಿಕ್ಕಟ್ಟಿನಲ್ಲಿ ಸಿಲುಕಿಸಿದೆ.

ವಿವೇಕಿಯಾದ ಯಾವ ವ್ಯಕ್ತಿಯೂ ಜೈನ್ ಆಯೋಗದ ಈ ಮಧ್ಯಾವಧಿ ವರದಿಯನ್ನು ವಿಶ್ವಾಸಯೋಗ್ಯ ಎಂದು ಭಾವಿಸುವಂತಿಲ್ಲ. ಒಂದು ತನಿಖಾ ಆಯೋಗದಿಂದ ನಿರೀಕ್ಷಿಸಲಾಗದ ಆಧಾರವಿಲ್ಲದ ವಿಪರೀತ ಅಭಿಪ್ರಾಯಗಳ ಒಂದು ಕಪೋಲಕಲ್ಪನೆಯದು.

ಭಾರತ ಸರಕಾರ ದಿಲ್ಲಿ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯನ್ಯಾಯಾಧೀಶ ನ್ಯಾಯಮೂರ್ತಿ ಎಂ.ಸಿ.ಜೈನ್‌ರನ್ನು ಎರಡು ಅಂಶಗಳ ಬಗ್ಗೆ ತನಿಖೆ ಮಾಡಲು ನೇಮಿಸಿತ್ತು. ಒಂದು ರಾಜೀವ್ ಗಾಂಧಿಯವರ ಹತ್ಯೆಗೆ ಕಾರಣವಾದ ಎಲ್ಲಾ ಘಟನಾವಳಿ ಹಾಗೂ ವಾಸ್ತವ ಸಂಗತಿಗಳ ತನಿಖೆ, ಇದರಲ್ಲಿ ಏನಾದರೂ ಪಿತೂರಿಯಿತ್ತೆ ಇದ್ದರೆ ಅದರ ಪೂರ್ಣ ಹರವನ್ನು ತನಿಖೆ ಮಾಡುವುದು, ಇದರ ಕಾರ್ಯವ್ಯಾಪ್ತಿ. ಆರು ದೀರ್ಘ ವರ್ಷಗಳ ನಂತರ ಆಗಸ್ಟ್ 28, 1997 ರಂದು ಆಯೋಗ ಸಲ್ಲಿಸಿದ ಮಧ್ಯಾವಧಿ ವರದಿ ಮೊದಲ ಅಂಶದ ಮೊದಲ ಭಾಗಕ್ಕಷ್ಟೇ ಸಂಬಂಧಪಟ್ಟದ್ದು. ಉಳಿದೆಲ್ಲಾ ಅಂಶಗಳನ್ನು ಅಂತಿಮ ವರದಿಯಲ್ಲಿ ಚರ್ಚಿಸಲಾಗುವುದಂತೆ. ಈ ಮಧ್ಯಾವಧಿ ವರದಿಯನ್ನು ಸರಕಾರ ಕೈಗೊಂಡ ಕ್ರಮಗಳವರದಿ' (ATR) ಯೊಂದಿಗೆ ನವಂಬರ್ 19, 1997 ರಂದು ಸಂಸತ್ತಿನಲ್ಲಿ ಮಂಡಿಸಿತು.

**ಆರಂಭ ಆಧಾರವಿಲ್ಲದ ಹೊಗಳಿಕೆಗಳಿಂದಲೇ**

17 ಸಂಪುಟಗಳ ದಪ್ಪ ವರದಿ ರಾಜೀವ್ ಗಾಂಧಿಯವರ ವ್ಯಕ್ತಿಚಿತ್ರದೊಂದಿಗೆ ಆರಂಭವಾಗುತ್ತದೆ. ಮಾನವ ಹಕ್ಕುಗಳ ಪ್ರತಿಪಾದಕ, ಶೋಷಣೆ, ದಮನದ ವಿರೋಧಿ, 1989 ರಲ್ಲಿ ಅಧಿಕಾರ ಕಳಕೊಂಡರೂ ಮೇ 1991 ರ ಸಾರ್ವತ್ರಿಕ ಚುನಾವಣೆಗಳ ನಂತರ ಮತ್ತೆ ದೇಶದ ಪ್ರಧಾನ ಮಂತ್ರಿಯಾಗುವುದು ಖಂಡಿತವೆನ್ನುವಂತಹ ಜನಪ್ರಿಯತೆಯ ಉತ್ತುಂಗದಲ್ಲಿದ್ದರು ಎಂದೆಲ್ಲಾ ಹಾಡಿ ಹೊಗಳಲಾಗಿದೆ. ಈ ಆಧಾರವಿಲ್ಲದ ಹೊಗಳಿಕೆಗಳ ಉದ್ದೇಶವೇನು? ಕಾಂಗ್ರೆಸ್ ತನ್ನ ಪ್ರಚಾರಯಂತ್ರದಲ್ಲಿ ಅದನ್ನು ಬಳಸಿಕೊಳ್ಳಲಿ ಎಂದೇ ಅಲ್ಲವೇ?

ಕಾಂಗ್ರೆಸ್ ಈ ಮಧ್ಯಾವಧಿ ವರದಿಯಲ್ಲಿ ಡಿಎಂಕೆ, ರಾಷ್ಟ್ರೀಯ ರಂಗ ಸರ್ಕಾರ ಹಾಗೂ ವಿ.ಪಿ.ಸಿಂಗರನ್ನು ದೊಡ್ಡ ದನಿಯಲ್ಲಿ ಖಂಡಿಸುತ್ತಿದೆ. ಮೇ 27, 1991 ರಂದು ನೇಮಿಸಿದ ನ್ಯಾಯಮೂರ್ತಿ ಜೆ.ಎಸ್. ವರ್ಮಾರವರ(ಈಗ ಭಾರತದ ಮುಖ್ಯ ನ್ಯಾಯಾಧೀಶರು) ಆಯೋಗದ ವರದಿಯ ಬಗ್ಗೆ ಹಾಗೂ ಆಗಿನ ಕಾಂಗ್ರೆಸ್ ಸರಕಾರ ತಯಾರಿಸಿದ 'ಕೈಗೊಂಡ ಕ್ರಮಗಳ' ವರದಿಯ ಬಗ್ಗೆ ಅದು ಮೌನವಾಗಿದೆ. ಈ ಮೌನಕ್ಕೆ ಕಾರಣ ಹುಡುಕಲು ಎಲ್ಲಿಗೂ ಹೋಗಬೇಕಾಗಿಲ್ಲ. ವರ್ಮಾ ಆಯೋಗದ ವರದಿ ತನ್ನ ಮುಖಂಡರಿಗೆ ಅತ್ಯಂತ ಮುಜುಗರ ಉಂಟುಮಾಡುವಂತದ್ದಾದ್ದರಿಂದ ಕಾಂಗ್ರೆಸ್ ಅದನ್ನು ಹೂತು ಬಿಡಲು ಬಯಸುತ್ತದೆ.

ನ್ಯಾಯಮೂರ್ತಿ ವರ್ಮಾ ಆಯೋಗದ ವರದಿಯನ್ನು ಕುರಿತು 'ಕೈಗೊಂಡ ಕ್ರಮಗಳ ವರದಿ'ಯನ್ನು ನರಸಿಂಹರಾವ್ ಸರಕಾರ ತಯಾರಿಸಿತ್ತು. ಎಸ.ಬಿ.ಚವ್ಹಾಣ್, ಸೀತಾರಾಂ ಕೇಸರಿ, ಅರ್ಜುನ್ ಸಿಂಗ್, ಪ್ರಣಬ್ ಮುಖರ್ಜಿ, ಗುಲಾಂ ನಬಿ ಆಝಾದ್ ಇವರೆಲ್ಲ ಆ ಮಂತ್ರಿ ಮಂಡಲದಲ್ಲಿದ್ದರು. ಆ ಕಾಂಗ್ರೆಸ್ ಸರಕಾರ ವಿ.ಪಿ.ಸಿಂಗ್ ಹಾಗೂ ಚಂದ್ರಶೇಖರ್ ನೇತೃತ್ವದ ಸರಕಾರಗಳು ಮತ್ತು ಗುಪ್ತಚರ ವಿಭಾಗ ದ ಲೋಪವಾಗಿದೆಯೆಂದು ವರ್ಮಾ ಆಯೋಗ ಗುರುತಿಸಿದ ಅಂಶಗಳನ್ನು ಒಪ್ಪಲಿಲ್ಲ.

ವರ್ಮಾ ಆಯೋಗ ರಾಜೀವ್ ಗಾಂಧಿಯವರ ಭದ್ರತೆಗೆ ಸಂಬಂಧಪಟ್ಟಂತೆ ಕಾಂಗ್ರೆಸ್(ಐ) ಪಕ್ಷ ದಿಂದಾಗಿರುವ ಲೋಪ, ಅಶಿಸ್ತು, ಪೋಲೀಸರೊಂದಿಗೆ ಸಹಕರಿಸುವಲ್ಲಿ ಅದರ ಬೇಜವಾಬ್ದಾರಿತನದ ಬಗ್ಗೆ ಮಾಡಿರುವ ಟೀಕೆಗಳನ್ನು ಕಾಂಗ್ರೆಸ್ ಕೇಂದ್ರ ಸರ್ಕಾರ ಒಪ್ಪಿತ್ತು ಎಂಬುದು ಕೂಡಾ ಈ 'ಕೈಗೊಂಡ ಕ್ರಮಗಳ ವರದಿ' ಯಿಂದ ಸ್ಪಷ್ಟವಾಗುತ್ತದೆ.

**ಪ್ರಾಮಾಣಿಕ ಕಾಳಜಿಯಿದೆಯೇ?**

1992 ರಲ್ಲಿ ಹಿಂದಿನ ರಾಷ್ಟ್ರೀಯ ರಂಗ ಕೇಂದ್ರ ಸರಕಾರವನ್ನು ದೋಷಮುಕ್ತಗೊಳಿಸಿದ ಕಾಂಗ್ರೆಸ್ ಮುಖಂಡರು ಈಗ ಅದನ್ನು ಟೀಕೆಗೊಳಪಡಿಸುತ್ತಿರುವುದು ವಿಚಿತ್ರ ಸಂಗತಿ. ಕಾಂಗ್ರೆಸ್‌ಗೆ ನಿಜವಾಗಿಯೂ ಜೈನ್ ಆಯೋಗದ ವರದಿಯ ಬಗ್ಗೆ ಪ್ರಾಮಾಣಿಕ ಕಾಳಜಿಯಿದ್ದರೆ ವಿ.ಪಿ.ಸಿಂಗ್ ಹಾಗೂ ಚಂದ್ರಶೇಖರ್ ಸರ್ಕಾರಗಳ ಮೇಲಿನ ಎಲ್ಲಾ ಆರೋಪಗಳನ್ನು ನಿರಾಕರಿಸಿದ ಈಗ ಕಾಂಗ್ರೆಸ್ಸಿನ ಉಚ್ಚ ಮುಖಂಡರಾಗಿರುವ ಆ ಎಲ್ಲಾ ಮಂತ್ರಿಗಳ ವಿರುದ್ಧ ಕ್ರಮ ಕೈಗೊಳ್ಳಲಿ. ಆಗ ಮಾತ್ರ ಸಾರ್ವಜನಿಕರು ಕಾಂಗ್ರೆಸ್‌ನ ಈಗಿನ ಕಾಳಜಿಯ ಪ್ರಾಮಾಣಿಕತೆಯನ್ನು ಒಪ್ಪಲು ಸಾಧ್ಯ. ಜೈನ್ ಆಯೋಗ ಈ ಹಿಂದೆ ಕಾಂಗ್ರೆಸ್ ಮಂತ್ರಿಗಳೇ ನಿರಾಕರಿಸಿದ ಆಪಾದನೆಗಳನ್ನಷ್ಟೇ ಮತ್ತೆ ರಾಷ್ಟ್ರೀಯ ರಂಗ ಸರ್ಕಾರ, ಗುಪ್ತಚಾರ ವಿಭಾಗ ಹಾಗೂ ವಿ.ಪಿ.ಸಿಂಗ್ ಮೇಲೆ ಹೊರಿಸಿದೆ. ವರ್ಮಾ ಆಯೋಗ ಗುರುತಿಸಿದಂತೆ ಭದ್ರತಾ ವ್ಯವಸ್ಥೆಯನ್ನು ತಲೆಕೆಳಗೆ ಮಾಡಿ ಆ ಮೂಲಕ ರಾಜೀವ್ ಗಾಂಧಿಯವರ ಹತ್ಯೆಗೆ ಸೌಲಭ್ಯ ಕಲ್ಪಿಸಿಕೊಟ್ಟ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಯಾರ ಮೇಲೂ ಯಾವ ಶಿಸ್ತಿನ ಕ್ರಮವನ್ನೂ ಕೈಗೊಂಡಿಲ್ಲ. ಆದ್ದರಿಂದ ಕಾಂಗ್ರೆಸ್ ಪಕ್ಷ ಈಗ ಹರಿಯಬಿಟ್ಟಿರುವ ಪ್ರಚಾರ ಸುಳ್ಳುಗಳು, ಅರೆ ಸತ್ಯಗಳು ಹಾಗೂ ವಿಕೃತಿಗಳಿಂದ ಕೂಡಿದ ಅಪ ಪ್ರಚಾರವಷ್ಟೆ.

**ತಲೆಕೆಟ್ಟ ಮಾತುಗಳು ಆಧಾರಹೀನ ಆಪಾದನೆ**

ಜೈನ್ ಆಯೋಗದ ದಪ್ಪನೆಯ ವರದಿಯಲ್ಲೂ ಡಿ.ಎಂ.ಕೆ.ಗೂ ರಾಜೀವ್ ಗಾಂಧಿಹತ್ಯೆಗೂ ಯಾವುದೇ ರೀತಿಯ ಒಂದು ನೇರ ಸಂಬಂಧವಿತ್ತು ಎಂದು ಸಾಬೀತು ಪಡಿಸುವ ಯಾವುದೇ ಅಂಶ ಇಲ್ಲ. ಅಲ್ಲದೆ ಈ ಹತ್ಯೆಯ ತನಿಖೆ ನಡೆಸಿದ ವಿಶೇಷ ತನಿಖಾ ತಂಡ ಆಪಾದನೆಗೆ ಗುರಿಪಡಿಸಿದವರ ವಿಚಾರಣೆ ಮುಗಿದಿದ್ದು ವಿಶೇಷ ನ್ಯಾಯಾಧೀಶರು ಈ ಬಗ್ಗೆ ತೀರ್ಪನ್ನು ಕಾದಿರಿಸಿದ್ದಾರೆ. ಹೀಗಿದ್ದರೂ ಕಾಂಗ್ರೆಸ್ ಪಕ್ಷ ಡಿ.ಎಂ.ಕೆ.ಯ ವಿರುದ್ಧ ಬುಡವಿಲ್ಲದ ಆಪಾದನೆ ಹಾಕುತ್ತಿದೆ, ಡಿ.ಎಂ.ಕೆ. ಮಂತ್ರಿಗಳನ್ನು ಕೇಂದ್ರ ಮಂತ್ರಿ ಮಂಡಲದಿಂದ ಕೈ ಬಿಡಬೇಕೆಂದು ಒತ್ತಾಯಿಸುತ್ತಿದೆ. ರಾಜೀವ್ ಗಾಂಧಿಯವರ ಹತ್ಯೆಯ ಮೇಲೆ ಭಾವೋದ್ರೇಕ ಎಬ್ಬಿಸಿ ಮತ್ತೆ ಅಧಿಕಾರ ಪಡೆಯುವುದು ಸಾಧ್ಯವಾಗಬಹುದೆಂಬ ಆಸೆಯಿಂದ ಅವರು ಜೈನ್ ಆಯೋಗದ ವರದಿಯನ್ನು ಬಳಸುತ್ತಿದ್ದಾರೆ.

ಜೈನ್ ಆಯೋಗದ ವರದಿ ತಮಿಳು ಜನತೆಯ ಬಗ್ಗೆಯಂತೂ ತಲೆಕೆಟ್ಟವರ ರೀತಿಯ ಮಾತುಗಳನ್ನಾಡಿದೆ. ಅವರೆಲ್ಲಾ ರಾಷ್ಟ್ರ-ವಿರೋಧಿಗಳು ಎಂಬಂತಹ ಆಧಾರಹೀನ ಆಪಾದನೆಗಳನ್ನು ಹಾಕಿದೆ-

*"ವಿವಿಧ ಕಾಲಾವಧಿಗಳಲ್ಲಿ ಅವರ ಉಗ್ರವಾದಿತನದ ಸ್ವರೂಪ ಮತ್ತು ಮಟ್ಟಗಳು ವಿಭಿನ್ನವಾಗಿದ್ದು ಒಂದು ಕಾಲಾವಧಿಯಲ್ಲಿ ಅಂದು ರಾಷ್ಟ್ರ-ವಿರೋಧಿ ಸ್ವರೂಪ ಪಡೆದುಕೊಂಡು ತಮಿಳು ಜನಗಳ ಸಾಮಾಜಿಕ ಹಂದರದ ಒಳಹೊಕ್ಕಿತು. ಆ ಜನಾಂಗೀಯ ಪ್ರಶ್ನೆ ಎಲ್ಲಾ ತಮಿಳರಿಗೆ ಒಂದು ಭಾವನಾತ್ಮಕ ಪ್ರಶ್ನೆಯಾದ್ದರಿಂದ ಎಲ್ಲಾ ರಾಜಕೀಯ ಪಕ್ಷಗಳು ಇದರಲ್ಲಿ ಸಿಲುಕಿಕೊಂಡವು. ಎಲ್.ಟಿ.ಟಿ.ಇ. ಯುವರು ಮತ್ತು ತಮಿಳುನಾಡಿನ ತಮಿಳರ ನಡುವೆ ಆಳವಾದ ಶಾಮೀಲಿಲ್ಲದಿದ್ದರೆ ರಾಜ್ಯದ ಅಧಿಕಾರಿಗಳು ಹಾಗೂ ಕಾನೂನುಜಾರಿ ಸಂಸ್ಥೆಗಳ ಪರೋಕ್ಷ ಬೆಂಬಲವಿಲ್ಲದಿದ್ದರೆ ಶ್ರೀರಾಜೀವ್ ಗಾಂಧಿಯವರ ಹತ್ಯೆ ಅಂದು ನಡೆದ ರೀತಿಯಲ್ಲಿ ಸಂಭವಿಸುತ್ತಿರಲಿಲ್ಲ"*

ಎಂಬ ಪದಗಳನ್ನು ಜೈನ್ ವರದಿಯಲ್ಲಿ ಬಳಸಲಾಗಿದೆ. ಇವು ಇಂದಿರಾಗಾಂಧಿಯವರ ಹತ್ಯೆ ನಂತರ ಕಾಂಗ್ರೆಸ್ ಪಕ್ಷದ ಕೆಲವು ಮುಖಂಡರು ದಿಲ್ಲಿಯಲ್ಲಿ ಭಾವೋನ್ಮಾದ ಬಡಿದೆಬ್ಬಿಸಲು ಬಳಸಿದ ಪದಗಳನ್ನು ನೆನಪಿಸುತ್ತದೆ. ಆ ಪದಗಳಿಂದಾಗಿ ದಿಲ್ಲಿಯಲ್ಲಿ ಸಾವಿರಾರು ಅಮಾಯಕ ಸಿಖ್ಖರನ್ನು ಅಮಾನುಷವಾಗಿ ಕೊಚ್ಚಿಹಾಕಲಾಯಿತು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬೇಕು. ಎಲ್ಲಾ ತಮಿಳು ಭಾಷಿಕ ಜನರು ರಾಷ್ಟ್ರ-ವಿರೋಧಿಗಳು ಎಂಬ ಭಾವನೆಯುಂಟು ಮಾಡುವ ಜೈನ್ ಆಯೋಗದ ಈ ಆವಲೋಕನ ಅತ್ಯಂತ ಖಂಡನಾರ್ಹ.

*'ಶ್ರೀಲಂಕಾ ತಮಿಳರ ಉಗ್ರಗಾಮಿತನ 1981 ರಿಂದ 1986 ರ ಅವಧಿಯಲ್ಲಿ ಬೇರು ಬಿಟ್ಟು ಬೆಳೆಯಿತು ಎಂಬುದು ನಿಜವಾದರೂ, ಅದು ಹತೋಟಿಯಲ್ಲಿತ್ತು. ರಾಷ್ಟ್ರವಿರೋಧಿ ಸ್ವರೂಪವನ್ನು ಪಡೆದಿರಲಿಲ್ಲ. ಆಗಿನ ಎಂ.ಜಿ.ಆರ್. ಸರಕಾರ ನೇರವಾಗಿಯೂ, ಪರೋಕ್ಷವಾಗಿಯೂ ಶ್ರೀಲಂಕಾ ಉಗ್ರಗಾಮಿಗಳನ್ನು ಬೆಂಬಲಿಸಿತು. ಶ್ರೀ ವಿ.ಪ್ರಭಾಕರನ್ ಅವರಿಗೆ ಬಹಳ ನಿಕಟವಾಗಿದ್ದರು. ಕೇಂದ್ರ ಕೂಡಾ ತರಬೇತಿ ಮತ್ತು ಶಸ್ತ್ರಾಸ್ತ್ರಗಳ ಮೂಲಕ ಉಗ್ರಗಾಮಿಗಳಿಗೆ ನೆರವಾಯಿತು. ಆಗ ಮುಖಂಡರು ಜನಾಂಗೀಯ ಪ್ರಶ್ನೆಯ ಶಾಂತಿಯುತ ಇತ್ಯರ್ಥಕ್ಕಾಗಿ ಉಗ್ರಗಾಮಿ ಗಳನ್ನು ಭೇಟಿಯಾಗುತ್ತಿದ್ದರೇ ವಿನಹ ಉಗ್ರಗಾಮಿ ಚಟುವಟಿಕೆಗಳನ್ನು ಪ್ರೋತ್ಸಾಹಿಸಲಿಕ್ಕೆ ಅಲ್ಲ"*

ಪುಟ 5 ಕ್ಕೆ

# ಪಾತಳಕ್ಕೆ ಇಳಿಯುತ್ತಿರುವ ರೂಪಾಯಿ

**ವಾರದ ಆರ್ಥಿಕ ಟಿಪ್ಪಣಿಗಳು**

**ಜಿ.ಎಸ್.ಮಣಿ**

ಭಾರತದ ನಾಣ್ಯವಾದ ರೂಪಾಯಿ ಈಗ ಡಾಲರಿಗೆದುರು ಕುಸಿಯುತ್ತಾ ಪಾತಳಕ್ಕೆ ಇಳಿಯುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಮೊದಲು ಇದು ಸಹಜ ಕ್ರಿಯೆ, ರೂಪಾಯಿ ಈ ಮೂಲಕ ತನ್ನ ನಿಜ ಮೌಲ್ಯವನ್ನು ಕಂಡುಕೊಳ್ಳುತ್ತದೆ ಎಂದು ಸುಮ್ಮನೆ ಕುಳಿತಿತ್ತು. ಆದರೆ ರೂಪಾಯಿ ಪರಿಸ್ಥಿತಿ ಶೋಚನೀಯವಾದ ಮೇಲೆ ಮಧ್ಯ ಪ್ರವೇಶ ಮಾಡಿತು. ಆದರೂ ರೂಪಾಯಿಯ ಬೆಲೆ ಕುಸಿಯುತ್ತಲೆ ಇದೆ.

ಈ ಕುಸಿತ ಕಂಡು ಕಂಗಾಲಾದ ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ ॥ ರಂಗರಾಜನ್ ಒಂದು ಪತ್ರಿಕಾ ಹೇಳಿಕೆ ನೀಡಿದರು. 'ರೂಪಾಯಿ ತನ್ನ ಮೌಲ್ಯವನ್ನು ಹೊಂದಿಸಿಕೊಳ್ಳುತ್ತಿದೆ. ಅದರ ನಿಜ ಮೌಲ್ಯದ ವರೆಗೆ ಇಳಿದ ನಂತರ ಮತ್ತೆ ಅದರ ಬೆಲೆ ಕುಸಿಯಲು ಕಾರಣಗಳಿಲ್ಲ. ಯಾಕೆಂದರೆ ಆರ್ಥಿಕದ ಮೂಲಭೂತಗಳು ಗಟ್ಟಿಯಾಗಿವೆ. ಆದ್ದರಿಂದ ಏನಾದರೂ ಅವಶ್ಯಕತೆ ಬಿದ್ದರೆ ಭಾರತೀಯ ರಿಸರ್ವ್ ಬ್ಯಾಂಕ್ ಮಧ್ಯಪ್ರವೇಶಿಸಲು ಹಿಂಜರಿಯುವುದಿಲ್ಲ ಎಂದರು. ಆದರೆ ರೂಪಾಯಿ ಮಾತ್ರ ಕುಸಿಯುತ್ತಲೇ ಇದೆ.

ಇಲ್ಲಿ ರೂಪಾಯಿ ಕುಸಿತವನ್ನೇ ಬಯಸುವವರಿದ್ದಾರೆ. ಅವರು ರಫ್ತುದಾರರು. ಈ ರಫ್ತುದಾರರಿಗೆ ಡಾಲರುಗಳು ಬರುವದರಿಂದ ಪ್ರತಿ ಡಾಲರಿನ ರೂಪಾಯಿ ಬೆಲೆ ಹೆಚ್ಚಿರುವುದರಿಂದ ಅವರಿಗೆ ಹೆಚ್ಚಿಗೆ ಲಾಭ ಉದಾಹರಣೆಗೆ ಒಂದು ಡಾಲರಿಗೆ ಬೆಲೆ 35-50ಇದ್ದದ್ದು 38-50 ಕ್ಕೇರಿದರೆ ಅದರ ಅರ್ಧ ರುಪಾಯಿಯ ಬೆಲೆ ಕಡಿಮೆಯಾಯಿತೆಂದು. ರಫ್ತುಧಾರರಿಗೆ ಲಾಭ ಹೆಚ್ಚಾಗುತ್ತದೆ. ಈ ರಫ್ತುದಾರರು ರೂಪಾಯಿಯ ಅಪಮೌಲ್ಯೀಕರಣ ಮಾಡಬೇಕೆಂದೇ ಸರ್ಕಾರದ ಮೇಲೆ ಒತ್ತಡ ಹೇರುತ್ತಲೇ ಇದ್ದರು.

ರೂಪಾಯಿಯ ಬೆಲೆ ಕುಸಿಯುವುದಕ್ಕೆ ಕಾರಣವೇನು ? ಸರ್ಕಾರವೇ ಇದನ್ನು ಪರೋಕ್ಷವಾಗಿ ಮಾಡಿದೆ ಎನ್ನುವವರಿದ್ದಾರೆ. ಸರ್ಕಾರ ಚಿನ್ನದ ಆಮದನ್ನು ಉದಾರೀಕರಿಸಿದಾಗ ಡಾಲರಿಗೆ ಹೆಚ್ಚು ಬೇಡಿಕೆ ಬಂತು. ಬೇಡಿಕೆಯೊಡನೆ ಡಾಲರಿನ ಬೆಲೆ ಏರತೊಡಗಿತು. ಇದು ಒಂದು ಕಾರಣ.

ಎರಡನೇಯದಾಗಿ ರೂಪಾಯಿ ಬೆಲೆ ಕುಸಿಯತೊಡಗಿದಾಗ ಕಂಪನಿಗಳು ವಿದೇಶಿ ನಾಣ್ಯದ ಸಾಲವನ್ನು ವಾಪಸ್ಸು ಮಾಡತೊಡಗಿದರು. ಅವರಿಗೆ ವಿದೇಶಿ ನಾಣ್ಯದ ಅವಶ್ಯಕತೆ ಉಂಟಾಯಿತು. ಡಾಲರಿಗೆ ಈ ಮೂಲಕವೂ ಬೇಡಿಕೆ ಹೆಚ್ಚಾಯಿತು. ರೂಪಾಯಿಯ ಬೆಲೆ ಕುಸಿಯತೊಡಗಿತು.

ಇದರ ಪರಿಣಾಮ ಏನಾಗುತ್ತದೆ ? ರೂಪಾಯಿಯ ಬೆಲೆ ಕುಸಿದರೆ ಅದರಿಂದ ನಮ್ಮ ಆಮದಿನ ಖರ್ಚು ಹೆಚ್ಚಾಗಿ ದೇಶದೊಳಗೆ ವಿವಿಧ ಸರಕುಗಳ ಬೆಲೆ ಹೆಚ್ಚಾಗುತ್ತದೆ. ಉದಾಹರಣೆಗೆ ಪೆಟ್ರೋಲಿಯಂ ಉತ್ಪನ್ನಗಳ ಆಮದು ಬೆಲೆ ಹೆಚ್ಚಿದೊಡನೆ ಅವುಗಳ ಆಂತರಿಕ ಬೆಲೆಯು ಹೆಚ್ಚುತ್ತದೆ. ಸಾಗಾಣಿಕೆ ಬೆಲೆ ಹೆಚ್ಚಾದದ್ದರಿಂದ ಈ ಸರಕುಗಳ ಬೆಲೆಯೂ ಹೆಚ್ಚುತ್ತದೆ. ಈ ಬೆಲೆ ಹೆಚ್ಚಳದ ಹೊರೆಯನ್ನು ಯಾರು ಹೊರುತ್ತಾರೆ. ನಮ್ಮ ದೇಶದ ಜನ ಸಾಮಾನ್ಯರು.

ಉದಾರೀಕರಣ ತರುವ ಈ ಸರಣಿ ಘಟನೆಗಳ ಭಾರ ಜನ ಸಾಮಾನ್ಯರ ಮೇಲೆ, ದುಡಿಯುವ ಜನರ ಮೇಲೆ. ಅದೇ ಉದಾರೀಕರಣ, ಖಾಸಗೀಕರಣಗಳ ಉದ್ದೇಶ. ಬಂಡವಾಳಿಗರಲ್ಲಿ (ಎಲ್ಲರಿಗೂ ಅಲ್ಲದಿದ್ದರೂ ಬಹುತೇಕರಿಗೆ) ಇದರಿಂದ ಹೆಚ್ಚಿನ ಲಾಭ.ಇದು ಉದಾರೀಕರಣದ ನ್ಯಾಯ.

# ಹೊರ ಹರಿದು ಹೋಗುತ್ತಿರುವ ಹಾಟ್ ಮನಿ

ಭಾರತದಲ್ಲಿ ಸಂಪನ್ಮೂಲಗಳ ಕೊರತೆ ಇದೆ. ಉದಾರೀಕರಣ ಮಾಡಿದರೆ ವಿದೇಶಗಳಿಂದ ಬಂಡವಾಳ ಹರಿದು ಬಂದು ದೇಶದ ಅಭಿವೃದ್ಧಿಗೆ ನೆರವಾಗುತ್ತದೆ ಎಂಬುದು ಉದಾರೀಕರಣವಾದಿಗಳ ಒಂದು ವಾದ.

ಹೀಗೆ ದೇಶದೊಳಕ್ಕೆ ಹೂಡಿಕೆಗಾಗಿ ಹರಿದು ಬರುವ ಹಣ 'ಹಾಟ್ ಮನಿ' ಅಂದರೆ ಬಿಸಿ ನಾಣ್ಯ. ಯಾಕೆಂದರೆ ಇದು ದೇಶೀ ಕಂಪನಿಗಳ ಶೇರುಗಳಲ್ಲಿ ಹೂಡಲ್ಪಡುತ್ತದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಆದಷ್ಟು ಬೇಗ ಲಾಭ ಮಾಡಿಕೊಂಡು ಹೊರಹೋಗುವ ಆತುರಗಾರರು. ನಮ್ಮ ದೇಶದ ಬೆಳವಣಿಗೆ ಬಗ್ಗೆ ಅವರ ಕಾಳಜಿಯಿಲ್ಲ. ಅವರ ಕಾಳಜಿಯಿರುವದೆಲ್ಲ ಅವರ ಲಾಭದಲ್ಲಿ. ಇದು ಈ ಉದಾರೀಕರಣವಾದಿಗಳಿಗೆ ಪ್ರತಿವಾದ.

ಈಗ ವಿದೇಶೀ ಹೂಡಿಕೆ ಹೊರ ಹೋಗುತ್ತಿರುವುದು ಸ್ಪಷ್ಟ. ಆಗ್ನೇಯ ಏಶಿಯಾದಲ್ಲಿನ ನಾಣ್ಯ ಬಿಕ್ಕಟ್ಟಿನಿಂದಾಗಿ ವಿದೇಶಿ ಹೂಡಿಕೆದಾರರು ಕಂಗಾಲಾಗಿದ್ದಾರೆ. ಎಲ್ಲಿ ತಮ್ಮ ಹೂಡಿಕೆಗೆ ತಕ್ಕ ಪ್ರತಿಫಲ ಲಾಭದ ರೂಪದಲ್ಲಿ ದೊರೆಯುವ ಬದಲು ಹಾನಿಯ ರೂಪದಲ್ಲಿ ದೊರತರೆ ಎಂಬ ಭಯ ಅವರದ್ದು.

ಆಗ್ನೇಯ ಏಶಿಯಾದ ದೇಶಗಳಾದ ಥಾಯ್‌ಲ್ಯಾಂಡ್, ಮಲೇಶಿಯಾ, ಇಂಡೋನೇಷಿಯಾಗಳಲ್ಲಿ ನಾಣ್ಯ ಬಿಕ್ಕಟ್ಟು ಉಂಟಾದ್ದರಿಂದ ಶೇರು ಮಾರುಕಟ್ಟೆಯಲ್ಲಿ ಬೆಲೆಗಳು ಏಕಾಏಕಿ ಕುಸಿದು ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಗೆ ಹಾನಿಯುಂಟಾಯಿತು. ಇದನ್ನು ನೋಡಿದ ಅವರು ಭಾರತದಲ್ಲಿ ಪರಿಸ್ಥಿತಿ ಉತ್ತಮವಾಗಿರುವಾಗಲೇ ಶೇರುಗಳನ್ನು ಮಾರಿ ಬರುವಷ್ಟನ್ನು ಬಾಚಿಕೊಳ್ಳುವ ಆತುರ ತೋರಿದರು.

| | ಒಟ್ಟು ವಿದೇಶಿ ಸಾಂಸ್ಥಿಕ ಹೂಡಿಕೆದಾರರು | ಒಟ್ಟು ಮಾರಾಟ | ಒಟ್ಟಾರೆ ಹೂಡಿಕೆ. |
|---|---|---|---|
| ನವೆಂಬರ್ 1994 | 308.10 | 274.20 | 33.90 |
| ನವೆಂಬರ್ 1995 | 413.00 | 244.20 | 168.90 |
| ನವೆಂಬರ್ 1996 | 850.40 | 454.20 | 396.20 |
| ನವೆಂಬರ್ 1997 | 535.00 | 747.00 | 212.00 |

(ಕೋಟಿ ರುಪಾಯಿಗಳಲ್ಲಿ)

ಇದರಿಂದ ಇಲ್ಲಿ ಶೇರುಗಳ ಖರೀದಿಗಿಂತ ಹೆಚ್ಚು ಮಾರಾಟವಾಗತೊಡಗಿತು. ಶೇರು ಖರೀದಿಯೆಂದರೆ ವಿದೇಶಿ ಹಣ ನಮ್ಮಲಿಗೆ ಹರಿದು ಬರುತ್ತದೆ, ಶೇರು ಮಾರಾಟವೆಂದರೆ ಇದಕ್ಕೆ ತದ್ವಿರುದ್ಧ. ಕಳೆದ ನಾಲ್ಕು ವರ್ಷಗಳ ಶೇರು ಖರೀದಿ ಮತ್ತು ಮಾರಾಟದ ವಿವರ ನೋಡಿದರೆ ಸ್ಪಷ್ಟ ಚಿತ್ರಣ ದೊರೆಯುತ್ತದೆ.

ಹೀಗೆ ಈ ಹಾಟ್ ಮನಿ ಈಗ ಆಗ್ನೇಯ ಏಶಿಯಾದಲ್ಲೆಲ್ಲೋ ಏನೋ ಆದ ಕಾರಣಕ್ಕೆ ಭಾರತದಿಂದ ಹೊರಗೆ ಹರಿದು ಹೋಗುತ್ತಿದೆ. ಇದು ಈ ವಿದೇಶಿ ಹೂಡಿಕೆಯ ಗುಣವೇನು ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ.

ಇದರಿಂದ ನಮ್ಮ ಆರ್ಥಿಕದ ಮೇಲೆ ದುಷ್ಪರಿಣಾಮ ಉಂಟಾಗಿ ಬೆಳವಣಿಗೆ ನಕಾರಾತ್ಮಕವಾಗುತ್ತದೆ.

# ಬಂಡವಾಳದ ಬಲಿ ಪಿಪಾಸೆ

ಬಂಡವಾಳಕ್ಕೆ, ತನ್ನ ಲಾಭಕ್ಕೆ ಅಡ್ಡಿ ಬರುವ ಏನನ್ನೇ ಆದರೂ ಬಲಿ ತೆಗೆದುಕೊಳ್ಳುವ ಮೂಲಭೂತ ಗುಣ ಇದೆ. ಅದೇ ಬಂಡವಾಳಶಾಹಿ ವ್ಯವಸ್ಥೆಯ ನಿಜ ಗುಣ. ಬಹುರಾಷ್ಟ್ರೀಯ ಕಂಪನಿಗಳು ಈ ನಿಯಮವನ್ನು ಸ್ಪಷ್ಟವಾಗಿ ತೋರಿಸುತ್ತವೆ. ಜಗತ್ತಿನಾದ್ಯಂತ ಉದ್ಯೋಗಗಳನ್ನು ಕಡಿಮೆ ಮಾಡುವುದೇ ಬಂಡವಾಳಶಾಹಿಯ ಉದ್ದೇಶ. ತೀರ ಇತ್ತೀಚಿನ ಉದಾಹರಣೆ. ಸ್ವಿಸ್‌ನ ಬಹುರಾಷ್ಟ್ರೀಯ ಕಂಪನಿ ಏಶಿಯಾ ಬ್ರೌನ್ ಬವೇರಿ ಲಿಮಿಟೆಡ್‌ನದು. ಈ ಕಂಪನಿ ಯುರೋಪು ಮತ್ತು ಅಮೇರಿಕ ದೇಶಗಳಲ್ಲಿ 10,000 ಉದ್ಯೋಗಗಳಿಗೆ ಕೊಡಲಿ ಪೆಟ್ಟು ಹೊಡೆಯಲಿದೆಯಂತೆ. ಕಾರಣ ಆ ರಾಷ್ಟ್ರಗಳಲ್ಲಿ ಉದ್ಯೋಗದ ಬೆಲೆ ಹೆಚ್ಚು. ಈ ಉದ್ಯೋಗಗಳನ್ನು ಏಶಿಯಾದ ದೇಶಗಳಿಗೆ ಅದು ಸ್ಥಳಾಂತರಿಸಲಿದೆಯಂತೆ. ಅಂದರೆ ಏಶಿಯಾ ಬಂಡವರ ದೇಶದಲ್ಲಿ ಉದ್ಯೋಗಗಳ ಸೃಷ್ಟಿಯಾಗುತ್ತದಲ್ಲ ಎನ್ನಬಹುದು. ಆದರೆ ಈ ಉದ್ಯೋಗಗಳು ಯಾವಾಗ ನಾಪತ್ತೆಯಾಗುತ್ತದೋ ಹೇಳಲಾಗದು.

ದೊಡ್ಡ ಬಂಡವಾಳಿಗರು, ಅಮೇರಿಕದ ರೀತಿಯ ಬೆಳವಣಿಗೆಯನ್ನು ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಈ ಬೆಳವಣಿಗೆ ಉದ್ಯೋಗಗಳನ್ನು ಹೆಚ್ಚಾಗಿ ಸೃಷ್ಟಿಸುವುದಿಲ್ಲ. ಇಲ್ಲಿ ಲಾಭಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಕೆಲಸಗಾರರ ಬಗ್ಗೆ ಕಾಳಜಿಯಿಲ್ಲ. ಅಮೇರಿಕದ ಬೃಹತ್ ಕಂಪನಿ ಐಬಿಎಂ ಸಹ ಇಂತಹ ಉದ್ಯೋಗ ಕಡಿತದಲ್ಲಿ ತೊಡಗಿದೆ. ಅದೇ ಅವರ ಧ್ಯೇಯ. ಖರ್ಚು ಕಡಿಮೆ ಮಾಡಿ ಲಾಭ ಹೆಚ್ಚಿಸುವುದು.

ಪುಟ 4 ರಿಂದ

# ……..ಅಸಂಬದ್ಧಗಳ ಕಂತೆ

ಎಂಬ ಜೈನ್ ಆಯೋಗದ ಮಾತುಗಳ ಹಿಂದಿರುವ ತರ್ಕವನ್ನು ಒಪ್ಪುವುದು ಕಷ್ಟ. ಒಂದು ಉಗ್ರಗಾಮಿ ಗುಂಪಿಗೆ ತರಬೇತಿ ಮತ್ತು ಶಸ್ತ್ರಾಸ್ತ್ರ ನೀಡುವುದು ಒಂದು ಶಾಂತಿಯುತ ಪರಿಹಾರಕ್ಕಾಗಿ, ಉಗ್ರಗಾಮಿ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಅಲ್ಲ ಎಂಬುದು ಎಂತಹಾ ತರ್ಕ?

**ದೇಶಪ್ರೇಮ ಎಂದರೇನು? ರಾಷ್ಟ್ರ-ವಿರೋಧವೆಂದರೇನು?**

*"1989 ರ ಮೊದಲು ಉಗ್ರಗಾಮಿತನ, ವಿಶೇಷವಾಗಿ ಎಲ್.ಟಿ.ಟಿ.ಇ. ಚಟುವಟಿಕೆಯ ಸ್ವರೂಪ ರಾಷ್ಟ್ರ- ವಿರೋಧಿಯಾಗಿರಲಿಲ್ಲ, ತಮಿಳು ನಾಡಿನ ತಟದಲ್ಲಿ ಕಳ್ಳ ಸಾಗಾಣಿಕೆ ಚಟುವಟಿಕೆಗಳು ತಮಿಳು ನಾಡಿನ ಆರ್ಥಿಕವನ್ನು ತಟ್ಟಿರಬಹುದಷ್ಟೆ"*

ಎಂದು ಜೈನ್ ಆಯೋಗ ಮುಂದುವರಿದು ಹೇಳಿದೆ. ಕೇಂದ್ರ ಸರ್ಕಾರದ ನಿರ್ಣಯವನ್ನು ಅಥವಾ ನಿಲುವನ್ನು ಒಪ್ಪುವುದು ಅಥವಾ ಒಪ್ಪದಿರುವುದರ ಆಧಾರದ ಮೇಲೆ ಯಾವ ಪಕ್ಷಗಳು ಯಾವ ಅವಧಿಯಲ್ಲಿ ಸರಕಾರದಲ್ಲಿ ಇದ್ದವು ಎಂಬ ತಾರೀಖುಗಳ ಆಧಾರದ ಮೇಲೆ ಒಬ್ಬ ದೇಶ ಪ್ರೇಮಿಯೋ, ರಾಷ್ಟ್ರ-ವಿರೋಧಿಯೋ ಎಂದು ತರ್ಕಿಸುವ ಜೈನ್ ಆಯೋಗದ ವಿಧಾನ ಅಸಂಬದ್ಧ ಹಾಗೂ ಖಂಡನಾರ್ಹ.

1987 ರ ಜುಲೈ 29 ರಂದು ಭಾರತ-ಶ್ರೀಲಂಕಾ ಒಪ್ಪಂದದ ನಂತರ ಈಳಂನ್ನು ಅಥವಾ ಶ್ರೀಲಂಕಾದಿಂದ ಪ್ರತ್ಯೇಕತೆಯನ್ನು ಕೇಳದೆ ಸ್ವಾಯತ್ತತೆಯನ್ನು ಒಪ್ಪಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ಎಲ್.ಟಿ.ಟಿ.ಇ.ಗೆ ಸಲಹೆ ಮಾಡಿತು. ಈ ಒಪ್ಪಂದವನ್ನು ಜಾರಿ ಮಾಡಲು ಐ.ಪಿ.ಕೆ.ಎಫ್. (ಭಾರತೀಯ ಶಾಂತಿಪಾಲನಾ ಪಡೆ)ಯನ್ನು ಶ್ರೀಲಂಕಾಕ್ಕೆ ಕಳಿಸಲಾಯಿತು. ಒಪ್ಪಂದದ ಶರತ್ತುಗಳನ್ನು ಪಾಲಿಸುವ ಬದಲು ಎಲ್.ಟಿ.ಟಿ.ಇ. ಅಕ್ಟೋಬರ್ 1987 ರಲ್ಲಿ ಭಾರತೀಯ ಸೇನೆಯ ಮೇಲೆ ದಾಳಿ ಮಾಡಿತು.

**ಸಿಪಿಐ(ಎಂ) ನಿಲುವು**

ಸಿಪಿಐ(ಎಂ) ಶ್ರೀಲಂಕಾದ ತಮಿಳು ಜನಾಂಗೀಯ ಪ್ರಶ್ನೆಯ ಬಗ್ಗೆ ಒಂದು ಸುಸಂಬದ್ಧ ನಿಲುವು ತಳೆದಿದೆ. ನಾವು ಇತರ ರಾಜಕೀಯ ಪಕ್ಷಗಳಿಂದ ಈ ಪ್ರಶ್ನೆಯಲ್ಲಿ ನಮ್ಮನ್ನು ಪ್ರತ್ಯೇಕಿಸಿಕೊಂಡಿದ್ದೆವು - ಈಳಂ ಬೇಡಿಕೆಯನ್ನಾಗಲೀ, ಎಲ್.ಟಿ.ಟಿ.ಇ. ಯನ್ನಾಗಲೀ ನಾವೆಂದೂ ಬೆಂಬಲಿಸಲಿಲ್ಲ. ಶ್ರೀಲಂಕಾದ ಐಕ್ಯತೆಯ ಚೌಕಟ್ಟಿನೊಳಗೆ ಸ್ವಾಯತ್ತತೆಯನ್ನು ನೀಡುವ ಮೂಲಕ ತಮಿಳು ಜನಾಂಗೀಯ ಪ್ರಶ್ನೆಯನ್ನು ಬಗೆಹರಿಸಬಹುದು ಎಂಬ ನಿಲುವು ನಮ್ಮ ಪಕ್ಷದ್ದು. ಒಂದು ರಾಜಕೀಯ ಪಕ್ಷ ಹಾಗೂ ಜನವಿಭಾಗ ಕೇಂದ್ರ ಸರ್ಕಾರದ ಅಥವಾ ಕಾಂಗ್ರೆಸ್ ಪಕ್ಷದ ನಿಲುವು-ನೀತಿಗಳನ್ನು ಒಪ್ಪಿಯೋ ಅಥವಾ ಒಪ್ಪದೆಯೋ ತಳೆಯುವ ರಾಜಕೀಯ ನಿಲುವುಗಳ ಆಧಾರದ ಮೇಲೆ ಅದನ್ನು ದೇಶಪ್ರೇಮಿ ಅಥವಾ ರಾಷ್ಟ್ರ-ವಿರೋಧಿ ಎಂದು ಹೇಳುವ ಜೈನ್ ಆಯೋಗದ ನಿಲುವನ್ನು ಸಿಪಿಐ(ಎಂ) ಒಪ್ಪುವುದಿಲ್ಲ.

ಜೈನ್ ಆಯೋಗದ ವರದಿಯ ಇನ್ನೊಂದು ಕುತೂಹಲಕಾರಿ ಅಂಶವೆಂದರೆ ಐ.ಪಿ.ಕೆ.ಎಫ್. ಮತ್ತು ಎಲ್.ಟಿ.ಟಿ.ಇ. ನಡುವೆ ತಿಕ್ಕಾಟದ ನಂತರವೂ ಅದು ಎಲ್.ಟಿ.ಟಿ.ಇ. ಯನ್ನು ರಾಷ್ಟ್ರ-ವಿರೋಧಿಯೆಂದು ಬಣ್ಣಿಸುವುದಿಲ್ಲ ಅದರ ಮಟ್ಟಿಗೆ ಎಲ್.ಟಿ.ಟಿ.ಇ. ನ ರಾಜಕೀಯ ಪಕ್ಷಗಳ ಹಾಗೂ ತಮಿಳುನಾಡು ಜನತೆಯ ರಾಷ್ಟ್ರ-ವಿರೋಧಿ ಸ್ವರೂಪ ಕಂಡುಬರುವದು 1989 ರ ನಂತರವೇ. *"1989 ರ ಮೊದಲು ಉಗ್ರಗಾಮಿತನ, ವಿಶೇಷವಾಗಿ ಎಲ್.ಟಿ.ಟಿ.ಇ. ರಾಷ್ಟ್ರ-ವಿರೋಧಿಯಾಗಿರಲಿಲ್ಲ"* ಎಂದಿದೆ ಅದು. ಎಲ್.ಟಿ.ಟಿ.ಇ. ಚಟುವಟಿಕೆಗಳು ರಾಷ್ಟ್ರ-ವಿರೋಧಿ ಸ್ವರೂಪವನ್ನು ಪತ್ತೆಹಚ್ಚುವ ಒರೆಗಲ್ಲು 1989 ರ ವರ್ಷ ಎಂದು ನಿಗದಿ ಮಾಡುವ ಜೈನ್ ಆಯೋಗದ ತರ್ಕವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟವೇನಲ್ಲ. ಜನವರಿ 27, 1989 ರಂದು ಅಧಿಕಾರಕ್ಕೆ ಬಂದ ಡಿ.ಎಂ.ಕೆ. ಸರಕಾರದ ಮೇಲೆ ಹಾಗೂ ಡಿಸೆಂಬರ್ 2, 1989 ರಂದು ಅಧಿಕಾರಕ್ಕೆ ಬಂದ ವಿ.ಪಿ.ಸಿಂಗ್ ಸರಕಾರದ ಮೇಲೆ ಅನಾವಶ್ಯಕವಾಗಿ ದೋಷಾರೋಪಣೆ ಮಾಡಲಷ್ಟೆ ಇದನ್ನು ನಿಗದಿ ಮಾಡಿದಂತಿದೆ. ರಾಜೀವ್ ಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದಾಗ 'ಅವರ ನಗುಮುಖ'(ಇದು ಜೈನ್ ಆಯೋಗದ ಸ್ವಂತ ವರ್ಣನೆ - ಸಂ) ಎಲ್ಲರ ರಾಷ್ಟ್ರ ವಿರೋಧಿ ಸ್ವರೂಪವನ್ನು ಶುದ್ಧ ದೇಶಪ್ರೇಮವಾಗಿ ಪರಿವರ್ತಿಸುವ ಜಾದೂ ಹೊಂದಿತ್ತು!

**ಕಾರ್ಯವ್ಯಾಪ್ತಿ ಮೀರಿದ ಟೀಕೆ**

ವರದಿಗೆ ರಾಷ್ಟ್ರೀಯ ರಂಗ ಸರ್ಕಾರ ಹಾಗೂ ಆಗಿನ ಪ್ರಧಾನ ಮಂತ್ರಿ ವಿ.ಪಿ.ಸಿಂಗರಲ್ಲಿ ತಪ್ಪು ಕಂಡಿದೆ. ಜೈನ್ ಮತ್ತು ಇತರ ಮಾಜಿ ಪ್ರಧಾನ ಮಂತ್ರಿಗಳಿಗೆ ಎಸ್.ಪಿ.ಜಿ. ಭದ್ರತೆ ಒದಗಿಸಲು ವಿ.ಪಿ.ಸಿಂಗ್ ಎಸ್.ಪಿ.ಜಿ. ಕಾನೂನನ್ನು ತಿದ್ದುಪಡಿ ಮಾಡಬೇಕಿತ್ತು. ಎಂದಿರುವ ಜೈನ್‌ರ ವರದಿ ಈ ಕಾನೂನನ್ನು ಮೊದಲು ತಂದಾಗ ಎಲ್ಲಾ ಮಾಜಿ ಪ್ರಧಾನಿಗಳಿಗೆ ಎಸ್.ಪಿ.ಜಿ ರಕ್ಷಣೆ ವಿಸ್ತರಿಸುವಲ್ಲಿ ರಾಜೀವ್ ಗಾಂಧಿ ಸರಕಾರ ವಿಫಲವಾದ ಬಗ್ಗೆ ಮಾತ್ರ ಟೀಕೆ ಮಾಡುವುದಿಲ್ಲ.

ರಾಜೀವ್ ಗಾಂಧಿಯವರಿಗೆ ಎಸ್.ಪಿ.ಜಿ. ರಕ್ಷಣೆಯ ಬಗ್ಗೆ ಪರಿಶೀಲಿಸುವ ಕೆಲಸವನ್ನು ನ್ಯಾಯಮೂರ್ತಿ ವರ್ಮಾ ಆಯೋಗಕ್ಕೆ ಒಪ್ಪಿಸಲಾಗಿತ್ತು. ಜೈನ್ ಆಯೋಗದ ವ್ಯಾಪ್ತಿಯಲ್ಲಿ ಬರದ ಅಂಶಗಳಿಗಷ್ಟೇ ಜೈನ್ ಆಯೋಗ ತನ್ನನ್ನು ಸೀಮಿತಗೊಳಿಸಬೇಕು ಎಂದು ಸುಪ್ರಿಂ ಕೋರ್ಟ್ ಕೂಡಾ ಹೇಳಿತ್ತು. ರಾಷ್ಟ್ರೀಯ ರಂಗ ಸರ್ಕಾರ ಎಸ್.ಪಿ.ಜಿ. ಕಾನೂನನ್ನು ತಿದ್ದುಪಡಿ ಮಾಡಲಿಲ್ಲವೆಂದೋ ರಾಜೀವ್ ಗಾಂಧಿಯವರಿಗೆ ಪರ್ಯಾಯ ನಿಕಟ ರಕ್ಷಣೆಯನ್ನು ಅದು ಒದಗಿಸಲಿಲ್ಲವೆಂದೋ ಟೀಕಿಸುವುದಕ್ಕೆ ಸಮರ್ಥನೆಯೇನೂ ಇಲ್ಲ. ರಾಜೀವ್ ಗಾಂಧಿ ಪ್ರಧಾನ ಮಂತ್ರಿಗಳ ಹುದ್ದೆಯಿಂದ ನಿರ್ಗಮಿಸಿದಾಗ ಅವರಿಗೆ ರಕ್ಷಣೆ ಕೊಡುವ ಬಗ್ಗೆ ಕಾಂಗ್ರೆಸ್ಸಿಗೆ ಪ್ರಾಮಾಣಿಕ ಕಾಳಜಿ ಇದ್ದಿದ್ದರೆ ತಾನೇ ಅಧಿಕಾರಕ್ಕೆ ತಂದ ಚಂದ್ರಶೇಖರ್ ಸರ್ಕಾರದ ಮೂಲಕ ಅದನ್ನು ಮಾಡಬಹುದಿತ್ತು. ಜೈನ್ ಆಯೋಗ ಈ ಅಂಶವನ್ನು ಪರಿಶೀಲಿಸದೆ ತಪ್ಪಿಸಿಕೊಂಡಿದೆ, ಬಹುಶಃ ಕಾಂಗ್ರೆಸ್ ಪಕ್ಷಕ್ಕೆ ಮುಜುಗರವಾಗಬಹುದೆಂದು ಹಾಗೆ ಮಾಡಿಲ್ಲ.

ಜೈನ್ ಆಯೋಗದ ವರದಿ ಇನ್ನೊಂದು ವಿಚಿತ್ರ ಮಾತನ್ನು ಹೇಳಿದೆ -

*"ಪ್ರಧಾನ ಮಂತ್ರಿ ವಿ.ಪಿ.ಸಿಂಗ್ ಭದ್ರತಾ ತಜ್ಞರು ಹಾಗೂ ಅಧಿಕಾರಿಗಳು ನೀಡಿದ ಸಲಹೆಯನ್ನು ಸ್ವೀಕರಿಸಬಾರದಿತ್ತು; ವಿಮರ್ಶಾತ್ಮಕವಾಗಿ ಸಾಕಷ್ಟು ರಕ್ಷಣೆಯ ಪ್ರಮುಖ ಪ್ರಶ್ನೆಯ ಮೌಲ್ಯ ಮಾಪನ ಮಾಡಬೇಕಿತ್ತು"*

ಜೈನ್ ಆಯೋಗದ ಈ ವರದಿ ಒಬ್ಬ ಪ್ರಧಾನ ಮಂತ್ರಿ ಎಲ್ಲಿಂದ ಸಲಹೆ ಪಡೆಯಬೇಕು ಎಂದು ಸೂಚನೆ ನೀಡಿದ್ದರೆ ಒಳ್ಳೆಯದಿತ್ತು - ಭಾರತದಲ್ಲಿ ಮಾತ್ರವೇ ಅಲ್ಲ ಇಡೀ ಜಗತ್ತಿನ ಎಲ್ಲ ಆಡಳಿತಗಾರರಿಗೂ ಅದೊಂದು ಅಮೂಲ್ಯ ಮಾರ್ಗದರ್ಶನವಾಗಿರುತ್ತಿತ್ತು!

**ಆತ್ಮಪರಿಶೋಧನೆ ಯಾರು ಮಾಡಬೇಕು?**

ನಂತರ ಆಯೋಗ ಇನ್ನೊಂದು ಆಧಾರಹೀನ ತೀರ್ಮಾನಕ್ಕೆ ಬರುತ್ತದೆ - "ರಾಜೀವ ಗಾಂಧಿಯವರ ಭದ್ರತೆಯ ಪ್ರಶ್ನೆಯನ್ನು ಮುಚ್ಚಿದ ಮನದಿಂದ ಪರೀಕ್ಷಿಸಿದಂತೆ ಕಾಣುತ್ತದೆ" ಮುಂದುವರಿದು "ಇಲ್ಲಿ ಸಂಬಂಧ ಪಡದ ಪರಿಗಣನೆಗಳೂ ಬಹಳ ಕೆಲಸ ಮಾಡಿದಂತಿದೆ. ಹೀಗೆ ಈ ಕ್ರಮ ಶ್ರೀ ವಿ.ಪಿ.ಸಿಂಗ್ ಮತ್ತು ಅವರ ಸರಕಾರದ ಕಡೆಯಿಂದ ಉದ್ದೇಶಪೂರ್ವಕವಾದ ಶ್ರಮ ಎನ್ನಬಹುದು" ಎಂದಿರುವ ಈ ವರದಿಯ ಹಿಂದಿರುವ ಉದ್ದೇಶವಾದರೂ ಏನು? ಈ ವಿಷಯುಗುಳುವ ಮಾತುಗಳು ಅದಕ್ಕೆ ತಕ್ಕುದಾದವೇ?

ಜೈನ್ ಆಯೋಗ ಇಡೀ ಗುಪ್ತಚರ ಇಲಾಖೆ (ಐ.ಬಿ) ಈ ದೇಶದ ರಾಜಕೀಯ ಯಜಮಾನರುಗಳ ಕೈಗೊಂಬೆ ಎಂದು ಖಂಡಿಸಿದೆ.

*"ತಮ್ಮ ರಾಜಕೀಯ ಯಜಮಾನರುಗಳ ರಾಜಕೀಯ ಮನೋಭಾವವನ್ನು ಗ್ರಹಿಸಿ ಗುಪ್ತಚರ ಸಂಸ್ಥೆಗಳು ಶ್ರೀ ರಾಜೀವ್ ಗಾಂಧಿಯವರ ರಕ್ಷಣೆಗೆ ಒಂದು ಪರ್ಯಾಯ ಭದ್ರತಾ ಕ್ರಮವನ್ನು ಸಿದ್ಧಪಡಿಸಿದವು. ಸಂಬಂಧಪಟ್ಟ ಅಧಿಕಾರಶಾಹಿಗಳು ಅದನ್ನು ಪ್ರಚಾರ ಮಾಡಿದರು….. ಈ ಮೇಲಿನ ಘಟನಾವಳಿಗಳಿಂದ ಸ್ಪಷ್ಟವಾಗುವ ಅಂಶವೆಂದರೆ ಶ್ರೀರಾಜೀವ್ ಗಾಂಧಿಯವರ ಭದ್ರತೆಗೆ ಇರುವ ಬೆದರಿಕೆಯ ಅಂದಾಜಿಗೆ ಸಂಬಂಧಪಟ್ಟಂತೆ ಐ.ಬಿ. ಉದ್ದೇಶ ಪೂರ್ವಕವಾಗಿಯೇ ಕೀಳಂದಾಜು ಮಾಡಿದೆ. ಅಂದರೆ ಶ್ರೀರಾಜೀವ್ ಗಾಂಧಿಯವರ ಭದ್ರತೆಗೆ ಇರುವ ಬೆದರಿಕೆ ಸಂಗತಿಗಳ ಬಗ್ಗೆ ಸಂಬಂಧಪಟ್ಟಂತೆ ಐ.ಬಿ. ಉದ್ದೇಶಪೂರ್ವಕವಾಗಿಯೇ ತಪ್ಪು ತಿಳುವಳಿಕೆ ನೀಡಿದೆ. ಈ ಸಂಗತಿಗಳ ಆಧಾರದಲ್ಲಿ ಅವರಿಗೆ ಒದಗಿಸುವ ರಕ್ಷಣೆಯ ಸ್ವರೂಪದ ಬಗ್ಗೆ ನಿರ್ಣಯ ಕೈಗೊಳ್ಳಬೇಕಿತ್ತು.*

ಇದನ್ನೆಲ್ಲಾ ಓದುವಾಗ ಜೈನ್ ಆಯೋಗ ಏನು ಹೇಳಬೇಕು, ಏನು ಹೇಳಬಾರದು ಎಂಬ ಪರಿಜ್ಞಾನವನ್ನೇ ಕಳಕೊಂಡು ಮಿತಿಮೀರಿ ಹೋದಂತೆ ಕಾಣುತ್ತದೆ.

ಈ ವರದಿಯ ಇನ್ನೊಂದು ವಿಭಾಗ ಕೊನೆಯಲ್ಲಿ ವಿ.ಪಿ.ಸಿಂಗ್‌ರಿಗೊಂದು ಸಲಹೆ ನೀಡಿದೆ "ನಾನು ಈ ವಿಷಯವನ್ನು ಶ್ರೀವಿ.ಪಿ.ಸಿಂಗ್‌ರವರ ಆತ್ಮಪರಿಶೋಧನೆಗೆ ಬಿಡುತ್ತೇನೆ"! ಆತ್ಮಪರಿಶೋಧನೆಯ ಈ ಸಲಹೆ ಜೈನ್ ಆಯೋಗಕ್ಕೇ ಹೆಚ್ಚು ಸೂಕ್ತ.

ಜೈನ್ ಆಯೋಗದ ವರದಿಯನ್ನು ಬಳಸಿಕೊಂಡು ಅಧಿಕಾರಕ್ಕೆ ಮರಳುವ ಕಾಂಗ್ರೆಸ್‌ನ ಹತಾಶ ಪ್ರಯತ್ನದಿಂದ ಅದಕ್ಕೇನೂ ಪ್ರಯೋಜನವಾಗದು. ಅದರ ಬದಲು ಈ ಪ್ರಯತ್ನ ಅದನ್ನು ಆಳವಾದ ಬಿಕ್ಕಟ್ಟಿನಲ್ಲಿ ಸಿಲುಕಿಸುತ್ತದೆ. ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಂಡು ಅದು ಕೇಂದ್ರದಲ್ಲಿ ಅಧಿಕಾರ ಗ್ರಹಣ ಪ್ರಯತ್ನ ನಡೆಸಿರುವ ಆರ್.ಎಸ್.ಎಸ್. ಮತ್ತು ಬಿಜೆಪಿ ಯಂತಹ ಕೋಮುವಾದಿ ಶಕ್ತಿಗಳಿಗೆ ನೆರವಾಗುತ್ತದಷ್ಟೆ. ○

# ಗುಜರಾತ್ ಬಿ.ಜೆ.ಪಿ. ಈಗ ಒಡೆದ ಮನೆ

ಗುಜರಾತಿನಲ್ಲಿ ಹೊಸ ನಾಯಕತ್ವದಲ್ಲಿ ಅಧಿಕಾರಕ್ಕೆ ಬಂದ ರಾಷ್ಟ್ರೀಯ ಜನತಾ ಪಕ್ಷದ (ಆರ್.ಜೆ.ಪಿ.) ಸರಕಾರವನ್ನು ಉರುಳಿಸುವ ಯತ್ನದಲ್ಲಿ ಭಾರತೀಯ ಜನತಾ ಪಕ್ಷ (ಬಿ.ಜೆ.ಪಿ) ಸೋತಿರುವುದು ಹಳೆ ಸುದ್ದಿ. ದಿಲೀಪ್ ತಾರಿಖ್ ಮಂತ್ರಿಮಂಡಲವನ್ನು ಉರುಳಿಸುವ ಅದರ ತಂತ್ರ ವಿಫಲವಾಗಿ ನವೆಂಬರ್ 13ರಂದು ಸರಕಾರ ವಿಶ್ವಾಸಮತದಲ್ಲಿ ಗೆಲುವನ್ನು ಪಡೆದಿತ್ತು.

ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಮತ್ತು ಬಹುಜನ ಸಮಾಜವಾದಿ ಪಕ್ಷದ ಶಾಸಕರನ್ನು ಖರೀದಿಸಿ ಸರಕಾರವನ್ನು 'ರಚಿಸುವಲ್ಲಿ ಸಫಲವಾದ' ತತ್ವಬದ್ಧ(!)ಪಕ್ಷ ಬಿ.ಜೆ.ಪಿ. ಅದೇ ಹಲ್ಕಾ ತಂತ್ರವನ್ನು ಗುಜರಾತಿನಲ್ಲಿ ಅನ್ವಯಿಸಲು ಭಾರೀ ಪ್ರಯತ್ನವನ್ನು ನಡೆಸಿತ್ತು. ಆದರೆ ಇದರ ಕುತಂತ್ರ ಜಾಸ್ತಿಯಾದಂತೆಲ್ಲ, ಕಾಂಗ್ರೆಸ್ ಮತ್ತು ಆರ್.ಜೆ.ಪಿ. ಐಕ್ಯದಿಂದಿದ್ದು ತಮ್ಮ ಶಾಸಕರು ಪಕ್ಷಾಂತರ ಮಾಡುವುದನ್ನು ತಡೆದು ತಾರೀಖ್ ಸರಕಾರ ಉಳಿಸುವಲ್ಲಿ ಯಶಸ್ವಿಯಾದವು.

ಉತ್ತರ ಪ್ರದೇಶ ಪ್ರಯೋಗ ಇಲ್ಲಿಯೂ ಯಶಸ್ವಿಯಾಗುತ್ತದೆ ಎಂದು ಭಾರೀ ನಿರೀಕ್ಷೆಯಿಟ್ಟುಕೊಂಡಿದ್ದ ಬಿ.ಜೆ.ಪಿ.ಗೆ ಇದರಿಂದ ಮುಖಭಂಗ ಆಗಿದೆ. ಇದರ ಜತೆಜತೆಯಲ್ಲೇ ಪಕ್ಷದ ರಾಜ್ಯಘಟಕದಲ್ಲಿ ಅತೃಪ್ತಿಯು ಹೊಗೆಯೂ ಎದ್ದಿದೆ.

ಸರಕಾರ ಉರುಳಿಸುವಲ್ಲಿ ಗುಜರಾತಿನ ಮಾಜಿ ಮುಖ್ಯಮಂತ್ರಿ ಹಾಗೂ ಬಿ.ಜೆ.ಪಿ. ರಾಷ್ಟ್ರೀಯ ಉಪಾಧ್ಯಕ್ಷ ಕೇಶುಭಾಯಿ ಪಟೇಲ್‌ರ ವೈಫಲ್ಯದ ಹಿನ್ನೆಲೆಯಲ್ಲಿ ಅವರ ನಾಯಕತ್ವವನ್ನು ಪ್ರಶ್ನಿಸಲಾಗುತ್ತಿದೆ. ಪಟೇಲ್ ಅವರನ್ನು ನಾಯಕ ಎಂದು ಬಿಂಬಿಸಿದ್ದರಿಂದಲೇ ಕಾಂಗ್ರೆಸ್ ಹಾಗೂ ಆರ.ಜೆ.ಪಿ.ಯಿಂದ ಸದಸ್ಯರನ್ನು ಸೆಳೆಯಲು ಆಗಲಿಲ್ಲ ಎಂದು ಅನೇಕ ನಾಯಕರು ದೂರಿದ್ದಾರೆ.

ಇದಕ್ಕೆ ಕಾರಣವಿದೆ. ಪಟೇಲ್ ಅವರ ಕಾರ್ಯ ವೈಖರಿಯನ್ನು ಪ್ರತಿಭಟಿಸಿಯೇ ಕಳೆದ ವರ್ಷ ಶಂಕರ ಸಿಂಗ್ ವಘೇಲಾ ನೇತೃತ್ವದಲ್ಲಿ ಬಿ.ಜೆ.ಪಿ. ರಾಜ್ಯ ಘಟಕದಲ್ಲಿ ಬಂಡಾಯ ನಡೆದಿತ್ತು. ಕೇಶುಭಾಯಿ ಪಟೇಲ್‌ಗೆ ಅನುಕೂಲವಾಗುತ್ತದೆ ಎಂಬ ಕಾರಣದಿಂದ ಸರಕಾರವನ್ನು ಉರುಳಿಸುವ ತಂತ್ರವನ್ನು ರಾಜ್ಯ ಬಿ.ಜೆ.ಪಿ. ಯ ಒಂದು ಬಣ ಗಂಭೀರವಾಗಿ ಪರಿಗಣಿಸಲಿಲ್ಲ ಎಂದೂ ಅಹಮದಾಬಾದ್‌ನಿಂದ ಬಂದಿರುವ ಒಂದು ವರದಿ ತಿಳಿಸಿದೆ. ಪಟೇಲ್ ಅವರನ್ನು ಮತ್ತೆ ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂದು ಬಿ.ಜೆ.ಪಿ. 'ರಾಜಕೀಯ ಗುರು' ಆರ್.ಎಸ್. ಎಸ್. ಪಟ್ಟು ಹಿಡಿದಿತ್ತು. ಆದರೆ ಅದರ ವೈಫಲ್ಯ ಅದಕ್ಕೆ ಕಪಾಳ ಮೋಕ್ಷವಾಗಿದೆ.

ಗುಜರಾತ್ ವಿಧಾನ ಸಭೆಯಲ್ಲಿ ಬಹುಮತವನ್ನು ಕ್ರೋಡೀಕರಿಸಿ ಸರಕಾರವನ್ನು ಉರುಳಿಸಲು ಸಾಧ್ಯವಾಗದಿದ್ದಕ್ಕೆ ಬಿ.ಜೆ.ಪಿ. ಕೊಟ್ಟಿರುವ ವಿವರಣೆ. (ಹಳೇ ತಂತ್ರ)

ವಿಶ್ವಾಸಮತ ಗೊತ್ತುವಳಿಗೆ ವಿರುದ್ಧವಾಗಿ ಮತ ಚಲಾಯಿಸಬಹುದೆಂಬ ಅನುಮಾನವಿದ್ದ ಶಾಸಕ'ರನ್ನು ಶಂಕರ ಸಿಂಗ್ ವಘೇಲಾ ರಾಜಧಾನಿಯಿಂದ ಹೊರಗೆ ಕರೆದುಕೊಂಡು ಹೋಗಿದ್ದರಿಂದ ತನ್ನ ತಂತ್ರ ಫಲಿಸಲಿಲ್ಲ ಎಂದು ಬಿ.ಜೆ.ಪಿ ಹಳಹಳಿಸಿದೆ. ಬಹುಶಃ ಗುಜರಾತಿನಲ್ಲಿ ಈ ತಂತ್ರ ಹೊಸದೇನು ಅಲ್ಲ.

ಕಾಂಗ್ರೆಸ್‌ನ ಚಿಮನ್ ಭಾಯಿ ಪಟೇಲ್ ಸರಕಾರವನ್ನು ಉರುಳಿಸಲು ಈ ಹಿಂದೆ ಬಿ.ಜೆ.ಪಿ. ಇದೇ ತಂತ್ರವನ್ನು ಅನುಸರಿಸಿತ್ತು. ಕಳೆದ ವರ್ಷ ತನ್ನ ಪಕ್ಷದ ಸುರೇಶ ಮೆಹ್ತಾ ಸರಕಾರವನ್ನು ಉಳಿಸಲು ಇದೇ ತಂತ್ರಕ್ಕೆ ಶರಣಾಗಿತ್ತು. ಆದ್ದರಿಂದ ಇದೇ ಗರಡಿಯಲ್ಲಿ ಪಳಗಿದ ಶಂಕರ ಸಿಂಗ್ ವಘೇಲಾ ಗುರುವಿಗೇ ತಿರುಮಂತ್ರ ಹಾಕಿದ ಪ್ರಕರಣ ಇದೆಂದು ಹೇಳಬಹುದು ಅಲ್ಲವೇ ?

ಕೇಶುಭಾಯಿ ಪಟೇಲ್ ಮತ್ತು ಸುರೇಶ ಮೆಹ್ತಾ ನೇತೃತ್ವದ ಬಿ.ಜೆ.ಪಿ. ಸರಕಾರಗಳನ್ನು ಉರುಳಿಸಲು ವಘೇಲಾ ಈ ತಂತ್ರವನ್ನು ಅಳವಡಿಸಿಕೊಂಡಿದ್ದರು.

ಗುಜರಾತಿನಲ್ಲಿ ಈ ತಂತ್ರಕ್ಕೆ ಸುಮಾರು ಮೂರು ದಶಕಗಳ ಇತಿಹಾಸವಿದೆ.

ಕಾಂಗೆಸ್‌ನ ಐತಿಹಾಸಿಕ ವಿಫಲದ ಹಿನ್ನೆಲೆಯಲ್ಲಿ ಅಂದು ಹಿತೇಂದ್ರ ದೇಸಾಯಿ ನೇತೃತ್ವದ ಕಾಂಗ್ರೆಸ್ (ಐ) ಮಂತ್ರಿಮಂಡಲ ಬಿಕ್ಕಟ್ಟಿನಲ್ಲಿರುವಾಗ ಈ ತಂತ್ರವನ್ನು ಬಳಸಲಾಗಿತ್ತು. ೧೯೭೩ರಲ್ಲಿ ಘನಶ್ಯಾಮ್ ಜಝೂ ಸರಕಾರವನ್ನು ಉರುಳಿಸಲು ಚಿಮನ್ ಭಾಯಿ ಪಟೇಲ್ ಈ ಪಟ್ಟನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದರು.

ಒಟ್ಟಿನಲ್ಲಿ ಹೇಳುವುದಾದರೆ, ಕಂತ್ರಿ ನರಿ ಕೈಗೆಟುಕದ ದ್ರಾಕ್ಷಿಯನ್ನು ಹುಳಿಯೆಂದು ಹೇಳಿದಂತಾಗಿದೆ ಬಿ.ಜೆ.ಪಿ. ಹಳೇ ಹೇಳಿಕೆ. ಮೌಲ್ಯಾಧಾರಿತ ರಾಜಕಾರಣದ ಮಾತನಾಡುವ ಈ ಪಕ್ಷದ ಕೊಳಕು ಮುಖವನ್ನು ಈ ಪ್ರಕರಣ ಇಡೀ ದೇಶದ ಜನತೆಗೆ ಪರಿಚಯಿಸಿದೆ.

## ದೇಶದೊಳಗೆ



- ವಿಶ್ವ

## ವೈಯಕ್ತಿಕ ದ್ವೇಷಕ್ಕೆ 23ಮುಗ್ಧರ ಬಲಿ

ಹೈದರಾಬಾದ್ : ಆಂಧ್ರಪ್ರದೇಶದ ಹೈದರಾಬಾದ್‌ನಲ್ಲಿ ನವೆಂಬರ್ 19 ರಂದು ಚಲನಚಿತ್ರ ಸ್ಟುಡಿಯೋ ಒಂದರ ಬಳಿ ಕಾರ್ ಬಾಂಬ್ ಸ್ಫೋಟಿಸಿ ಕನಿಷ್ಠ ಪಕ್ಷ 23 ಜನರು ಮೃತಪಟ್ಟಿದ್ದಾರೆ. ಈ ಘಟನೆಯಲ್ಲಿ ಚಿತ್ರನಟ ಹಾಗೂ ರಾಜ್ಯ ಸಭೆ ಸದಸ್ಯ ಮೋಹನಬಾಬೂ ಸಹಿತ 35 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಆಳುವ ತೆಲುಗುದೇಶಂ ಪಕ್ಷದ ಶಾಸಕ ಪಿ. ರವಿ ಅವರನ್ನು ಕೊಲ್ಲುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷದ ಸೂರ್ಯನಾರಾಯಣ ರೆಡ್ಡಿ ಎಂಬಾತ ಈ ಕೃತ್ಯ ನಡೆಸಿದ್ದಾನೆ. ಮೋಹನ ಬಾಬು ಅವರ ಜತೆಗಿದ್ದ ರವಿಯವರಿಗೂ ಗಾಯವಾಗಿದೆ.

ವೈಯಕ್ತಿಕ ದ್ವೇಷಕ್ಕೆ ಹತ್ತಾರು ಮುಗ್ಧ ಜನರು ಬಲಿಯಾಗಿರುವುದು ವಿಷಾದನೀಯವಾಗಿದೆ. ಸತ್ತವರಲ್ಲಿ ಖಾಸಗಿ ಟಿ.ವಿ. ಚಾನೆಲ್ ಒಂದರ ಆರು ಸಿಬ್ಬಂದಿಯೂ ಸೇರಿದ್ದಾರೆ.

ರಾಜಕೀಯ ಅಪರಾಧೀಕರಣದ ಗಂಭೀರತೆಗೆ ಈ ಪ್ರಕರಣ ಸಾಕ್ಷಿಯಾಗಿದೆ.

## ಬಸ್ ದುರಂತದಲ್ಲಿ ಮಕ್ಕಳ ಸಾವಿಗೆ ಪಕ್ಷದ ಶೋಕ

ನವದೆಹಲಿ : ನವೆಂಬರ್ ೧೮ರ ಮುಂಜಾನೆ ದೆಹಲಿಯ ವಜೀರಾಬಾದ್ ಬಳಿ ಶಾಲಾ ಬಸ್ಸೊಂದು ನದಿಗೆ ಉರುಳಿ ಬಿದ್ದು ಸುಮಾರು ೩೦ ಶಾಲಾ ಮಕ್ಕಳು ಮೃತಪಟ್ಟ ದುರಂತ ಪ್ರಕರಣದ ಬಗ್ಗೆ ಸಿ.ಪಿ.ಐ.(ಎಂ) ದೆಹಲಿ ರಾಜ್ಯ ಸಮಿತಿ ತೀವ್ರ ಆಘಾತ ಹಾಗೂ ಶೋಕ ವ್ಯಕ್ತಪಡಿಸಿದೆ.

ದುರಂತದಲ್ಲಿ ಸಾವನ್ನಪ್ಪಿದ ಮುಗ್ಧ ಮಕ್ಕಳ ಕುಟುಂಬಗಳಿಗೆ ಪಕ್ಷದ ರಾಜ್ಯ ಸಮಿತಿ ಗಾಢ ಸಂತಾಪವನ್ನು ಸೂಚಿಸಿದೆ. ನಿಮ್ಮ ದುಃಖದಲ್ಲಿ ನಾವು ಭಾಗಿಯಾಗಿದ್ದೇವೆ ಎಂದು ಅವರು ಹೇಳಿದ್ದಾರೆ.

## ಅತ್ಯಾಚಾರಕ್ಕೆ ಯತ್ನಿಸಿದ ಅಧಿಕಾರಿ ವಿರುದ್ಧ ಸಿಬಿಐ ಚಾರ್ಜ್ ಶೀಟ್

ನವದೆಹಲಿ : ಒರಿಸ್ಸಾದ ಅರಣ್ಯ ಅಧಿಕಾರಿಯೊಬ್ಬರ ಪತ್ನಿ ಅಂಜನಾ ಮಿಶ್ರಾರ ಮಾನಹರಣ ಹಾಗೂ ಅವರ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಆರೋಪಕ್ಕೆ ಗುರಿಯಾಗಿರುವ ಒರಿಸ್ಸಾದ ಮಾಜಿ ಅಡ್ವಕೇಟ್ ಜನರಲ್ ಇಂದ್ರಜಿತ್ ರಾಯ್ ವಿರುದ್ಧ ಕೇಂದ್ರ ತನಿಖಾ ದಳ(ಸಿಬಿಐ) ಭುವನೇಶ್ವರದ ಚೀಫ್‌ಜ್ಯೂಡಿಷಿಯಲ್ ಮ್ಯಾಜಿಸ್ಟ್ರೇಟ್‌ರ ನ್ಯಾಯಾಲಯದಲ್ಲಿ ನವೆಂಬರ್ 21 ರಂದು ಆರೋಪಪಟ್ಟಿಯನ್ನು ಸಲ್ಲಿಸಿತು.

ಅಂಜನಾ ಮಿಶ್ರಾರನ್ನು ಜುಲೈ ೧೧ರಂದು ತನ್ನ ಮನೆಗೆ ಕರೆದ ರಾಯ್, ಆಕೆಯ ಮಾನಭಂಗ ಮಾಡಿದ್ದಲ್ಲದೆ ಅತ್ಯಾಚಾರಕ್ಕೆ ಪ್ರಯತ್ನಿಸಿದ್ದು ತನ್ನ ತನಿಖೆಯಿಂದ ಸಾಬೀತಾಗಿದೆ ಎಂದು ಸಿಬಿಐ ಹೇಳಿದೆ.

ಅಂಜನಾ ಮಿಶ್ರಾರ ಈ ಪ್ರಕರಣವನ್ನು ಎ.ಐ.ಡಿ.ಡಬ್ಲ್ಯೂ.ಎ ಸಹಿತ ಪ್ರಮುಖ ಮಹಿಳಾ ಸಂಘಟನೆಗಳು ಹಾಗೂ ಪ್ರಜಾಸತ್ತಾತ್ಮಕ ಚಳವಳಿ ಕೈಗೆತ್ತಿಕೊಂಡು ಹೋರಾಟ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು.

## ಕೇರಳ : ಒಳಜಗಳಕ್ಕೆ ಬೇಸತ್ತು ಕಾಂಗ್ರೆಸ್ ಶಾಸಕ ರಾಜಿನಾಮೆ

ತಿರುವನಂತಪುರ : ಕೇರಳದ ಕಾಂಗ್ರೆಸ್ (ಐ) ಶಾಸಕರಲ್ಲಿ ಒಬ್ಬರಾದ ಕೆ. ಅಚ್ಯುತನ್ ವಿಧಾನಸಭೆ ಸದಸ್ಯತ್ವಕ್ಕೆ ರಾಜಿನಾಮೆ ನೀಡಿದ್ದಾರೆ.

ಪಕ್ಷದ ರಾಜ್ಯಘಟಕದಲ್ಲಿನ ಒಳಜಗಳಕ್ಕೆ ಬೇಸತ್ತು ತಾವು ಈ ಕ್ರಮ ಕೈಗೊಂಡಿರುವುದಾಗಿ ಅಚ್ಯುತನ್ ಹೇಳಿದ್ದಾರೆ. ಜಗಳದಲ್ಲಿ ನಿರತವಾಗಿರುವ ಬಣಗಳಲ್ಲಿ ಯಾವುದಾದರೊಂದು ಗುಂಪಿನ ಜೊತೆ ಗುರುತಿಸಿಕೊಳ್ಳದೆ ಪಕ್ಷದ ರಾಜ್ಯಘಟಕದಲ್ಲಿ ಉಳಿಯಲು ಆಗದಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎಂದೂ ಅವರು ವಿಷಾದ ವ್ಯಕ್ತಪಡಿಸಿದ್ದಾರೆ.

ಶಾಸಕ ಸ್ಥಾನಕ್ಕೆ ರಾಜಿನಾಮೆ ಕೊಡುವ ನಿರ್ಧಾರದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಅಚ್ಯುತನ್ ಸ್ಪಷ್ಟಪಡಿಸಿದ್ದಾರೆ.

ಕಾಂಗ್ರೆಸ್‌ನ ಹೋಲಸುಗೆಟ್ಟಿರುವ ಸ್ಥಿತಿಗೆ ಇದು ಕನ್ನಡಿ ಹಿಡಿದಂತಿಲ್ಲವೇ?

## ಮಂತ್ರಿಯಿಂದ ಪತ್ರಕರ್ತೆಯ ಮಾನಭಂಗ

ಶಿಮ್ಲಾ : ಹಿಮಾಚಲ ಪ್ರದೇಶದ ಆರೋಗ್ಯ ಸಚಿವ ರಾಮಲಾಲ್ ಠಾಕೂರ್ ಪತ್ರಕರ್ತೆಯೊಬ್ಬರ ಮಾನಭಂಗ ಮಾಡಿದ ಪ್ರಕರಣ ವರದಿಯಾಗಿದ್ದು ಈ ಬಗ್ಗೆ ಸಮಗ್ರ ತನಿಖೆ ನಡೆಸಲಾಗುತ್ತಿದೆ ಎಂದು ಮುಖ್ಯಮಂತ್ರಿ ವೀರಭದ್ರಸಿಂಗ್(ಕಾಂಗ್ರೆಸ್) ಹೇಳಿದ್ದಾರೆ.

ತಾನು ಉಳಿದುಕೊಂಡಿದ್ದ ಬಿಲಾಸಪುರದ ಹೋಟೆಲ್ ಕೊಠಡಿಯಲ್ಲಿ ಮಂತ್ರಿ ಠಾಕೂರ್ ಅನಗತ್ಯವಾಗಿ ತನ್ನ ಮೈ ಮುಟ್ಟಿ ಅಸಭ್ಯವಾಗಿ ವರ್ತಿಸಿದರು ಎಂದು ಸಾಧನಾ ಗುಪ್ತಾ ಎಂಬುವವರು ಪೋಲಿಸರಿಗೆ ನೀಡಿರುವ ದೂರಿನಲ್ಲಿ ಆಪಾದಿಸಿದ್ದಾರೆ.

ನ್ಯಾಯಸಮ್ಮತ ಹಾಗೂ ನಿಷ್ಪಕ್ಷಪಾತ ತನಿಖೆಗೆ ಅನುಕೂಲವಾಗುವಂತೆ ಆರೋಪಕ್ಕೊಳಗಾಗಿರುವ ಮಂತ್ರಿ ಠಾಕೂರ್ ರಾಜಿನಾಮೆ ನೀಡಬೇಕೆಂದು ಒತ್ತಾಯಿಸಿ ಪ್ರತಿಪಕ್ಷಗಳು ನವೆಂಬರ್ ೧೮ ರಂದು ಬಿಲಾಸ್‌ಪುರದಲ್ಲಿ ಪಂಜಿನ ಮೆರವಣಿಗೆ ಪ್ರದರ್ಶನ ಹಾಗೂ ಬಹಿರಂಗ ಸಭೆಯನ್ನು ನಡೆಸಿದವು.

## ದಾವಣಗೆರೆ ಜಿಲ್ಲಾ ವಾರ್ತೆ

### ಜಿಲ್ಲಾಧಿಕಾರಿಗೆ ಮನವಿ

1997-98 ನೇ ಸಾಲಿನಲ್ಲಿ ಟಿ.ಸಿ.ಹೆಚ್. ಪ್ರವೇಶಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು ತಮ್ಮ ಪ್ರವೇಶಾತಿ ಸಂದರ್ಭದಲ್ಲಿ 'ಸಿಂಧುತ್ವ ಪ್ರಮಾಣ ಪತ್ರ' ಒದಗಿಸಬೇಕೆಂಬ ಸರ್ಕಾರದ ನೀತಿಯನ್ನು ವಿರೋಧಿಸಿ ಟಿ.ಸಿ.ಹೆಚ್. ವಿದ್ಯಾರ್ಥಿಗಳು ಮತ್ತವರ ಪೋಷಕರು ಅಕ್ಟೋಬರ್ 20ರಂದು ಭಾರತ ವಿದ್ಯಾರ್ಥಿ ಫೆಡರೇಶನ್ ನೇತೃತ್ವದಲ್ಲಿ ದಾವಣಗೆರೆ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಇದರ ನೇತೃತ್ವವನ್ನು ಎಸ್.ಎಫ್.ಐ ರಾಜ್ಯ ಸಮಿತಿ ಸದಸ್ಯರು, ಜಿಲ್ಲಾ ಮುಖಂಡರು ಆದ ಕಾಂ|| ಪಿ. ಮಂಜುನಾಥ ಕಾಡಜ್ಜಿ ಇವರು ವಹಿಸಿದ್ದು, ಮನವಿಯಲ್ಲಿ 'ಸಿಂಧುತ್ವ ಪ್ರಮಾಣ ಪತ್ರ' ವನ್ನು ರದ್ದತಿ ಮಾಡಬೇಕು, ಇರುವ ಕಡಿಮೆ ಅವಧಿಯಲ್ಲಿ ಇದನ್ನೂ ಮಾಡಿಸಲು ಸಾಧ್ಯವಾಗದೇ ಇರುವುದರಿಂದ ಪ್ರವೇಶದ ಕೊನೆಯ ದಿನಾಂಕವನ್ನು ಮುಂದೂಡಬೇಕೆಂದು ಒತ್ತಾಯಿಸಲಾಗಿದೆ.

ಕಳೆದ ಅಕ್ಟೋಬರ್ 8 ರಂದು ಬೆಂಗಳೂರಿನ ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಗೆ ಎಸ್.ಎಫ್.ಐ. ಕಾರ್ಯಕರ್ತರು ಮುತ್ತಿಗೆ ಹಾಕಿದಾಗ 101 ಜನರನ್ನು ಬಂಧಿಸಿ, ಕೇಸು ದಾಖಲಿಸಿಕೊಂಡಿರುವುದನ್ನು ವಿರೋಧಿಸಿ ದಾವಣಗೆರೆಯ ಎಸ್.ಎಫ್.ಐ ಕಾರ್ಯಕರ್ತರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ಮನವಿಯಲ್ಲಿ ರಾಜ್ಯದಲ್ಲಿ ಖಾಲಿ ಇರುವ ಉಪನ್ಯಾಸಕರನ್ನು ಭರ್ತಿ ಮಾಡಿ ವಿದ್ಯಾರ್ಥಿಗಳ ಪಾಠ-ಪ್ರವಚನಕ್ಕೆ ಅನುಕೂಲಮಾಡಿಕೊಡಲು ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸಿದೆ.

### ವಿಚಾರ ಸಂಕಿರಣ

ಅಕ್ಟೋಬ್ 25 ರಂದು ದಾವಣಗೆರೆಯ ಕಾನೂನು ಕಾಲೇಜಿನಲ್ಲಿ ಎಸ್.ಎಫ್.ಐ., ಡಿ.ವೈ.ಎಫ್.ಐ. ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ಸಂಯುಕ್ತಾಶ್ರಯದಲ್ಲಿ ''ಜಾಗತೀಕರಣ ಮತ್ತು ಸಮೂಹ ಮಾಧ್ಯಮಗಳು ಎದುರಿಸುತ್ತಿರುವ ಬಿಕ್ಕಟ್ಟು'' ಕುರಿತು 'ವಿಚಾರ ಸಂಕಿರಣ' ಹಮ್ಮಿಕೊಳ್ಳಲಾಗಿತ್ತು.

ಪ್ರಜಾವಾಣಿ ಉಪಸಂಪಾದಕರಾದ ಜಿ.ಎನ್. ಮೊಹನ್, ಶಿಕ್ಷಣ ತಜ್ಞ ಡಾ|| ಐ.ಎ. ಲೋಕಾಪುರ್ ಈ ವಿಷಯ ಕುರಿತು ಮಾತನಾಡಿದರು. ಅಧ್ಯಕ್ಷತೆಯನ್ನು ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಎಸ್. ಮಲ್ಲೇಶ ವಹಿಸಿದ್ದರು.

ಪ್ರಾಸ್ತಾವಿಕವಾಗಿ ಡಿ.ವೈ.ಎಫ್.ಐ. ನ ಕೆ. ಮಹಾಂತೇಶ್ ಮಾತನಾಡಿದರು. ಎಸ್.ಎಫ್.ಐ.ನ ಪಿ. ಮಂಜುನಾಥ ಕಾಡಜ್ಜಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಣೆ ಮಾಡಿದರು. ಡಿ.ವೈ.ಎಫ್.ಐ.ನ ಹೆಚ್. ಟಿ. ಲೋಕೇಶ್ವರಪ್ಪ ವಂದಿಸಿದರು.

### ಉಪನ್ಯಾಸ

ದಾವಣಗೆರೆ ಕಾನೂನು ಕಾಲೇಜಿನಲ್ಲಿ ಅಕ್ಟೋಬರ್ 25 ರಂದು ಎಸ್. ಎಫ್. ಐ., ಡಿ.ವೈ.ಎಫ್.ಐ. ಹಾಗೂ ಸಂಯುಕ್ತಾಶ್ರಯದಲ್ಲಿ ಕವಿ, ಕ್ರಾಂತಿಕಾರಿ, ಬರಹಗಾರ 'ಚೆ ಗುವಾರ 'ಸ್ಮಾರಕ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ''ಕ್ಯೂಬಾ''ದಲ್ಲಿ ನಡೆದ 14ನೇ ವಿಶ್ವ ವಿದ್ಯಾರ್ಥಿ-ಯುವಜನ ಉತ್ಸವದ ಅನುಭವ ಕುರಿತು ಈ ಉಪನ್ಯಾಸ ಹಮ್ಮಿಕೊಳ್ಳಲಾಗಿತ್ತು. ಪ್ರಜಾವಾಣಿ ಉಪಸಂಪಾದಕರಾದ ಜಿ.ಎನ್. ಮೋಹನ್ ರವರು ತಮ್ಮ ಕ್ಯೂಬಾದ ಅನುಭವಗಳನ್ನು ಹಂಚಿಕೊಂಡರು. ಬ್ಯಾಂಕ್ ನೌಕರರ ಮುಖಂಡ ಎಂ. ಆರ್. ಹಿರೇಮಠ್ ಅಧ್ಯಕ್ಷತೆ ವಹಿಸಿದ್ದರು .

ಪ್ರಾಸ್ತಾವಿಕವಾಗಿ ಕೆ. ಮಹಾಂತೇಶ ಮಾತನಾಡಿದರು. ಸ್ವಾಗತವನ್ನು ಐಕ್ಯರಂಗ ಓದುಗರ ವೇದಿಕೆಯ ಡಿ.ಯಾಕೂಬ್ ಮಾಡಿದರು. ನಿರೂಪಣೆಯನ್ನು ಎಸ್.ಎಫ್.ಐ.ನ ಪಿ. ಮಂಜುನಾಥ್ ಕಾಡಜ್ಜಿ ಮಾಡಿ, ಕೊನೆಗೆ ವಂದಿಸಿದರು.

### ಉಚಿತ ಎಫ್.ಡಿ.ಸಿ. ತರಗತಿಗಳು

ಅಕ್ಟೋಬರ್ 22ರಿಂದ 30 ರವರೆಗೆ ಎಸ್.ಎಫ್.ಐ., ಡಿ.ವೈ.ಎಫ್.ಐ. ಸಂಯುಕ್ತಾಶ್ರಯದಲ್ಲಿ ಎಫ್.ಡಿ.ಸಿ. ಅಭ್ಯರ್ಥಿಗಳಿಗೆ ಉಚಿತ ತರಗತಿಗಳನ್ನು ನಡೆಸಲಾಯಿತು. 150 ವಿದ್ಯಾರ್ಥಿ/ವಿದ್ಯಾರ್ಥಿನಿಯರು ಇದರ ಸದುಪಯೋಗ ಪಡೆದುಕೊಂಡರು. ಅ.30 ರಂದು ಮುಕ್ತಾಯ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ಡಾ|| ಎಂ.ಜಿ. ಈಶ್ವರಪ್ಪ ಮುಖ್ಯ ಅತಿಥಿಯಾಗಿದ್ದರು. ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ. ನ ಮುಖಂಡ ಬ್ರಹ್ಮದೇವ್ ಹದಳಗಿ ವಹಿಸಿದ್ದರು.

ಎಸ್.ಎಫ್.ಐ. ರಾಜ್ಯ ಸಮಿತಿ ಸದಸ್ಯರಾದ ಪಿ. ಮಂಜುನಾಥ್ ಕಾಡಜ್ಜಿ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ಅತಿಥಿಗಳನ್ನು ಸ್ವಾಗತಿಸಿ, ಕಾರ್ಯಕ್ರಮ ನಿರೂಪಣೆ ಮಾಡಿದರು. ಡಿ.ವೈ.ಎಫ್.ಐ. ನ ಹೆಚ್.ಕೆ. ಮೂರ್ತಿ ವಂದನಾರ್ಪಣೆ ಮಾಡಿದರು.

ವೇದಿಕೆಯಲ್ಲಿ ಉಪನ್ಯಾಸಕರಾದ ಸಿ.ಎಂ. ಮಹದೇವ್ ರಾವ್, ಆರುಂಡಿ ರವಿ ಉಪಸ್ಥಿತರಿದ್ದರು.

### ಯುವಜನೋತ್ಸವ ಸಮಾರಂಭ

ದಾವಣಗೆರೆ ಸಮೀಪದ ಆವರಗೆರೆ ಡಿ.ವೈ.ಎಫ್.ಐ. ಘಟಕದಿಂದ ಆವರಗೆರೆಯಲ್ಲಿ ಡಿ.ವೈ.ಎಫ್.ಐ. ಸಂಸ್ಥಾಪನಾ ದಿನಾಚರಣೆ ಅಂಗವಾಗಿ ''ಯುವ ಜನೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ'' ಸಮಾರಂಭವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ನ.1 ಮತ್ತು 2 ರಂದು ಯುವಕ, ಯುವತಿಯರಿಗಾಗಿ ಮಡಿಕೆ ಹೊಡೆಯುವ ಸ್ಪರ್ಧೆ, ರಂಗೋಲೆ ಸ್ಪರ್ಧೆ, ಸ್ಲೋ ಸೈಕಲ್ ಸ್ಪರ್ಧೆ, ರೌಂಡ್ ಚೇರ್ ಸ್ಪರ್ಧೆ ನಡೆಸಲಾಯಿತು. ನಂ. 3 ರಂದು ಕನ್ನಡ ಬಾವುಟ, ಡಿ.ವೈ.ಎಫ್.ಐ. ಬಾವುಟಗಳ ಧ್ವಜಾರೋಹಣ ನೆರವೇರಿತು. ಸಂಜೆ ಶಾಲಾ ಮಕ್ಕಳಿಂದ ಸಮೂಹ ಗೀತೆ, ಯುವಕರಿಂದ ಡ್ಯಾನ್ಸ್, ಚಿತ್ರಗೀತೆ, ಮಿಮಿಕ್ರಿ ಕಾರ್ಯಕ್ರಮ ಸೊಗಸಾಗಿತ್ತು.

ಇಡೀ ಗ್ರಾಮದಲ್ಲಿ ಒಂದು ರೀತಿಯ ಹಬ್ಬದ ವಾತಾವರಣ ಉಂಟಾಗಿದ್ದು, ಗ್ರಾಮದ ಜನತೆ ಚಳಿ-ಗಾಳಿ ಎನ್ನದೇ ರಾತ್ರಿಯಿಡೀ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಿ ಖುಷಿಪಟ್ಟರು.

ಬಹುಮಾನ ವಿತರಣೆ ಸಮಾರಂಭದಲ್ಲಿ ಡಿ.ವೈ.ಎಫ್.ಐ. ನ ಕೆ. ಮಹಾಂತೇಶ್ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಕಾಂ|| ಎ.ಎಸ್. ಮೂರ್ತಿ, ಎಲ್.ಐ.ಸಿ. ಸಂಘಟನೆ ಮುಖಂಡ ಡಿ.ಯಾಕೂಬ್, ರೈತ ಮುಖಂಡರಾದ ರುದ್ರಮುನಿ, ಶೇಖರ ನಾಯ್ಕ, ಶಿಕ್ಷಕ ಗುರುಸಿದ್ದ ಸ್ವಾಮಿ, ಎಸ್.ಎಫ್.ಐ. ನ ಡಿ. ಶ್ರೀನಿವಾಸ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಡಿ.ವೈ.ಎಫ್.ಐ. ಆವರಗೆರೆ ಘಟಕದ ಅಧ್ಯಕ್ಷ ಕೆ.ಹೆಚ್. ಅಂಜನಪ್ಪ ಸ್ವಾಗತಿಸಿದರು. ಸಹ ಕಾರ್ಯದರ್ಶಿ ಹೆಚ್.ಎಂ. ಮಂಜಪ್ಪ ವಂದಿಸಿದರು.

### ಸಿ.ಪಿ.ಐ(ಎಂ) ಹಿತೈಷಿಗಳ ಸಭೆ.

ಅಕ್ಟೋಬರ್ 19 ರಂದು ಹರಿಹರದ ಕರೂರು, ರಾಮ್ಕೋ ಇಂಡಸ್ಟ್ರೀಸ್ ವರ್ಕರ್ಸ್ ಯೂನಿಯನ್ ಕಛೇರಿಯಲ್ಲಿ ಕಾಂ|| ನಿತ್ಯಾನಂದ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಿ.ಪಿ.ಐ.(ಎಂ) ಪಕ್ಷದ ಹಿತೈಷಿಗಳ ಸಭೆ ನಡೆಯಿತು.

ದೇಶದ ರಾಜಕೀಯ ವಿದ್ಯಾಮಾನಗಳಲ್ಲಿ ಪಕ್ಷದ ವಿಶೇಷ ಸ್ಥಾನ ಮಾನ, ಸಾಧನೆಗಳನ್ನು ಬಣ್ಣಿಸಿದ ಕಾಂ|| ನಿತ್ಯಾನಂದ ಸ್ವಾಮಿಯವರು ಪಕ್ಷದ ಜಿಲ್ಲಾ ಸಮ್ಮೇಳನ ನಡೆಸುವುದರ ಹಿನ್ನೆಲೆ ವಿವರಿಸಿದರು.

ಸಭೆಯಲ್ಲಿ ಹಾಜರಿದ್ದ ಹಿತೈಷಿಗಳಲ್ಲಿ ಬಹಳಷ್ಟು ಜನ ಮಾತನಾಡಿ, ರಾಣೇಬೆನ್ನೂರಿನಲ್ಲಿ ಸಿ.ಪಿ.ಐ(ಎಂ) ಪಕ್ಷದ ಜಿಲ್ಲಾ ಸಮ್ಮೇಳನ ನಡೆಸುವುದು ತುಂಬಾ ಹೆಮ್ಮೆಯ ವಿಚಾರ. ರಾಜ್ಯದಲ್ಲೆ ಒಂದು ಮಾದರಿ ಸಮ್ಮೇಳನವೇ ಎಂತೆ ವ್ಯವಸ್ಥೆಗೊಳಿಸಲು ಎಲ್ಲಾ ರೀತಿಯ ಪರಿಶ್ರಮ ಪಡುವುದಾಗಿ ತಿಳಿಸಿದರು.

ಸಮ್ಮೇಳನ ಸಿದ್ಧತೆಗಾಗಿ ಕರಪತ್ರ, ರೂ. 20,000 ನಿಧಿ ಸಂಗ್ರಹಿಸಲು ಕೂಪನ್‌ಗಳು ಮತ್ತು ರಸೀದಿ ಪುಸ್ತಕಗಳನ್ನು ಮುದ್ರಿಸಲು ನಿರ್ಣಯಿಸಲಾಯಿತು. ಸಮ್ಮೇಳನದ ಯಶಸ್ವಿಗೆ ಒಂದು ಸ್ವಾಗತ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಗೌರವಾಧ್ಯಕ್ಷರಾಗಿ ನಿತ್ಯಾನಂದ ಸ್ವಾಮಿ, ಕಾರ್ಯಾಧ್ಯಕ್ಷರಾಗಿ ಕೆ.ಎಲ್. ಭಟ್, ಪ್ರಧಾನ ಕಾರ್ಯದರ್ಶಿಯಾಗಿ ಕೆ. ಬಸವನಗೌಡರನ್ನೂ ಆರಿಸಲಾಯಿತು.

# ಪಾಕಿಸ್ತಾನದ ಪ್ರಧಾನಿ ಮೇಲೆ ಕೋರ್ಟ್ಗು ನಿಂದನೆ ಆಪಾದನೆ - ಸಂವೈಧಾನಿಕ ಬಿಕ್ಕಟ್ಟು

ಪಾಕಿಸ್ತಾನ ಇನ್ನೊಂದು ತೀವ್ರ ರಾಜಕೀಯ ಬಿಕ್ಕಟ್ಟಿನ ಅಂಚಿನಲ್ಲಿದೆ. ಪ್ರಧಾನಿ ನವಾಜ್ ಶರೀಫರ ಸರ್ಕಾರ ಮತ್ತು ಸುಪ್ರೀಂಕೋರ್ಟ್ ನಡುವೆ ಹಣಾಹಣಿ ರಾಜಕೀಯ ಮಾತ್ರವಲ್ಲ ತೀವ್ರ ಸಂವೈಧಾನಿಕ ಬಿಕ್ಕಟ್ಟು ತಂದಿಟ್ಟಿದೆ. ಇದೆಲ್ಲಾ ಆರಂಭ ವಾಗಿದ್ದು ಪ್ರಧಾನಿ ಪತ್ರಿಕೆಯೊಂದಕ್ಕೆ ನೀಡಿದ್ದ ಸಂದರ್ಶನದಿಂದ. ಆ ಸಂದರ್ಶನದಲ್ಲಿ ಕೋರ್ಟಿನ ನಿಂದನೆ ಮಾಡಿದ್ದಾರೆ ಎಂಬ ಖಾಸಗಿ ಫಿರ್ಯಾದಿ ನಿಂದ ಪಾಕಿಸ್ತಾನದ ಪ್ರಧಾನಿ ಮೇಲೆ ಕೋರ್ಟ್ಗು ನಿಂದನೆ ಆಪಾದನೆ ಮಾಡ ಲಾಯಿತು. ಬಹುಶಃ ಪ್ರಧಾನಿ ಕೋರ್ಟ್‌ನ ಕ್ಷಮಾಪಣೆ ಕೇಳಿದ್ದರೆ, ಅಷ್ಟಕ್ಕೇ ಕೇಸು ಮುಗಿದು ಹೋಗುತ್ತಿತ್ತು. ಆದರೆ ಕೇಸು ಮುಂದು ವರೆಸಲು ಪ್ರಧಾನಿ ಪ್ರಯತ್ನಿಸಿ ರುವುದು ಮಾತ್ರವಲ್ಲ, ಕೋರ್ಟಿನ ಆಪಾದನೆ ರುಜುವಾತಾದರೂ, ಪ್ರಧಾನಿ ವಿರುದ್ಧ ಈ ರೀತಿ ಅಪಾದನೆ ಬಗ್ಗೆ ಶಿಕ್ಷೆ ಕೊಡಲಾ ಗದಂತಹ ತಿದ್ದುಪಡಿಯನ್ನು ಕೋರ್ಟ್ಗು ನಿಂದನೆ ಕಾನೂನಿಗೆ ತರಲಾಯಿತು. ಇದರಿಂದ ಕುಪಿತವಾದ ಕೋರ್ಟ್ಗು, ಈ ಕಾನೂನಿಗೆ ಅಧ್ಯಕ್ಷರು ಸಹಿ ಹಾಕದಂತೆ ತಡೆ ಆಜ್ಞೆ ಹೊರಡಿಸಿತು. ಅಧ್ಯಕ್ಷರು ಈ ಕಾನೂ ನಿಗೆ ಸಹಿ ಹಾಕದಿದ್ದರೆ, ಅಧ್ಯಕ್ಷರು ಹಾಗೂ ಸುಪ್ರೀಂಕೋರ್ಟ್ಗು ಜಡ್ಜ್‌ಗಳ ಮೇಲೆ ಪಾರ್ಲಿಮೆಂಟರಿ ವಿಚಾರಣೆ ನೋಟಿಸು ನೀಡಲು ಸರ್ಕಾರ ಸಿದ್ಧವಾಯಿತು. ಇದನ್ನು ತಿಳಿದ ಸೇನಾ ಮುಖ್ಯಸ್ಥ ಮಧ್ಯಸ್ಥಿಕೆ ವಹಿಸಿ ತಡೆದರು.

ಈ ನಡುವೆ ಪ್ರಧಾನಿ ಹಾಗೂ ಪಾರ್ಲಿಮೆಂಟನ್ನು ಅಧ್ಯಕ್ಷರು ವಜಾ ಮಾಡುವ ಅಧಿಕಾರ ಕಿತ್ತುಕೊಳ್ಳುವ ಸಂವಿಧಾನ ತಿದ್ದುಪಡಿಯನ್ನು ಪ್ರಶ್ನಿಸುವ ರಿಟ್ ಅರ್ಜಿಯನ್ನು, ದಾಖಲು ಮಾಡಿದ ಸುಪ್ರೀಂ ಕೋರ್ಟ್ ಸರ್ಕಾರದ ಜತ ಇನ್ನೊಂದು ಹಣಾಹಣಿ ಆರಂಭಿಸಿದೆ.

ಪಾಕಿಸ್ತಾನದ ರಾಜಕೀಯ ವ್ಯವಸ್ಥೆಯ ಈ ಹಲವು ಸಂಸ್ಥೆಗಳ ನಡುವೆ ಹೊಂದಾಣಿಕೆಯ ಅಭಾವ, ಘರ್ಷಣೆ, ತೀವ್ರ ರಾಜಕೀಯ ಬಿಕ್ಕಟ್ಟು ತಂದಿದೆ. ಇತ್ತೀಚಿನ ಚುನಾವಣೆಗಳ ನಂತರ, ಪ್ರಧಾನಿ ನವಾಜ್ ಶರೀಫರ ಸರ್ಕಾರ ಮೂರನೇ ಎರಡರಷ್ಟರಕ್ಕಿಂತ ಹೆಚ್ಚಿನ ಬಾರಿ ಬಹುಮತ ಗಳಿಸಿ, ಪ್ರಜಾಸತ್ತೆ ಭದ್ರವಾಯಿತು ಎಂದಿದ್ದ ಪರಿಸ್ಥಿತಿ, ಈಗ ತೀವ್ರ ಬಿಕ್ಕಟ್ಟಿಗೆ ಎಡಮಾಡಿಕೊಟ್ಟಿದ. ರಾಜಕೀಯ ವ್ಯವಸ್ಥೆಯಲ್ಲಿ ಸ್ವೈಸ್ಯಕ್ಕೆ ಪುನಃ ಮಾರ್ಗ ತೋರಿಸಲು ಸರ್ವಾಧಿಕಾರ ಸ್ಥಾಪಿಸಲು ಅವಕಾಶಕೊಟ್ಟಿದೆ. ಪಾಕಿಸ್ತಾನ-ಭಾರತ ಜತ ಸಂಬಂಧ ಸಾಮಾನ್ಯಗೊಳಿಸುವ, ಪಾಕಿಸ್ತಾನ ದಲ್ಲಿ ಪ್ರಜಾಪ್ರಭುತ್ವ ಗಟ್ಟಿಗೊಳ್ಳುವುದನ್ನು ಸಹಿಸದ ಸಾಮ್ರಾಜ್ಯಶಾಹಿ ಶಕ್ತಿಗಳು ಈ ಬಿಕ್ಕಟ್ಟಿನ ಹಿಂದೆ ಇದ್ದಾರೆ.




# ಈಜಿಪ್ಟ್‌ನಲ್ಲಿ 70 ಪ್ರವಾಸಿಗಳ ಕಗ್ಗೊಲೆ - ಮೂಲಭೂತವಾದಿ ಕೃತ್ಯ

ಈಜಿಪ್ಟ್‌ನಲ್ಲಿ ಮುಸ್ಲಿಂ ಮೂಲಭೂತ ವಾದವನ್ನು ಹತ್ತಿಕ್ಕಲಾಗಿದೆ ಎಂಬ ಈಜಿಪ್ಟ್ ಸರ್ಕಾರದ ಹೇಳಿಕೆಯನ್ನು ಹುಸಿಗೊಳಿಸಿ ಕೆಲವು ದಿನಗಳ ಹಿಂದೆ 58 ಜನ ವಿದೇಶಿ ಯರು ಸೇರಿದಂತೆ 70 ಪ್ರವಾಸಿಗರನ್ನು ಮೂಲಭೂತವಾದಿ ಗುಂಪೊಂದು ಕಗ್ಗೊಲೆ ಮಾಡಿದೆ. ಈಜಿಪ್ಟ್‌ನ ಪ್ರಸಿದ್ಧ ಪ್ರವಾಸಿ ತಾಣವೊಂದರಲ್ಲಿ ನಡೆದ ಈ ಕಗ್ಗೊಲೆ, ಸರ್ಕಾರವನ್ನು ದಂಗುಬಡಿಸಿದೆ. ಆ ಸ್ಥಳಕ್ಕೆ ಭೇಟಿ ಇತ್ತ ಅಧ್ಯಕ್ಷ ಹುಸ್ನಿ ಮುಬಾರಕ್, ಗೃಹ ಮಂತ್ರಿಗಳನ್ನು ಈ ಕಗ್ಗೊಲೆಯನ್ನು ತಡೆ ಯಲು ವಿಫಲವಾದುದ್ದಕ್ಕೆ ವಜಾ ಮಾಡಿ, ಬೇರೆ ಗೃಹ ಮಂತ್ರಿಗಳನ್ನು ನೇಮಿಸಿದ್ದಾರೆ.

ಈಜಿಪ್ಟ್‌ನ ಸಾಮ್ರಾಜ್ಯಶಾಹಿ - ಪರ ಹಾಗೂ ಜನ ವಿರೋಧಿ ನೀತಿ ವಿರುದ್ಧ ಜನತೆಯ ಆಕ್ರೋಶವನ್ನು ಬಳಸಿಕೊಂಡು ಕಳೆದ ಕೆಲವು ವರ್ಷಗಳಿಂದ ಮುಸ್ಲಿಂ ಮೂಲಭೂತವಾದಿ ಗುಂಪುಗಳು ಬೆಳೆದಿವೆ. ಈಜಿಪ್ಟ್ ಸರ್ಕಾರವನ್ನು ಸಶಸ್ತ್ರ ಹೋರಾಟ ದಲ್ಲಿ ಉರುಳಿಸಿ ಇಸ್ಲಾಮಿಕ್ ಸರ್ಕಾರ ಸ್ಥಾಪಿಸುವುದು ಈ ಗುಂಪುಗಳ ಉದ್ದೇಶ. ಇತರ ಧರ್ಮೀಯರು, ವಿದೇಶಿಯರ ಮೇಲೆ ಆಕ್ರಮಣ ಈ ಗುಂಪುಗಳ ಕೃತ್ಯಗಳಲ್ಲೊಂದು.

ಈ ಘಟನೆ ನಂತರ, ಆ ಗುಂಪು ವಿದೇಶಿ ಪ್ರವಾಸಿಗರು ಈಜಿಪ್ಟ್‌ಗೆ ಬಂದರೆ, ಅವರಿಗೆ ಇದೇ ಗತಿಯಾಗುವುದು ಎಂದು ಹೇಳಿಕೆಯೊಂದರಲ್ಲಿ ಎಚ್ಚರಿಸಿದೆ.

# ಇರಾಕ್ ಬಿಕ್ಕಟ್ಟಿಗೆ ರಾಯಭಾರ ಪರಿಹಾರ

ಇರಾಕ್ ಅಮೆರಿಕಗಳ ಹಣಾಹಣಿ ಬಿಕ್ಕಟ್ಟು, ರಶ್ಯನ್ ಸೂತ್ರವೊಂದರ ಪ್ರಕಾರ ರಾಯಭಾರ ಪರಿಹಾರ ಕಂಡು ಅಂತ್ಯ ಗೊಂಡಿದೆ. ರಶ್ಯನ್ ಸೂತ್ರವನ್ನು ಬಹಿರಂಗ ಪಡಿಸದಿದ್ದರೂ ವಿಶ್ವಸಂಸ್ಥೆ ಪರೀಕ್ಷಣ ತಂಡದಲ್ಲಿ ಅಮೆರಿಕನ್ನರ ಪ್ರಮಾಣ ಕಡಿಮೆ ಮಾಡುವುದು, ಇರಾಕ್ ಮೇಲಿನ ದಿಗ್ಬಂಧನ ಸಡಿಲಿಸುವುದು, ಹೆಚ್ಚಿನ ಮಾನವತಾ ಸಹಾಯ, ಶಸ್ತ್ರಾಸ್ತ್ರ ಪರೀಕ್ಷಣೆಗೊಂದು ವೇಳಾಪಟ್ಟಿ, ಇವೆಲ್ಲದರ ಬಗ್ಗೆ ಅಂಶಗಳನ್ನೊಳಗೊಂಡಿದೆ ಎಂದು ಹೇಳಲಾಗಿದೆ. ಅಮೆರಿಕದ ವಕ್ತಾರರು ಇರಾಕ್‌ಗೆ ಯಾವುದೇ ರೀತಿಯ ಪರಿಹಾರ ಕೊಡ ಲಾಗಿದೆ ಎಂದು ನಿರಾಕರಿಸಿದರು. ಪುನಃ ಇರಾಕ್ ಶಸ್ತ್ರಾಸ್ತ್ರ ಪರೀಕ್ಷಣೆಗೆ ಅಡ್ಡಿಪಡಿಸಿ ದರೆ, ಮಿಲಿಟರಿ, ಕಾರ್ಯಾ ಚರಣೆ ಅಗತ್ಯ ವಾದೀತು ಎಂದು ತಮ್ಮ ಎಂದಿನ ಯುದ್ಧಕ್ಕೆ ಕಾಲುಕೆರೆಯುವುದನ್ನು ಪ್ರದರ್ಶಿಸಿದ್ದಾರೆ. ಈ ಒಪ್ಪಂದದ ನಂತರ ಏಳು 'ಸ್ಟೆಲ್ತ್' ಎಂಬ ವಿಶೇಷ ಫೈಟರ್ ವಿಮಾನಗಳನ್ನು ಕುವೈತ್‌ಗೆ ಕಳಿಸಲಾಗಿದೆ. ಒಪ್ಪಂದವಾದ ಮೇಲೂ, ಬಿಕ್ಕಟ್ಟಿನ ಆರಂಭ ದಲ್ಲಿ ಕಳಿಸಿದ ಯುದ್ಧ ಹಡಗು, ಯುದ್ಧ ವಿಮಾನ ಅಣ್ವಸ್ತ್ರಗಳನ್ನು ಹಿಂತೆಗೆದು ಕೊಳ್ಳುವ ಬಗ್ಗೆ ಯಾವುದೇ ಪ್ರಸ್ತಾಪ ಇನ್ನೂ ಇಲ್ಲ.

# ದ.ಕೊರಿಯಾಕ್ಕೆ ಐಎಂಎಫ್ ಸಾಲ

ದಕ್ಷಿಣ ಕೊರಿಯಾದಲ್ಲಿ - ಇತ್ತೀಚೆಗೆ ಹಲವಾರು ಭಾರಿ ಕಂಪನಿಗಳು ನಷ್ಟದಲ್ಲಿ ನಡೆ ಯುತ್ತಿರುವುದು ಅನಿಯಂತ್ರಿತ ಬ್ಯಾಂಕಿಂಗ್ ವ್ಯವಸ್ಥೆ ಇದರಿಂದ ಹಣಕಾಸಿನ ಬಿಕ್ಕಟ್ಟು ಎದುರಿಸುತ್ತಿರುವುದು ಹಾಗೂ ಇತ್ತೀಚಿನ ಅಂತರ್ರಾಷ್ಟ್ರೀಯ ಹಣಕಾಸಿನ ಬಿಕ್ಕಟ್ಟಿನ ಪರಿಣಾಮವಾಗಿ ಕೊರಿಯಾದ ನಾಣ್ಯ 'ವೊನ್' ಮೌಲ್ಯದ ಶೇಕಡ 25 ರಷ್ಟು ಕುಸಿದಿರುವುದು - ಇವೆಲ್ಲದರ ಫಲವಾಗಿ ಭಾರೀ ಆರ್ಥಿಕ ಬಿಕ್ಕಟ್ಟು ಉಂಟುಮಾಡಿದೆ.

ದ.ಕೊರಿಯ ಈ ಬಿಕ್ಕಟ್ಟಿನಿಂದ ಪಾರಾ ಲು ಭಾರಿ ದೊಡ್ಡ ಪ್ರಮಾಣದ ಐಎಂಎಫ್ ಸಾಲ ಕೋರಿದೆಯಂತೆ. ಇದು ಐಎಂಎಫ್ ಚರಿತ್ರೆಯಲ್ಲೇ ದೊಡ್ಡ ಸಾಲವಾಗಲಿದೆ ಯಂತೆ. ದ.ಕೊರಿಯಾದ ಆರ್ಥಿಕ ಯುರೋಪು, ಅಮೆರಿಕ, ಜಪಾನ್‌ಗಳ ಆರ್ಥಿಕಗಳೊಂದಿಗೆ ಗಹನ ಸಂಬಂಧ ಇಟ್ಟು ಕೊಂಡಿರುವುದರಿಂದ, ಅವು ಐಎಂಎಫ್‌ಗೆ ಈ ಸಾಲ ಕೊಡಲು ಶಿಫಾರಸು ಮಾಡಿವೆ ಯಂತೆ. ಆದರೆ ಈ ಸಾಲದೊಂದಿಗೆ ಬರುವ ಷರತ್ತುಗಳ ಬಗ್ಗೆ ಜನತೆಗೆ ತಿಳಿಸಲು ದ. ಕೊರಿಯಾದ ಸರ್ಕಾರಕ್ಕೆ ಭಯವಾಗಿದ್ದು 'ಬಿಸಿತುಪ್ಪ ನುಂಗಿ'ದಂತೆ ಆಡುತ್ತಿದೆಯಂತೆ. ಡಿಸೆಂಬರ್‌ನಲ್ಲಿ ಚುನಾವಣೆಗಳಿರುವುದರಿಂದ ಸರ್ಕಾರಕ್ಕೆ ಇನ್ನಷ್ಟು ಮುಜುಗರವಾಗಿದ್ದು, ಆದರೆ ಆರ್ಥಿಕ ಸ್ಥಿತಿ ತೀವ್ರವಾಗಿರು ವುದರಿಂದ, ಸಾಲ ತೆಗೆದುಕೊಂಡು ಹಾಕುವುದನ್ನು ಮುಂದೆ ಹಾಕಲು ಆಗದೆ ಒದ್ದಾಡುತ್ತಿ ದೆಯಂತೆ. ಮೊನ್ನೆ ಮೊನ್ನೆವರೆಗೆ ದ.ಕೊರಿಯಾ, ದಕ್ಷಿಣ ಪೂರ್ವ ಏಶ್ಯಾದ ದೇಶಗಳನ್ನು ಆರ್ಥಿಕ 'ಟೈಗರ್'ಗಳು ಎಂದು ಹಾಡಿ ಹೊಗಳಿ, ಎಲ್ಲಾ ಮೂರನೇ ಜಗತ್ತಿನ ದೇಶಗಳಿಗೆ ಮಾದರಿಯೆನ್ನುತ್ತಿದ್ದ ಸಾಮ್ರಾಜ್ಯ ಶಾಹಿ ಮಾಧ್ಯಮ ಈಗ ಮೌನಾಚರಣೆ ಮಾಡುತ್ತಿದೆ. ದಕ್ಷಿಣ ಪೂರ್ವ ಏಶ್ಯಾದ ದೇಶ ಗಳೂ (ಸಿಂಗಾಪುರ ಸೇರಿದಂತೆ) ಹಣಕಾಸಿನ ಬಿಕ್ಕಟ್ಟಿನಿಂದ ತತ್ತರಿಸುತ್ತಿವೆ. ಇದು ಸಾಮ್ರಾಜ್ಯಶಾಹಿ ಆರ್ಥಿಕ ಸಂಸ್ಥೆಗಳ ನೀತಿಯ ಭಾಗವಾಗಿ ಬಂದ ಬಿಕ್ಕಟ್ಟು ಎಂದು ದಿನೇ ದಿನೇ ಸ್ಪಷ್ಟವಾಗುತ್ತಿದೆ.

# ಅಫಘಾನ್ ತಾಲಿಬಾನ್ ಸರಕಾರದಿಂದ ಕಮ್ಯುನಿಸ್ಟರ ಬೇಟೆ

ಅಫಘಾನಿಸ್ತಾನದಲ್ಲಿ ಇನ್ನೂ ಅಲುಗಾಡುತ್ತಿರುವ ತಾಲಿಬಾನ್ ಸರ್ಕಾರ 1978 ರಿಂದ 1992 ರ ಅವಧಿಯಲ್ಲಿ ಪ್ರಗತಿಪರ ಸರ್ಕಾರದ ಅವಧಿಯಲ್ಲಿ, ಸರ್ಕಾರದ ಹಲವಾರು ಸ್ಥಾನಗಳಿಗೆ ಸೇರಿದವರನ್ನು ಅವರೆಲ್ಲ 'ಕಮ್ಯುನಿಸ್ಟರು' ಎಂದು ಆಪಾದಿಸಿ ವಜಾ ಮಾಡ ಹತ್ತಿದೆ. ಕಳೆದ ಎರಡು ತಿಂಗಳಲ್ಲೇ ಸುಮಾರು ಎರಡು ಸಾವಿರ ಸರ್ಕಾರಿ ಉದ್ಯೋಗಿಗಳನ್ನು ವಜಾ ಮಾಡಿದ್ದು, ಇನ್ನೂ ಸಾವಿರಾರು ಉದ್ಯೋಗಿಗಳ ಪಟ್ಟಿ ಮಾಡುತ್ತಿದೆ. ಈಗಾಗಲೇ ಶರಿಯತ್ ಆಧಾರಿತ ಹೊಸ ಇಸ್ಲಾಮಿಕ್ ಕಾನೂನುಗಳಿಂದ ಸರ್ಕಾರಿ ಮತ್ತಿತರ ಮಹಿಳಾ ಉದ್ಯೋಗಿಗಳು ತಮ್ಮ ಉದ್ಯೋಗ ಕಳೆದುಕೊಂಡಿದ್ದಾರೆ. 1978 ರಿಂದ 1992 ರ ಪ್ರಗತಿಪರ ಸರ್ಕಾರದ ಕಾರ್ಯಕ್ರಮಗಳಿಂದಾಗಿ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಶಿಕ್ಷಣ ಪಡೆದು ಉದ್ಯೋಗಗಳಿಗೆ ಸೇರಿದ್ದರು.

ಈ ನಡುವೆ ಕಾಬೂಲಿನ ಸುತ್ತಮುತ್ತ ತಾಲಿಬಾನ್, ಇತರ ಗುಂಪುಗಳಿಂದ ತೀವ್ರ ಪ್ರತಿರೋಧ ಮತ್ತು ಸವಾಲು ಎದುರಿಸುತ್ತಿದೆ.

# ರಶ್ಯನ್ ಆರ್ಥಿಕ ಮಂತ್ರಿ ವಜಾ

ಕಮ್ಯುನಿಸ್ಟ್ ಹಾಗೂ ಇತರ ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಒತ್ತಡದಿಂದ ರಶ್ಯದ ಉಪಪ್ರಧಾನಿ ಹಾಗೂ ಆರ್ಥಿಕ ಮಂತ್ರಿ ಅಂಟೋಲಿ ಚುಬಿಯಾಸ್‌ರನ್ನು ಅರ್ಥಖಾತೆಯಿಂದ ಕೈಬಿಡಲಾಗಿದೆ. ಇವರ ಇತರ ನಾಲ್ವರು ಬೆಂಬಲಿಗರಾದ ಸರ್ಕಾರಿ ಅಧಿಕಾರಿಗಳನ್ನು ವಜಾ ಮಾಡಲಾಗಿದೆ. ರಶ್ಯದಲ್ಲಿ ಖಾಸಗೀಕರಣದ ಬಗ್ಗೆ ಇನ್ನೂ ಪ್ರಕಟವಾಗದ ಪುಸ್ತಕಕ್ಕಾಗಿ ತಲಾ ತೊಂಬತ್ತು ಸಾವಿರ ಡಾಲರ್ ತೆಗೆದುಕೊಂಡ ಆಪಾದನೆ ಮೇಲೆ ಅವರ ವಜಾಕ್ಕೆ ಪಾರ್ಲಿಮೆಂಟಿನಲ್ಲಿ ವಿರೋಧ ಪಕ್ಷಗಳು ಒತ್ತಾಯಿಸಿದ್ದವು.

ಈ ನಾಲ್ಕು ಜನರನ್ನು ವಜಾ ಮಾಡ ದಿದ್ದರೆ ಬಜೆಟ್ ಮಂಜೂರು ಆಗಲು ಬಿಡು ವುದಿಲ್ಲ ಎಂಬ ವಿರೋಧ ಪಕ್ಷಗಳ ಬೆದರಿಕೆ 'ಯಿಂದ ಇದು ಸಾಧ್ಯವಾಯಿತು. ಈ ನಾಲ್ಕು ಜನರ ವಜಾದಿಂದ ಸರ್ಕಾರದ ಆರ್ಥಿಕ ನೀತಿ ಯಲ್ಲಿ ಹಲವು ಪ್ರಮುಖ ಬದಲಾವಣೆಗಳು ಆಗಬಹುದು. ಇವರ ಪ್ರಭಾವದಿಂದ ಅಮೆರಿಕದಂತಹ ನವ- . .ಲಿಬರಲ್ ಆರ್ಥಿಕ ನೀತಿಗಳ ದಾರಿ ಬದಲಾಗಬಹುದು ಎಂದು ಹೇಳಲಾಗಿದೆ. ಹಲವು ಬಾರಿ ಅರ್ಥ ಮಂತ್ರಿ ಚುಬಿಯಾಸ್ ಹಾಗೂ ಆತನ ಸಂಗಡಿಗರಿಗೆ , ರಶ್ಯದ ಮಾಫಿಯಾದ ನೇರ ಬೆಂಬಲವಿದೆ ಎಂದು ಹೇಳಲಾಗಿದೆ. ಅವರನ್ನು ಪ್ರಮುಖ ಆರ್ಥಿಕ ಖಾತೆಗಳಿಗೆ ನೇಮಿಸಿದ್ದ ಅಧ್ಯಕ್ಷ ಯೆಲ್ಸಿನ್‌ಗೂ ಇದು ಭಾರಿ ಸೋಲು.

# ಧಾರವಾಡದಲ್ಲಿ ಅಕ್ಟೋಬರ್ ಕ್ರಾಂತಿಯ 80ನೇ ವರ್ಷಾಚರಣೆ

ಧಾರವಾಡ: ನವೆಂಬರ್ 7 ರಂದು ಹಾನಗಲ್ ತಾಲ್ಲೂಕಿನ ಅಕ್ಕಿ ಆಲೂರಿನಲ್ಲಿ ಹಾನಗಲ್ ತಾಲೂಕಿನ ಕೃಷಿಕೂಲಿಕಾರರ ಸಂಘದ ಕಾರ್ಯಕರ್ತರು ಹಾಗೂ ಸಿಪಿಐ (ಎಂ) ಪಕ್ಷದ ಹಿತೈಷಿಗಳ ಒಂದು ವಿಶೇಷ ಸಭೆ ಅಕ್ಟೋಬರ್ ಕ್ರಾಂತಿಯ 80ನೇ ವಾರ್ಷಿಕೋತ್ಸವದ ಅಂಗವಾಗಿ ನಡೆಯಿತು. ಕೃಷಿಕೂಲಿಕಾರರ ಸಂಘದ ಜಿಲ್ಲಾ ಅಧ್ಯಕ್ಷ ರಾದ ಫಕೀರ ಹೋತನಹಳ್ಳಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯ ದರ್ಶಿ ಮಂಡಳಿ ಸದಸ್ಯರಾದ ಸಿ.ಆರ್. ಭಟ್ ರವರು ರಷ್ಯಾದಲ್ಲಿ ನಡೆದ ಮಹಾನ್ ಅಕ್ಟೋಬರ್ ಕ್ರಾಂತಿಯ ಮಹತ್ವವನ್ನು ವಿವರಿಸಿದರು. ಶ್ರಮಿಕ ವರ್ಗದ ಪ್ರಭುತ್ವದಲ್ಲಿ ಪಂಚ ವಾರ್ಷಿಕ ಯೋಜನೆಯ ಮೂಲಕ ಹಿಂದಿನ ಶೋಷಣೆ, ಅಸಮಾನತೆ, ದೌರ್ಜನ್ಯಗಳನ್ನೆಲ್ಲ ಹೋಗ ಲಾಡಿಸಿ ಅತಿ ಹಿಂದುಳಿದ ದೇಶ ವಾಗಿದ್ದ ಕಾಲದಲ್ಲಿಯೇ ಎಲ್ಲಾ ಕೇಂದ್ರ ಗಳಲ್ಲಿಯೂ ಮುಂದುವರಿದ ದೇಶವಾಗಿ ಪರಿವರ್ತಿಸಲಾಯಿತು. ಸಾಕ್ಷರತೆ, ಆರೋಗ್ಯ, ವಸತಿ, ಉದ್ಯೋಗ ಆಹಾರ ವಿಜ್ಞಾನ ತಂತ್ರಜ್ಞಾನ, ಸಾಂಸ್ಕೃತಿಕ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಜನರು ಪಾಲ್ಗೊಂಡು ಸಮಾನತೆ ಹಾಗೂ ಸಮೃದ್ಧಿಯ ಮೆರೆಸುವಂತಾಯಿತು ಎಂದರು. ಜಿಲ್ಲಾ ಕಾರ್ಯದರ್ಶಿ ಕಾಂ। ನಿತ್ಯಾನಂದ ಸ್ವಾಮಿ ಮಾತನಾಡಿ ಅಕ್ಟೋ ಬರ್ ಕ್ರಾಂತಿ ಹಾಗೂ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ ಗಳನ್ನು ಮೈಗೂಡಿಸಿ ಕೊಂಡು ಭಾರತ ಕರ್ನಾಟಕ ಹಾಗೂ ಧಾರವಾಡ ಜಿಲ್ಲೆಯ ಲ್ಲಿಯೂ ಸಿಪಿಐ(ಎಂ) ಪಕ್ಷದ ಮಾರ್ಗ ದರ್ಶನದಲ್ಲಿ ಶ್ರಮಿಕವರ್ಗದ ರಾಜಕೀಯವನ್ನು ಮುಂದು ವರಿಸಿ ಸಮಾಜ ವಾದದತ್ತ ಸಾಗಲು ಜನತಾ ಪ್ರಜಾಪ್ರಭುತ್ವ ಕ್ರಾಂತಿ ಸಾಧ್ಯವಾಗುವುದೆಂಬ ಆಶಯ ವ್ಯಕ್ತಪಡಿಸಿದರು

# ರಾಜೀವ್ ಗಾಂಧಿ ವಿ.ವಿ. ವಿದ್ಯಾರ್ಥಿಗಳ ಧರಣಿ

ರಾಜೀವಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಎಂ.ಎಸ್. ರಾಮಯ್ಯ ದಂತ ವೈದ್ಯ ಕಾಲೇಜಿನಿಂದ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ।। ಶಂಕರ್‌ನಾಯಕರ ಮನೆವರೆಗೆ ಮೆರವಣಿಗೆ ನಡೆಸಿ ನಿವಾಸದೆದುರು ಧರಣಿ ನಡೆಸಲಾಯಿತು.

ದಂತ ವೈದ್ಯ ವಿದ್ಯಾರ್ಥಿಗಳ ಫಲಿತಾಂಶಗಳು ತೀಕ್ಕೆ ಕುಸಿದಿದ್ದು ಈ ಕುರಿತು ಕೂಡಲೇ ತನಿಖೆಯಾಗಬೇಕು, ವಿಶ್ವವಿದ್ಯಾಲಯದಲ್ಲಿ ಮರು ಮೌಲ್ಯ ಮಾಪನ ವ್ಯವಸ್ಥೆ ಜಾರಿಯಾಗಬೇಕು. ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿಯನ್ನು ವಿದ್ಯಾರ್ಥಿಗಳಿಗೆ ಕೊಡಬೇಕು, ಮರುನೊಂದಣಿ ಶುಲ್ಕವನ್ನು ರದ್ದು ಮಾಡಬೇಕು. ವಿಶ್ವವಿದ್ಯಾಲಯ ವನ್ನು ವಿದ್ಯಾರ್ಥಿಗಳು, ಅಧ್ಯಾಪಕರು ಶಿಕ್ಷಣ ತಜ್ಞರನ್ನೊಳಗೊಂಡು ಪ್ರಜಾಸತ್ತಾತ್ಮ ಕವಾಗಿ ನಡೆಸಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ರಾಜ್ಯಾಧ್ಯಕ್ಷ ಕೆ.ಎಸ್. ಉಮೇಶ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ನಂತರ ಆರೋಗ್ಯ ಶಿಕ್ಷಣ ಫಾರ್ಮಸಿ, ದಂತವೈದ್ಯ, ಬಿ.ಎನ್.ವೈ.ಎಸ್. ನರ್ಸಿಂಗ್ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಮನವಿ ಪತ್ರ ಸಲ್ಲಿಸಲಾಯಿತು. ವಿದ್ಯಾರ್ಥಿಗಳನ್ನು ದ್ದೇಶಿಸಿ ಮಾತನಾಡಿದ ಸಚಿವರು, ವಿಧಾನ ಸೌಧದಲ್ಲಿ ರಾಜೀವಗಾಂಧಿ ವೈದ್ಯಕೀಯ ವಿಶ್ವ ವಿದ್ಯಾಲಯದ ಉಪಕುಲಪತಿ ಶ್ರೀಮತಿ ಕಾಂತಾ ರವರ ಜೊತೆ ಸಭೆಗೆ ವಿದ್ಯಾರ್ಥಿ ನಿಯೋಗವನ್ನು ಆಹ್ವಾನಿಸಿದರು. ರಾಜ್ಯದ ಅನೇಕ ಕಡೆಗಳಿಂದ ಆಗಮಿಸಿದ್ದ ೫೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದ ಧರಣಿಯಲ್ಲಿ ರಾಜೀವ್‌ಗಾಂಧಿ ವಿಶ್ವ ವಿದ್ಯಾಲಯ ವಿದ್ಯಾರ್ಥಿಗಳ ಕ್ರಿಯಾ ಸಮಿತಿಯ ಸಂಚಾಲಕ ರಿಜಾ ಅಪರಾಜಿತ, ಖಜಾಂಚಿ ವಿಜಯಸಾರಥಿ, ಸೆನೆಟ್ ಸದಸ್ಯೆ ಕೆ.ಎಸ್. ಲಕ್ಷ್ಮಿ, ಎಸ್.ಎಫ್.ಐ. ಜಿಲ್ಲಾಧ್ಯಕ್ಷ ಕೆ. ಶ್ರೀನಿವಾಸ್, ಜಿಲ್ಲಾ ಕಾರ್ಯದರ್ಶಿ, ಆರ್. ರಾಮಕೃಷ್ಣ ಇತರ ವಿದ್ಯಾರ್ಥಿ ಮುಖಂಡರು ಭಾಗವಹಿಸಿದ್ದರು. ○

# ........ವಿಮೋಚನಾ ಸಮರ

ಪುಟ 4 ರಿಂದ

ಫೆಬ್ರವರಿ 15, 1927 ರಂದು ಬ್ರಸೆಲ್ಸ್‌ನಲ್ಲಿ ಒಂದು ಸಾಮ್ರಾಜ್ಯಶಾಹಿ-ವಿರೋಧಿ ಅಂತರ್ರಾಷ್ಟ್ರೀಯ ಸಮ್ಮೇಳನ ನಡೆಯಿತು. ಭಾರತದಿಂದ ಜವಾಹರ ಲಾಲ್ ನೆಹರೂ, ಮೌಲಾನಾ ಬರ್ಕತುಲ್ಲಾ ಬ್ರಿಟಿಶ್ ಸಂಸತ್ತಿನಲ್ಲಿ ಭಾರತೀಯ ಕಮ್ಯುನಿಸ್ಟ್ ಸದಸ್ಯರಾಗಿದ್ದ ಶಾಪುರ್ಜಿ ಸಕ್ಲಾತ್‌ವಾಲಾ, ವಿರೇಂದ್ರನಾಥ್ ಚಟ್ಟೋಪಾಧ್ಯಾಯ ಮತ್ತಿತರರು ಭಾಗವಹಿಸಿದರು. ಜವಾಹಾರಲಾಲ ನೆಹರೂ ಸಮ್ಮೇಳನದ ಅಧ್ಯಕ್ಷ ಮಂಡಳಿಯ ಸದಸ್ಯರಾಗಿದ್ದರು. ವಿರೇಂದ್ರ ನಾಥ್ ಚಟ್ಟೋಪಾಧ್ಯಾಯ 'ಸಾಮ್ರಾಜ್ಯಶಾಹಿ ವಿರೋಧಿ ಲೀಗ್'ನ ಇಬ್ಬರು ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ಆಯ್ಕೆಯಾದರು.



ಬ್ರಿಟಿಶ್ ಸಂಸತ್ತಿಗೆ ಚುನಾಯಿತರಾದ ಭಾರತೀಯ ಕಮ್ಯುನಿಸ್ಟ್ ಶಾಪುರ್ಜಿ ಸಕ್ಲಾತ್‌ವಾಲಾ ನಂತರ ಭಾರತಕ್ಕೆ ಭೇಟಿ ನೀಡಿದಾಗ ಅವರಿಗೆ ದಿಲ್ಲಿ, ಕಲ್ಕತ್ತೆ ಮತ್ತಿತರ ಕಡೆಗೆ ಸನ್ಮಾನ ನೀಡಲಾಯಿತು. ಎಐಟಿಯುಸಿಯ ವಾರ್ಷಿಕ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತ 'ಕಾರ್ಮಿಕ ಆಂದೋಲನದ ಉದ್ದೇಶ ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿಯನ್ನು ಕಿತ್ತೆಸೆದು ಕಾರ್ಮಿಕರ ಹತೋಟಿಯಲ್ಲಿರುವ ಪ್ರಭುತ್ವವನ್ನು ಸ್ಥಾಪಿಸುವುದು' ಎಂದರು. ಈ ಎ.ಐ.ಟಿ.ಯು.ಸಿ. ಅಧಿವೇಶನದಲ್ಲಿ ಮೊತ್ತಮೊದಲ ಬಾರಿಗೆ ಕೆಂಬಾವುಟವನ್ನು ಹಾರಿಸಲಾಯಿತು. 'ಲಾಲ್ ಝಂಡಾ ಜಿಂದಾಬಾದ್' ಎಂಬ ಘೋಷಣೆ ಮೊತ್ತ ಮೊದಲ ಬಾರಿಗೆ ಕೇಳಿಬಂತು.

ಈ ಹೊತ್ತಿಗೆ ಕಾರ್ಮಿಕ ವರ್ಗ ರಾಷ್ಟ್ರೀಯ ಆಂದೋಲನದಲ್ಲಿ ಒಂದು ಶಕ್ತಿಯಾಗಿ ಮೂಡಿ ಬರಲಾರಂಭಿಸಿತ್ತು. ದೇಶದ ಕೆಲವೆಡೆ ಕಾರ್ಮಿಕರ ಆಯುಧವಾದ ಮುಷ್ಕರದ ಪ್ರಯೋಗ ಕಂಡುಬಂತು. ಫೆಬ್ರವರಿ 12, 1927 ರಂದು ಖರಗ್ ಪುರದಲ್ಲಿ 2500 ರೈಲ್ವೇ ಕಾರ್ಮಿಕರು ಮುಷ್ಕರ ನಡೆಸಿದರು. ರೈಲ್ವೆ ಆಡಳಿತದ ಆಶ್ವಾಸನೆಯ ಮೇರೆಗೆ ಮುಷ್ಕರ ನಿಂತಿತು. ಆದರೆ ಈ ಆಶ್ವಾಸನೆಯನ್ನು ಮುಂದಿಟ್ಟು 1700 ಕಾರ್ಮಿಕರನ್ನು ರಿಟ್ರೆಂಚ್ ಮಾಡಿದಾಗ ಮತ್ತೆ ಮುಷ್ಕರ ಆರಂಭವಾಯಿತು. 6 ತಿಂಗಳ ಕಾಲ ಇದು ನಡೆಯಿತು. ಈ ನಡುವೆ ಲಿಲೂಹಾದಲ್ಲಿ ಮುಷ್ಕರ ನಿರತ ರೈಲ್ವೆ ಕಾರ್ಮಿಕರ ಮೆರವಣಿಗೆಯ ಮೇಲೆ ಪೋಲೀಸರು ಗೋಳಿಬಾರು ನಡೆಸಿ 5 ಕಾರ್ಮಿಕರ ಬಲಿ ತಗೊಂಡರು. ಸೆಪ್ಟೆಂಬರ್ 13 ರಂದು ಸ್ವಯಂಸ್ಫೂರ್ತಿಯಿಂದ ಅಖಿಲ ಭಾರತ ಸಾರ್ವತ್ರಿಕ ರೈಲು ಮುಷ್ಕರ ನಡೆಯಿತು. ಈ ಕಾರ್ಮಿಕರ ತಕ್ಷಣದ ಬೇಡಿಕೆಗಳು ಈಡೇರದಿದ್ದರೂ ಆಗ ವ್ಯಕ್ತಗೊಂಡ ಕಾರ್ಮಿಕ ವರ್ಗದ ಪ್ರಜ್ಞೆ ಹಾಗೂ ಸಮರಧೀರ ಸೌಹಾರ್ದ ಮುಂದಿನ ಯಶಸ್ಸುಗಳಿಗೆ ನೆಲ ಹದ ಮಾಡಿತು.

(ಮುಂದುವರಿಯುವುದು)

# ನವರತ್ನ ಮಿನಿರತ್ನಗಳಿಗೆ ಚಿದಂಬರಂ ಸ್ವಾಯತ್ತತೆಯೆಂದರೆ ಸಾರ್ವಜನಿಕ ವಲಯವನ್ನು ಕಳಚಿ ಹಾಕುವ ಅಧಿಕಾರ

ಸಂಯುಕ್ತ ರಂಗ ಸರ್ಕಾರದ ಹಣಕಾಸು ಹಾಗೂ ಕೈಗಾರಿಕಾ ಸಚಿವಾಲಯ ಒಂಭತ್ತು ಅತ್ಯುತ್ತಮವಾಗಿ ನಡೆಯುತ್ತಿರುವ ಉದ್ದಿಮೆಗಳಿಗೆ 'ನವರತ್ನ' ಗಳ ಬಿರುದು ನೀಡಿದೆ. ಇನ್ನೂ 97 ಲಾಭಕಾರಿಯಾಗಿ ನಡೆಯುತ್ತಿರುವ ಉದ್ದಿಮೆಗಳಿಗೆ ಮಿನಿ-ರತ್ನಗಳ ಬಿರುದು ದಯಪಾಲಿಸಿದೆ. ಇವಕ್ಕೆಲ್ಲಾ ಹೆಚ್ಚಿನ ಸ್ವಾಯತ್ತತೆ ನೀಡಲಾಗುವುದು ಎಂದು ಸಾರಿದೆ. ಆದರೆ ಈ ಸ್ವಾಯತ್ತತೆಯೆಂದರೇನು? ವಾಸ್ತವವಾಗಿ ಸರಕಾರ ನೀಡುತ್ತಿರುವುದು ಪ್ರಜಾಸತ್ತಾತ್ಮಕ ಸ್ವಾಯತ್ತತೆಯಲ್ಲ, ಸಾರ್ವಜನಿಕ ವಲಯದ ಘಟಕಗಳನ್ನು ಕಳಚಿ ಹಾಕಲು ಅಧಿಕಾರ ಶಾಹಿಗಳಿಗೆ ನೀಡಿರುವ ಸ್ವಾಯತ್ತತೆಯದು ಎನ್ನುತ್ತಾರೆ ಸಿಐಟಿಯು ಮುಖಂಡರಾದ ಸ್ವದೇಶ್ ದೇವ್ ರಾಯ್.

ಸಂಯುಕ್ತ ರಂಗದ ಮಂತ್ರಿಗಳು ಇದು ತಾವು ಸಂಯುಕ್ತ ರಂಗದ ಸಮಾನ ಕನಿಷ್ಟ ಕಾರ್ಯಕ್ರಮ ಸಿ.ಎಂ.ಪಿ.ಯ ಪ್ರಕಾರ ತರುತ್ತಿರುವ ಕ್ರಮಗಳು ಎನ್ನುತ್ತಾರೆ. ಈ ಸಿಎಂಪಿ ಏನು ಹೇಳಿದೆ ನೋಡಿ -''ತುಲನಾತ್ಮಕವಾಗಿ ಅನುಕೂಲತೆಗಳನ್ನು ಹೊಂದಿರುವ ಸಾರ್ವಜನಿಕ ವಲಯದ ಕಂಪನಿಗಳನ್ನು ಗುರುತಿಸಿ ಅವುಗಳು ಬೃಹತ್ ಜಾಗತಿಕ ಸಂಸ್ಥೆಗಳಾಗಿ ಬೆಳೆಯುವ ಪ್ರಯತ್ನವನ್ನು ಸರಕಾರ ಬೆಂಬಲಿಸುವುದು. ಇತರ ಲಾಭಗಳಿಸುವ ದಕ್ಷ ಸಾರ್ವಜನಿಕ ವಲಯದ ಕಂಪನಿಗಳನ್ನು ಬಲಪಡಿಸಲಾಗುವುದು. ಅವುಗಳ ನಿರ್ವಹಣೆಯನ್ನು ಪರಿಣತಗೊಳಿಸಲಾಗುವುದು. ನವರತ್ನ, ಮಿನಿರತ್ನಗಳನ್ನು ಈ ಪ್ರಕಾರವೇ ಗುರುತಿಸಿ ಅವುಗಳಿಗೆ ಸ್ವಾಯತ್ತತೆ ನೀಡಲಾಗುತ್ತಿದೆಯಂತೆ. ಆದರೆ ಮೇಲೆ ಹೇಳಿದ ವಾಕ್ಯದ ನಂತರ ಇನ್ನೊಂದು ವಾಕ್ಯವಿದೆ. -''ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆಯನ್ನು ಈ ಸಾರ್ವಜನಿಕ ವಲಯದ ಕಂಪನಿಗಳಲ್ಲಿ ಪ್ರೋತ್ಸಾಹಿಸಲಾಗುವುದ" ಸಿ.ಎಂ.ಪಿ.ಯ ಈ ಅಂಶವನ್ನು ಜಾರಿಗೆ ತರಬೇಕೆನ್ನುವುದನ್ನು ಈ ಸರಕಾರ ಮರತೇ ಬಿಟ್ಟಂತಿದೆ ಎಂಬುದನ್ನು ಸ್ವದೇಶ್ ದೇವ್ ರಾಯ್ ಈ ನವರತ್ನಗಳ, ಮಿನಿರತ್ನಗಳ 'ಸ್ವಾಯತ್ತತೆ' ಯನ್ನು ವಿಶ್ಲೇಷಿಸುವ ಒಂದು ಲೇಖನದಲ್ಲಿ ನೆನಪಿಸಿದ್ದಾರೆ. ವಾಸ್ತವವಾಗಿ ಸಂಯುಕ್ತ ರಂಗದ ಸರಕಾರ ತನ್ನ ಈ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿ ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆ ಕುರಿತಂತೆ ಒಂದು ಶಾಸನ ತರುವುದಾಗಿಯೂ ಆಶ್ವಾಸನೆ ನೀಡಿತ್ತು. ಅದಂತೂ ಮರೆತೇ ಹೋಗಿದೆ.

ಅದಿರಲಿ, ಏನು ಈ ಸ್ವಾಯತ್ತತೆ? - 'ವಿದೇಶಿ ಕಂಪನಿಗಳೊಂದಿಗೆ ಜಂಟಿ ಉದ್ದಿಮೆ, ಒಪ್ಪಂದಗಳನ್ನು ಏರ್ಪಡಿಸಿಕೊಳ್ಳಲು ಶಾಖೆಗಳನ್ನು ತೆರಯಲು ಅಥವಾ ಮುಚ್ಚಲು, ಕಂಪನಿಗಳನ್ನು ಒಡೆಯಲು, ಕಾಯಂ ಹುದ್ದೆಗಳನ್ನು ರದ್ದು ಮಾಡಲು, ಅಂತರ್ರಾಷ್ಟ್ರೀಯ ಮಾರುಕಟ್ಟೆಯಿಂದ ಬಂಡವಾಳ ಸಾಲವಾಗಿ ಪಡೆಯಲು ಮತ್ತು ಕಾಯಂ ನೌಕರರನ್ನು ಕಡ್ಡಾಯವಾಗಿ ನಿವೃತ್ತಗೊಳಿಸಲು!

ಈ ಸ್ವಾಯತ್ತತೆಗೆ ಸರಕಾರ ಒಂದು ಶರತ್ತನ್ನು ಹಾಕಿದೆ - ಅಂದರೆ ಆಡಳಿತ ಮಂಡಳಿಗಳ ಪುನರ್ರಚನೆಗೆ ಆದ್ಯತೆ ನೀಡಬೇಕು, ಹೊರಗಿನವರನ್ನು ಸಾಕಷ್ಟು ಸಂಖ್ಯೆಯಲ್ಲಿ ಆಡಳಿತ ಮಂಡಳಿಗಳಲ್ಲಿ ತಗೊಳ್ಳಬೇಕು. ಈ ಹೊರಗಿನವರನು ಆಯ್ಕೆಯನ್ನು ಒಂದು 'ಶೋಧನಾ ಸಮಿತಿ' ಮಾಡುತ್ತದೆ. ಒಂದು ಪತ್ರಿಕಾ ವರದಿಯ ಪ್ರಕಾರ ಇಂತಹ 'ಶೋಧನಾ ಸಮಿತಿ' ಆರಿಸಿದ ಇಂತಹ ಹೊರಗಿನ ಆಡಳಿತ ಮಂಡಳಿ ಸದಸ್ಯರಲ್ಲಿ ಎಲ್ಲರೂ ಖಾಸಗೀ ವಲಯದವರು! ಅಂದರೆ ಖಾಸಗೀ ವಲಯದ ಪ್ರತಿನಿಧಿಗಳನ್ನು ಆಡಳಿತ ಮಂಡಳಿಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ತಗೊಂಡರೆ ಮಾತ್ರವೇ ಸಾರ್ವಜನಿಕ ವಲಯದ ಕಂಪನಿಗಳಿಗೆ ಸ್ವಾಯತ್ತತೆ ಎಂದರ್ಥವಲ್ಲವೇ? ವಾಸ್ತವವಾಗಿ ಈ ಸ್ವಾಯತ್ತತೆ ಸಿ.ಎಂ.ಪಿ. ಯಲ್ಲಿ ಹೇಳಿದಂತೆ ಸಾರ್ವಜನಿಕ ವಲಯದ ರತ್ನ, ಮಿನಿರತ್ನಗಳನ್ನು ಬಲಪಡಿಸಲಿಕ್ಕಲ್ಲ, ಉತ್ತಮವಾಗಿ, ದಕ್ಷ ರೀತಿ ಯಲ್ಲಿ ನಡೆಯುತ್ತಿರುವ ಸಾರ್ವಜನಿಕ ವಲಯ ಘಟಕಗಳನ್ನು ವಿವಿಧ ರೀತಿಗಳಲ್ಲಿ ವಿವಿಧ ಮಟ್ಟದವರೆಗೆ ಖಾಸಗೀಕರಿಸಲು ಬಹಳ ಜಾಕಚಕ್ಯತೆಯಿಂದ ರೂಪಿಸಿದ ಯೋಜನೆಯಿದು ಎನ್ನುತ್ತಾರೆ ಕಾಂ|| ಸ್ವದೇಶ್ ದೇವ್ ರಾಯ್ ತಮ್ಮ ಲೇಖನದಲ್ಲಿ.

ಈ 'ಸ್ವಾಯತ್ತತೆ' ಯಲ್ಲಿ ಇನ್ನೂ ಕೆಲವು ಅಪಾಯಕಾರಿ ಅಂಶಗಳಿವೆ.

. ಈ ನವರತ್ನ, ಮಿನಿರತ್ನಗಳು ಮಹಾಲೆಕ್ಕ ಪರಿಶೋಧಕ(ಸಿ.ಎ.ಜಿ) ವ್ಯಾಪ್ತಿಗಾಗಲೀ, ಸಂಸತ್ತಿನ ಸಮಿತಿಯ ವ್ಯಾಪ್ತಿಗೂ ಬರುವುದಿಲ್ಲ. ಅಂದರೆ ಅಡೆ-ತಡೆಯಿಲ್ಲದ, ಭ್ರಷ್ಟಾಚಾರಕ್ಕೆ ಬಾಗಿಲು ತೆರದಿರುವುದು.

. ಸಾರ್ವಜನಿಕ ವಲಯದ ಉದ್ದಿಮೆಗಳ ಆಡಳಿತವನ್ನು ಪರಿಣತಗೊಳಿಸುವ ಹೆಸರಲ್ಲಿ ಉಚ್ಚ ಅಧಿಕಾರಿಗಳಿಗೆ ಸಕಲ ಸವಲತ್ತುಗಳು, ಸಿಬ್ಬಂದಿ ಸಂಖ್ಯೆಯನ್ನು ಯಾವ ರೀತಿಯಲ್ಲಿ ಬೇಕಾದರೂ ಕಡಿತ ಮಾಡಬಹುದು!

. ಇವೆಲ್ಲಾ ಸಾರ್ವಜನಿಕ ವಲಯವನ್ನು ಬಲಪಡಿಸಲೋ, ಕಳಚಿಹಾಕಲೋ? ವಾಸ್ತವವಾಗಿ ಈ ನವರತ್ನಗಳನ್ನು ಮಿನಿ ರತ್ನಗಳನ್ನು ಅಗ್ಗ ದರದಲ್ಲಿ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸುವುದರಿಂದ ಬರುವ ಹಣವನ್ನು ಸರಕಾರ ತನ್ನ ಹಣಕಾಸು ಕೊರತೆಯನ್ನು ತುಂಬಿಸಲು ಬಳಸುತ್ತಿದೆ. ಅಂದರೆ ಡಿವಿಡೆಂಟ್, ತೆರಿಗೆಗಳು, ಸುಂಕಗಳನ್ನು ಪ್ರಾಮಾಣಿಕವಾಗಿ ತೆರುವ ಮೂಲಕ ಸರಕಾರದ ಖಜಾನೆಗೆ ನೂರಾರು ಕೋಟಿ ರೂಪಾಯಿಗಳನ್ನು ನೀಡುವ ಲಾಭದಾಯಕವಾದ ಈ ಘಟಕಗಳನ್ನು ಲಾಭಗಳಿಸುವ ರಾಷ್ಟ್ರದ ಆಸ್ತಿಗಳನ್ನು ಹರಾಜು ಮಾಡಲಾಗುತ್ತಿದೆ ಎಂದಿದ್ದಾರೆ ಕಾಂ. ಸ್ವದೇಶ್ ದೇವ್ ರಾಯ್.

1990 ರಲ್ಲಿ ಸರಕಾರ ದೇಶದ ಚಿನ್ನವನ್ನು ವಿದೇಶಗಳಲ್ಲಿ ಒತ್ತೆಯಿಟ್ಟು ಸಾಲ ಪಡೆಯಿತು, ಈಗ ಈ ನವರತ್ನ, ಮಿನಿ ರತ್ನಗಳನ್ನು ಮಾರಿ ಬಜೆಟ್ ಕೊರತೆಯನ್ನು ನೀಗಿಸಲಾಗುತ್ತಿದೆ. ಪರಿಸ್ಥಿತಿ ಈ ಏಳು ವರ್ಷಗಳಲ್ಲಿ ಸುಧಾರಿಸಿದೆಯೋ, ಹದಗೆಟ್ಟಿದೆಯೋ? ಸರಕಾರ ಜನಗಳಿಗೆ ಉತ್ತರ ನೀಡಬೇಕಾಗಿದೆ. ಅದೇ ವೇಳೆಗೆ ಕಾರ್ಮಿಕ ವರ್ಗ ಇಂತಹ ರಾಷ್ಟ್ರವಿರೋಧಿ ಕ್ರಮಗಳನ್ನು ಸೋಲಿಸಲು ಮುಂದಾಗಬೇಕು ಎಂದು ಕಾಂ|| ಸ್ವದೇಶ್ ದೇವ್ ರಾಯ್ ಹೇಳಿದ್ದಾರೆ. ○

## ಪದಬಂಧ 4 ಉತ್ತರ - ವಿಶ್ವ

| | | | | | | | | |
|---|---|---|---|---|---|---|---|---|
| ಅ | ಜೇ | ಯ | | | | ಅ | ಮ | ರ |
| ಗ್ರ | | | ಪ | | ಚಿಂ | | | ಣ |
| ದೂ | | | ಜ | ನ | ತೆ | | | ಜ |
| ತ | ಮು | ಜೆ | | | | ಕಿಂ | ಚಿ | ತ್ |
| | ರಿ | | | | | | ರ | |
| | ತ | ಲೆ | | | | ಕ | ತೆ | |
| | | | ಗ | ದ | ರ್ | | | |
| ಧೀ | | | | | | | | ರಾ |
| ರ | ಜಾ | ಕಾ | ರ | | ಪಂ | ಡಿ | ತ್ | ತಿ |

## ವಾರದ ವ್ಯಂಗ್ಯ ಚಿತ್ರ




ಬೇಡಕ್ಕ, ಅವ ಶೇರು ಮಾರುಕಟ್ಟೆ ಮನುಷ್ಯ. ನಾಳೆ ನಮ್ಮತ್ರನೇ ಕೈಯೊಡ್ಡಬಹುದು.....

## ಅಣಕ

ಶರತ್ ಚಂದ್ರ

# ನಿಮ್ಮ ಗ್ರಹಗಳ ಗತಿ - ಈ ವಾರ

**ಮೇಷ**

ನೀವು ಮೊದಲ ಬಾರಿಯ ಎಂ.ಪಿ. ಗಳಾಗಿದ್ದರೆ, ಅದರ ಫೋರಂ ಸೇರಿಕೊಂಡು ಲೋಕಸಭೆ ವಿಸರ್ಜಿಸಬಾರದು ಎನ್ನುವ ಒರಲಿಗೆ ಕೊರಳು ಕೊಡಿ. ಏನು ಪ್ರಯೋಜನ ಎಂಬ ಕೊರಗು ಬೇಡ. ಕನಿಷ್ಠ 'ಲಕ್ನೋ ಮಾದರಿ'ಯಲ್ಲಿ ಮಂತ್ರಿಗಳಾಗುವ ಸುಯೋಗ ಬರಬಹುದು. ಪಾರ್ಲಿಮೆಂಟಿನ ಹಿಂಭಾಗಿಲು ಎಲ್ಲಿದೆ ಎಂದು ತಿಳಕೊಳ್ಳಿ. ಪ್ರಯೋಜನಕ್ಕೆ ಬರಬಹುದು. ಬಂಧುಗಳಿಂದ ಕಷ್ಟ. ಸಾಲಗಾರರಿಂದ ತೊಂದರೆ

**ವೃಷಭ**

ನೀವು ಪುಸ್ತಕ ಪ್ರಕಾಶಕರಾಗಿದ್ದಲ್ಲಿ ಜೈನ್ ಆಯೋಗದ ಮಧ್ಯಂತರ ವರದಿಯನ್ನು ತಮಿಳಿನಲ್ಲಿ ಪ್ರಕಟಿಸಿ. ಕೆಲವರ ಗ್ರಹಗಳ ಗತಿ ಪ್ರಕಾರ ಅವರು ಈ ಪುಸ್ತಕವನ್ನು ಸುಡುತ್ತಾರೆ. ಆದ್ದರಿಂದ ಈ ಪುಸ್ತಕದ ಮಾರಾಟ ಹೆಚ್ಚುತ್ತದೆ. ಹಿಂದೆಂದೂ ಕಾಣದಂತ ಪತ್ತೇದಾರಿ ಕಾದಂಬರಿ ಎಂದು ಪ್ರಚಾರ ಮಾಡಿ. ಖಂಡಿತ ನೀವು ಲಕ್ಷಾಧೀಶರಾಗುತ್ತೀರಿ: ಸರಕಾರದ ಕೆಲಸದಲ್ಲಿ ಖರ್ಚು. ಬಸ್ಸಿಗೆ ತೊಂದರೆ.

**ಮಿಥುನ**

ಯಾವುದಕ್ಕೂ ಗಡಿಬಿಡಿ ಮಾಡಬೇಡಿ. ಪತ್ರ ಬರೆಯುವುದರಲ್ಲೂ, ಉತ್ತರಕ್ಕೆ ಮಾರುತ್ತರ ಕೊಡುವುದರಲ್ಲಿ ವಿಳಂಬ ನಿಮಗೆ ಕ್ಷೇಮ ಉಂಟು ಮಾಡುತ್ತದೆ. ಏನಾದರೂ ಹೆಚ್ಚುಕಮ್ಮಿ ಆದರೆ, ನಿಮಗೆ 'ಗಡಿಬಿಡಿ ಘಾಟಿ ಮುದುಕ'(Old man in a hurry) ಎಂದಾರು ಜಾಗ್ರತೆ! ತಾಳಿದವನು ಬಾಳಿಯಾನು. ಮುಂದಿನ ಪತ್ರದಲ್ಲಿ ಹೊಸ ಬೇಡಿಕೆ ಹಾಕಿ. ಪತ್ರದಲ್ಲಿ ವಿಳಂಬ, ಫೋನ್ ಕೆಟ್ಟು ತೊಂದರೆ.

**ಕಟಕ**

ಪಕ್ಷದ ಶಿಸ್ತಿನ ಬಗ್ಗೆ ಕಾಳಜಿ ಬೇಡ. ನಿಮ್ಮ ಪಕ್ಷದ ಮೂರನೇ ಒಂದು ಎಂ.ಪಿ. ಗಳು ಶಿಸ್ತಿನ ಕಾಳಜಿ ಒಟ್ಟಿಗೆ ತೊರೆದರೆ ಒಳ್ಳೇದು. ಇಲ್ಲವಾದರೇ ಒಂದು ಬಾರಿ ಲಕ್ನೋ ಭೇಟಿ ಮಾಡಿ ಬನ್ನಿ, ಎಲ್ಲಾ ಸರಿ ಹೋಗುತ್ತದೆ. ಧೈರ್ಯವಾಗಿರಿ. ಪ್ರಯಾಣದಲ್ಲಿ ಶುಭ, ಮಳೆಯಿಂದ ಹಾನಿ.

**ಸಿಂಹ**

ಏಣಿಯಿಂದ ಆದಷ್ಟು ದೂರವಿರಿ. ನಿಮ್ಮ ಗ್ರಹಗಳ ಗತಿ ಪ್ರಕಾರ ನಿಮಗೆ ಏಣಿಗಳಿಂದ ಈ ವಾರ ಕಂಟಕವಿದೆ. ಏಣಿ ಎಳೆಯುವುದಾಗಲಿ, ಏಣಿಗೆ ಒದೆಯುವುದಾಗಲಿ ಸಲ್ಲ. ಏಣಿ ಮೇಲೆ ನಿಂತುಕೊಂಡಂತೂ, ಏಣಿ ಒದೆಯುವುದು ಈ ವಾರ ಸುತಾರಾಂ ಮಾಡಬೇಡಿ. ಏಣಿ ಹತ್ತಿ ಆಗಲೇ ಮೇಲೆ ಹೋಗಿದ್ದರೆ ವಾಪಸು ಇಳಿಯಬೇಕೆಂದರೆ, ಯಾರಾದರೂ ಏಣಿ ತೆಗೆದು ಹಾಕಿದ್ದಾರಾ ಎಂದು ಹುಶಾರಾಗಿ ಗಮನಿಸಿ. ಮನೆಯಲ್ಲಿ ಕಿರಿಕಿರಿ. ಮನೆಯಲ್ಲಿ ಕಳ್ಳತನದಿಂದ ನಷ್ಟ - ಏಣಿ ಹತ್ತಿ.

**ಕನ್ಯಾ**

ನೀವು ಕಾಂಗ್ರೆಸ್ಸಿಗರಾಗಿದ್ದಲ್ಲಿ.

'ಸೋನಿಯಾ ಗಾಂಧಿ ಬಾರಮ್ಮ
ನಮ್ಮಮ್ಮ ಸೋ
ನಿಯಾ - ಗಾಂಧಿ ಬಾರಮ್ಮ
ಕಷ್ಟದ ಕಾಲದಿ
ಪಟ್ಟವನೇರಲು ಸೋ
ನಿಯಾ - ಗಾಂಧಿ ಬಾರಮ್ಮ'

ಎಂದು ಹಾಡಲು ಪ್ರಯತ್ನಿಸಿ. ನೀವು ಯುವಕ/ಯುವತಿಯಾಗಿದ್ದಲ್ಲಿ ಪ್ರಿಯಾಂಕ ಅಥವಾ ರಾಹುಲ್ ಯುವ ಕಾಂಗ್ರೆಸ್‌ಗೆ ನಾಯಕತ್ವ ಕೊಡಬೇಕು ಅಂತ ಹೇಳಿಕೆ ನೀಡಿ. ವಿದೇಶಿ ಸಂಸ್ಥೆಯಲ್ಲಿ ನೌಕರಿಯಿಂದ ಹೆಚ್ಚಿನ ಧನಾಗಮನ.

**ತುಲಾ**

ನಿಮ್ಮ ಗ್ರಹಗಳು ಬೊಂಬಾಟಾಗಿವೆ. 'ಫನ್ನಿ ಟೈಂಸ್' ಪತ್ರಿಕೆ ನಡೆಸಲಿರುವ 'ಕೇಸರಿ ತಾತನ ಮುಂದಿನ ಪತ್ರದಲ್ಲಿ ಯಾವ ಹೊಸ ಬೇಡಿಕೆ ಒಡ್ಡುತ್ತಾರೆ' ಎಂಬ ಬಗೆಗಿನ ರಾಷ್ಟ್ರೀಯ ಸ್ಪರ್ಧೆಯಲ್ಲಿ ನಿಮಗೆ ಬಹುಮಾನ. ಶೇರು ಮಾರ್ಕೆಟ್ಟಿನಲ್ಲಿ ನಷ್ಟ. ಮಗಳ ಮದುವೆಗೆ ತೊಂದರೆ.

**ವೃಶ್ಚಿಕ**

ನಿಮ್ಮ ಗ್ರಹಗಳೂ ಬೊಂಬಾಟಾಗಿವೆ. ಫನ್ನಿ ಟೈಂಸ್ ಪತ್ರಿಕೆ ನಡೆಸಲಿರುವ 'ಕೇಸರಿ ತಾತನ..................'' ಸ್ಪರ್ಧೆಯ ಬಂಪರ್ ಬಹುಮಾನ ನಿಮಗೇ! ಏನ್ಸಾರ್, ತುಲಾದವರಿಗೂ ಇದೇ ಬರೆದಿದ್ದೀರಲ್ಲ ಎಂದಿರಾ? ಅದು ಬುರುಡೆ ಬಿಡಿ! ನಿಮಗೆ ವೃಶ್ಚಿಕದವರಿಗೂ ಉತ್ತರ ಸಹ ಹೇಳುತ್ತೇನೆ. ಕೇಳಿ. 'ಕೇಸರಿ ತಾತನ ಮುಂದಿನ ಬೇಡಿಕೆ - ರಾಜೀವ್ ಕೊಂದವರು ಯಾರು ಎನ್ನುವ ಬಗ್ಗೆ ಜನಮತ ಸಂಗ್ರಹ ಮಾಡಬೇಕು. ಈ ಜನಮತ ಸಂಗ್ರಹಗಳನ್ನು ಕಾಂಗ್ರೆಸ್ ನಾಯಕತ್ವದ ಸರ್ಕಾರ ನಡೆಸಬೇಕು ಅಂತ. ಶ್ರೀಮತಿಯವರ ಜೊತೆ ಕಿರಿಕಿರಿ - ಕೋಪ.

**ಧನು**

ನಿಮ್ಮ ಗ್ರಹಗತಿ ಚೆನ್ನಾಗಿದೆ. ನೀವು ಪತ್ರಕರ್ತರಾಗಿದ್ದರೆ, ನಿಮಗೆ ಈ ವಾರ ಯಾವುದಾದರೊಂದು ಕಮಿಶನ್‌ನ ಮಧ್ಯಂತರ ವರದಿ ಮನೆಗೆ 'ಕುರಿಯರ್' ನಲ್ಲಿ ಬರುತ್ತದೆ. 'ಕುರಿಯರ್' ತೆಗೆದುಕೊಳ್ಳಲು ಮನೆಯಲ್ಲೇ ಇರಿ. ಶನಿವಾರ ಹಿರಿಯ ಮಗನಿಗೆ ವಿದೇಶಿ ಯಾತ್ರೆ ಇತ್ಯಾದಿ. ಇತ್ಯಾದಿ. ○

# ಶಾಸಕಾಂಗಗಳಲ್ಲಿ ಮಹಿಳಾ ಮೀಸಲಾತಿ ವಿಧೇಯಕ ಸಂಸತ್ತಿನ ಹತ್ತಿರ ಸರದಿ ಉಪವಾಸ ಆರಂಭ

ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಮಹಿಳೆಯರಿಗೆ ಶೇಕಡ ೩೩ ರಷ್ಟು ಸ್ಥಾನ ಮೀಸಲಿರಿಸುವ ವಿಧೇಯಕವನ್ನು ಕೂಡಲೇ ಅಂಗೀಕರಿ ಸುವಂತೆ ಆಗ್ರಹಿಸಿ ಹಲವಾರು ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ನವೆಂಬರ್ ೨೦ ರಂದು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಸರದಿ ನಿರಶನವನ್ನು ಆರಂಭಿಸಿದರು.

ಸುಭಾಷ್ ಚಂದ್ರ ಭೋಸ್‌ರ ಭಾರತ ರಾಷ್ಟ್ರೀಯ ಸೇನೆಯ(ಐ.ಎನ್.ಎ) ರಾಣಿ ಝಾನ್ಸಿ ಬ್ರಿಗೇಡ್‌ನ ನಾಯಕಿಯಾಗಿದ್ದ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಈ ಹೋರಾಟ ಗಾರರಲ್ಲಿ ಪ್ರಮುಖರಾಗಿದ್ದಾರೆ.

ಆರು ವಾರ ಕಾಲ ನಡೆಯುವ ಸಂಸತ್ತಿನ ಅಧಿವೇಶನದುದ್ದಕ್ಕೂ ಈ ಸತ್ಯಾಗ್ರಹವನ್ನು ನಡೆಸಲು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ(ಎ.ಐ.ಡಿ.ಡಬ್ಲ್ಯೂ.ಎ.) ಆದಿಯಾಗಿ ಪ್ರಮುಖ ಮಹಿಳಾ ಸಂಘಟನೆಗಳು ನಿರ್ಧರಿಸಿದೆ.

ನಾವು ಎಲ್ಲವನ್ನು ಕೊಡುತ್ತೇವೆ...

'ನಾವು ಪುರಷರಿಗೆ ಪ್ರತಿಯೊಂದನ್ನೂ ಕೊಡುತ್ತೇವೆ. ಅವರು ನಮಗೇಕೆ ಶೇ. ೩೩ ಮೀಸಲಾತಿ ಕೊಡಲಾರರು' ಎಂದು ಸತ್ಯಾಗ್ರಹ ನಿರತರನ್ನುದ್ದೇಶಿಸಿ ಮಾತನಾಡಿದ ಲಕ್ಷ್ಮಿ ಸೆಹಗಲ್ ಪ್ರಶ್ನಿಸಿದರು. 'ದೇಶ ಎದುರಿಸಿದ ಪ್ರತಿಯೊಂದು ಸವಾಲಿನ ವಿರುದ್ಧವೂ ಭಾರತೀಯ ಮಹಿಳೆಯರು ಹೋರಾಟ ನಡೆಸಿದ್ದಾರೆ. ನಾವು ಭಿಕ್ಷೆ ಬೇಡುತ್ತಿಲ್ಲ. ಜನಸಂಖ್ಯೆಯ ಅರ್ಧದಷ್ಟಿರುವ ಜನರನ್ನು ಸರಕಾರ ಕಡೆಗಣಿಸಬಾರದು' ಎಂದು ಅವರು ಹೇಳಿದರು.

ಸ್ವಾತಂತ್ರ್ಯ ಸಂಗ್ರಾಮದ ತಮ್ಮ ಅನುಭವಗಳನ್ನು ನೆನಪಿಸಿಕೊಂಡು ಶ್ರೀಮತಿ ರಮೇಶ ಚಂದ್ರ ಮತ್ತು ಶ್ರೀಮತಿ ಸರಳಾ ಶರ್ಮ ಹೇಳಿದ್ದು ಹೀಗೆ.

'ದೇಶದ ಸ್ವತಂತ್ರ್ಯಕ್ಕಾಗಿ ನಾವು ಪುರುಷರ ಜತೆಗೂಡಿ ಹೋರಾಡಿದ್ದೇವೆ. ಈ ಹೋರಾಟದಲ್ಲಿ ನಾನು ನಿಮ್ಮ ಜತೆಗಿದ್ದೇನೆ'.

'ದೇಶ ಸ್ವತಂತ್ರವಾಗಿದೆ. ಆದರೆ ಮಹಿಳೆಯರಿಗೆ ಇನ್ನೂ ಮುಕ್ತಿ ಸಿಕ್ಕಿಲ್ಲ'. ಎಂದು ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿ ಹತ್ತು ವರ್ಷ ಜೈಲು ಶಿಕ್ಷೆ ಅನುಭವಿಸಿದ್ದ ಪಶ್ಚಿಮ ಬಂಗಾಳದ ತರುಶ್ ಘೋಷ್ ಹೇಳಿದರು.

ಶ್ರೀಮತಿ ವಿಮಲಾ ದಂಗ್, ಶ್ರೀಮತಿ ಹಮೀದಾ ಹಬೀಬುಲ್ಲಾ, ಶ್ರೀ ಜೈನ್, ಶ್ರೀ ಪ್ರೇಮ್ ಸಾಗರ್ ಮಲ್ಹೋತ್ರ, ಮೊದಲಾದ ಸ್ವಾತಂತ್ರ್ಯ ಹೋರಾಟಗಾರರು ಚಳುವಳಿ ನಿರತರನ್ನುದ್ದೇಶಿಸಿ ಮಾತನಾಡಿದರು.

## ಮೊಳಗಿದ ಕನ್ನಡ ಘೋಷಣೆ

ತಮಿಳುನಾಡು ಮತ್ತು ಕರ್ನಾಟಕದಿಂದ ತೆರಳಿದ ಸುಮಾರು ೨೦೦ಕ್ಕೂ ಹೆಚ್ಚು ಮಹಿಳೆಯರು ಮತ್ತು ಪುರುಷರು ನವೆಂಬರ್ ೨೪ ರಂದು ಹೋರಾಟದಲ್ಲಿ ಭಾಗವಹಿಸಿದ್ದರು.

ಸಮಾನ ಹಕ್ಕಿನ ನಿರಾಕರಣೆ ವಿರುದ್ಧ ಹಾಗೂ ವಿಧೇಯಕವನ್ನು ಅಂಗೀಕರಿಸುವಂತೆ ಒತ್ತಾಯಿಸಿ ಬೀಡಿ ಕಾರ್ಮಿಕರು, ಅಂಗನ ವಾಡಿ ನೌಕರರು ಮೊದಲಾದವರು ತಮಿಳು ಮತ್ತು ಕನ್ನಢದಲ್ಲಿ ಘೋಷಣೆಗಳನ್ನು ಕೂಗಿದರು.

ಕರ್ನಾಟಕದ ನಿಯೋಗ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವ ಎಸ್. ಆರ್. ಬೊಮ್ಮಾಯಿ ಅವರಿಗೆ ಮನವಿ ಪತ್ರವನ್ನು ಅರ್ಪಿಸಿತು.

KRNM/BGS-405 MAG (2) PRB DECR 319-79/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 223೬4೬2,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.೬, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27